ಸಂಪುಟ 24 ಸಂಚಿಕೆ 2
ಜನವರಿ 13, 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ

ಭಾರತ-ಪಾಕ್ ಯುದ್ಧವಲ್ಲ ಸಂಯಮ





ಭಜರಂಗದಳದ ಭಯಾನಕ ತ್ರಿಶೂಲ ದೀಕ್ಷೆ

ಕಾರ್ಮಿಕ ವಂಚಕ ವಿಕ್ರಾಂತ್ ಆಡಳಿತ

ಕ್ಯೂಬಾದ ಕಣಿವೆಯಲ್ಲಿ ತಾಲೀಬಾನರು?!

ನಾಲ್ಕನೇ ಎಡರಂಗ ಸರ್ಕಾರ

ಕೆಲವು ಸಂಸತ್ ಸದಸ್ಯರು ಮತ್ತು ಶಾಸಕರು ಕೂಡ ಬಿಜೆಪಿಯ ಮಾತನ್ನು ಕೇಳಲಿಲ್ಲ. ಅವರು ಪೂರ್ಣವಾಗಿ ಆರ್‌ಎಸ್‌ಎಸ್ ಮತ್ತು ವಿಹೆಚ್‌ಪಿಯ ನಿಯಂತ್ರಣದಲ್ಲಿದ್ದರು. ಇಂಥ ಶಕ್ತಿಗಳು ಗಲಭೆ ನಡೆಸುತ್ತಾರೆ ಹಾಗೂ



ಜ್ಯೋತಿಬಸುರವರಿಂದ ಸತತ ನಾಲ್ಕನೇ ಬಾರಿ ಪ್ರಮಾಣ ವಚನ

ನಿಯಂತ್ರಿಸಲು ಸಾಧ್ಯವಾಗುವಂಥ ಒಂದು ಸಮಯವೂ ಬರುತ್ತದೆ ಎಂಬ ಅಂಶಕ್ಕೆ ನಾವು ಒತ್ತು ನೀಡಿದೆವು. ಉತ್ತರ ಪ್ರದೇಶದ ಫಲಿತಾಂಶ ಭಾರತದ ಜಾತ್ಯಾತೀತ ಶಕ್ತಿಗಳಿಗೆ ಒಂದು ದೊಡ್ಡ ಹೊಡೆತ. ಈ ಬಗ್ಗೆ ನಾವು ಸೂಕ್ತ ಎಚ್ಚರಿಕೆ ನೀಡಿದ್ದವು. ಅದು ಎಷ್ಟು ಸರಿಯಾಗಿತ್ತು ಎನ್ನುವುದು ನಂತರ ಸಾಬೀತಾಯಿತು.

ಬಿಜೆಪಿ ಗುಜರಾತಿನಲ್ಲಿ ಕೂಡ ದೊಡ್ಡ ಸಾಧನೆ ಮಾಡಿತು. ಆದರೆ ಅದು ಮಧ್ಯಪ್ರದೇಶ, ರಾಜಸ್ತಾನ ಮತ್ತು ಹಿಮಾಚಲ ಪ್ರದೇಶದಲ್ಲಿ ದೊಡ್ಡ ಹೊಡೆತ ತಿಂದಿತು. ಹಿಮಾಚಲ ಪ್ರದೇಶದಲ್ಲಿ ಅರ್ಧದಷ್ಟು ಪಾಲನ್ನು ಕಳೆದುಕೊಂಡಿತು. ಮಧ್ಯಪ್ರದೇಶದಲ್ಲಿ 30 ರಲ್ಲಿ ಕೇವಲ 20 ಸ್ಥಾನಗಳಲ್ಲಿ ಗೆಲ್ಲಲು ಸಮರ್ಥ ವಾಯಿತು. ರಾಜಸ್ತಾನದಲ್ಲಿ ಕಾಂಗ್ರೆಸ್ ಬಹುಮತ ಗಳಿಸಿತು. ಈ ಮೂರು ರಾಜ್ಯಗಳ ಜನರು ಬಿಜೆಪಿ ಆಡಳಿತದ ಕಹಿಯನ್ನುಂಡಿದ್ದರು..

ರಾಷ್ಟ್ರೀಯ ರಂಗದ ಗಳಿಕೆ ನಾವು ನಿರೀಕ್ಷಿಸಿದ ಮಟ್ಟದ ಹತ್ತಿರಕ್ಕೂ ಬರಲಿಲ್ಲ. ನಾವು ಅಭೂತಪೂರ್ವ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಈ ದೇಶದ ಸ್ಥಿರತೆಯನ್ನು ನಾಶ ಮಾಡಲು ಪಣತೊಟ್ಟಿರುವ ಸಾಮ್ರಾಜ್ಯಶಾಹಿ ಶಕ್ತಿಗಳ ಪಿತೂರಿಯನ್ನು ಸೋಲಿಸುವುದು ಈಗ ನಮ್ಮ ಮುಖ್ಯ ಸವಾಲು. ರಾಷ್ಟ್ರೀಯ ಏಕತೆ ನಮ್ಮ ಮುಖ್ಯ ಕಾಳಜಿಯಾಗಬೇಕು. ಬಿಜೆಪಿ-ಶಿವಸೇನೆ ಕೂಟದ ಮುಕ್ತ ಓಟಕ್ಕೆ ಅವಕಾಶ ನೀಡಿದರೆ ಅಲ್ಪಸಂಖ್ಯಾತರು ಮುಖ್ಯವಾಹಿನಿಯಿಂದ ಪ್ರತ್ಯೇಕಗೊಳ್ಳುತ್ತಾರೆ. ಐಎಂಎಫ್ ಸಾಲದ ಷರತ್ತುಗಳಿಂದ ಉದ್ಭವಿಸಿರುವ ವಿಷಯಗಳನ್ನು ಸಮರ್ಥವಾಗಿ ಎದುರಿಸುವಂಥ ಪರ್ಯಾಯ ಆರ್ಥಿಕ ಮಾದರಿಯನ್ನು ಕೂಡ ನಾವು ಮುಂದಿಡಬೇಕು. ಎಡಶಕ್ತಿಗಳ ಏಕತೆಯನ್ನು ಇನ್ನಷ್ಟು ಗಟ್ಟಿಗೊಳಿಸುವುದು ಕಾಲದ ಅವಶ್ಯಕತೆಯಾಗಿತ್ತು. ಸಂಸತ್ತಿನಲ್ಲಿ ನಮ್ಮ ಪರಿಮಿತ ಶಕ್ತಿಯನ್ನು ಬಳಸಿಕೊಂಡು ಕೇಂದ್ರ ಸರಕಾರ ರಾಜ್ಯಗಳ ಮೇಲೆ ಆಕ್ರಮಣ ನಡೆಸುವುದನ್ನು ತಡೆಯುವುದು ಕೂಡ ಅಗತ್ಯ. ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನರ್‌ವಿಮರ್ಶಿಸಬೇಕೆಂಬ ಚಳುವಳಿಯನ್ನು ಹೊಸ ಸತ್ವದೊಂದಿಗೆ ನವೀಕರಿಸಬೇಕಿತ್ತು. ಪ್ರತ್ಯೇಕತಾವಾದಿ ಹಾಗೂ ಕೋಮುವಾದಿ ಶಕ್ತಿಗಳ ವಿರೋಧಿ ಶಕ್ತಿಯಾಗಿ ಅದು ಕೆಲಸ ಮಾಡಬೇಕು" ಎಂದು ಕೇಂದ್ರ ಸಮಿತಿ ಹೇಳಿತು.

ಮೇ 20 ರಂದು ಬಂಗಾಳದಲ್ಲಿ ಮತದಾನ ನಡೆಯಿತು. ರಾಜೀವಗಾಂಧಿ ಹತ್ಯೆಯ ಪರಿಣಾಮ ಇಲ್ಲಿರಲಿಲ್ಲ. ರಾಜ್ಯದ 42 ಸ್ಥಾನಗಳಲ್ಲಿ ಎಡರಂಗ 37 ರಲ್ಲಿ ಜಯಗಳಿಸಿತು. ಸಿಪಿಐ(ಎಂ) 27, ಆರ್‌ಎಸ್‌ಪಿ-ನಾಲ್ಕು, ಫಾರ್ವರ್ಡ್‌ಬ್ಲಾಕ್ ಹಾಗೂ ಸಿಪಿಐ ತಲಾ ಮೂರರಲ್ಲಿ ಗೆದ್ದವು. ಕಾಂಗ್ರೆಸ್ ನಾಲ್ಕರಲ್ಲಿ, ಅದರಮಿತ್ರ ಪಕ್ಷ ಜಿಎಸ್‌ಎಲ್‌ಎಫ್ ಡಾರ್ಜಿಲಿಂಗ್ ಸ್ಥಾನದಲ್ಲಿ ಜಯಿಸಿತು. ಎಡ ರಂಗ ಹಾಗೂ ಅದರ ಮಿತ್ರ ಪಕ್ಷ ಜನತಾದಳ ಶೇ 48.13 ಮತಗಳಿಸಿತು. ಕಾಂಗ್ರೆಸ್ ಮತ್ತದರ ಮಿತ್ರರು ಶೇ 36.93 ಮತ. ಅಸೆಂಬ್ಲಿಯಲ್ಲಿ ನಾವು ಶೇ 48.82 ಅವರು ಶೇ 36.45 ಮತ ಗಳಿಸಿದರು.

ನಾಲ್ಕನೇ ಎಡರಂಗ ಸರ್ಕಾರ

ವಿಧಾನಸಭೆಯ 294 ಸ್ಥಾನಗಳಲ್ಲಿ ಎಡರಂಗ 245 ರಲ್ಲಿ ಜಯಭೇರಿ ಬಾರಿಸಿತು. ಈ ಬಾರಿ ಕಳೆದ ಸಲಕ್ಕಿಂತ ಆರು ಸ್ಥಾನ ಕಡಿಮೆಯಾಯಿತು. ಸಿಪಿಐ(ಎಂ) ಒಂದೇ 182 ರಲ್ಲಿ ಗೆದ್ದಿತು. ಕಳೆದ ಸಲದಕ್ಕಿಂತ ಐದು ಸ್ಥಾನ ಕಡಿಮೆಯಿದು. ಆರ್‌ಎಸ್‌ಪಿ 18, ಫಾರ್ವರ್ಡ್ ಬ್ಲಾಕ್-29, ಸಿಪಿಐ-ಆರು, ಎಸ್‌ಪಿ-ನಾಲ್ಕು, ಫಾರ್ವರ್ಡ್ ಬ್ಲಾಕ್ (ಮಾರ್ಕ್ಸಿಸ್ಟ್)-ಎರಡು, ಡಿಎಸ್‌ಪಿ-ಎರಡು ಹಾಗೂ ಆರ್‌ಸಿಪಿಐ ಒಂದು ಸ್ಥಾನದಲ್ಲಿ ಜಯಗಳಿಸಿತು. ವಿಪ್ಲವಿ ಬಾಂಗ್ಲಾ ಕಾಂಗ್ರೆಸ್ ಸ್ಪರ್ಧಿಸಿದ್ದ ಏಕೈಕ ಕ್ಷೇತ್ರದಲ್ಲಿ ಸೋತಿತು. ನಮ್ಮ ಮಿತ್ರ ಪಕ್ಷ ಸಿಆರ್‌ಎಲ್‌ಐಗೆ ನಾವು ಬಿಟ್ಟುಕೊಟ್ಟ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದಿತು. ಇನ್ನೊಂದು ಮಿತ್ರಪಕ್ಷವಾದ ಗೂರ್ಖಾಲೀಗ್ ಕೂಡ ಸ್ಪರ್ಧಿಸಿದ್ದ ಏಕೈಕ ಸ್ಥಾನದಲ್ಲಿ ಸೋತಿತು.

ಕಾಂಗ್ರೆಸ್ 43 ಸ್ಥಾನಗಳಲ್ಲಿ ಗೆದ್ದಿತು. ಇದು ಕಳೆದ ಸಲದಕ್ಕಿಂತ ನಾಲ್ಕು ಹೆಚ್ಚು, ಕಾಂಗ್ರೆಸ್ ಮಿತ್ರರಾದ ಜಾರ್ಖಂಡ್ ಪಕ್ಷ ಒಂದರಲ್ಲಿ, ಜಿಎಸ್‌ಎಲ್‌ಎಫ್ ಮೂರರಲ್ಲಿ ಗೆದ್ದವು. ಎಸ್‌ಯುಸಿಐ ಎರಡು ಸ್ಥಾನಗಳನ್ನು ಉಳಿಸಿಕೊಂಡಿತು.

ಬಿಜೆಪಿಯ ನಿರ್ವಹಣೆ ಅನಿಷ್ಟ ಸೂಚಕ ವಾಗಿತ್ತು. ಆ ಪಕ್ಷ ನಮ್ಮ ರಾಜ್ಯದಲ್ಲಿ ಹಿಂದೆಂದೂ ಅಷ್ಟು ಮತಗಳನ್ನು ಗಳಿಸಿರಲಿಲ್ಲ. 11 ಕ್ಷೇತ್ರಗಳಲ್ಲಿ ಅದು ಎರಡನೇ ಸ್ಥಾನದಲ್ಲಿತ್ತು. ಇನ್ನು ಕೆಲವೆಡೆ ಶೇಕಡ 25 ಕ್ಕೂ ಹೆಚ್ಚು ಮತಗಳನ್ನು ಗಳಿಸಿತು.

ಅಸೆಂಬ್ಲಿ ಚುನಾವಣೆಯಲ್ಲಿ ಚಲಾಯಿತ ಒಟ್ಟು ಮತಗಳಲ್ಲಿ ಬಿಜೆಪಿ ಶೇಕಡ 11.37 ಮತಗಳಿಸಿತು. ಭೀರಭೂಮ್ ಜಿಲ್ಲೆಯಲ್ಲಿ ಗರಿಷ್ಠ 18.99 ಮತ ಪಡೆಯಿತು. ಪಕ್ಷ ಅಪಾರ ಹಣವನ್ನು ಖರ್ಚು ಮಾಡಿತು. ಶಿಕ್ಷಿತ ಮಧ್ಯಮವರ್ಗದ ಒಂದು ಭಾಗವನ್ನು ಸೆಳೆದುಕೊಳ್ಳಲು ಅದು ಯಶಸ್ವಿಯಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ಅದುವರೆಗೆ ಕಾಂಗ್ರೆಸ್ ಪಕ್ಷದ ಮತಬ್ಯಾಂಕ್‌ನ ಭಾಗವಾಗಿದ್ದ ಕೆಲವು ಭೂಮಾಲೀಕ ವರ್ಗದವರು ಕೂಡ ಬಿಜೆಪಿಗೆ ಬೆಂಬಲ ನೀಡಿದರು. ಈ ಬಾರಿ ನಮ್ಮ ಪ್ರಚಾರ ದುರ್ಬಲವಾಗಿತ್ತು. ಅದನ್ನು ಬಿಜೆಪಿ ತನ್ನ ಅನುಕೂಲಕ್ಕೆ ಬಳಸಿಕೊಂಡಿತು.

ಏನಿದ್ದರೂ ರಾಷ್ಟ್ರೀಯ ಪ್ರವೃತ್ತಿಯನ್ನು ಗಮನಿಸುವಾಗ ಬಂಗಾಳದಲ್ಲಿ ಸರಕಾರ ವಿರೋಧಿ ಭಾವನೆಯೇನೂ ಕೆಲಸ ಮಾಡಲಿಲ್ಲ. ಎಡರಂಗ ಸತತ ನಾಲ್ಕನೇ ಬಾರಿಗೆ ಅಧಿಕಾರಕ್ಕೆ ಬಂತು. ರಾಜ್ಯದಲ್ಲಿ ಇದು ಒಂದು ದಾಖಲೆ.

ಕೈಗಾರಿಕೆಗಳು ರೋಗಗ್ರಸ್ತವಾಗಿದ್ದರೂ ಕೈಗಾರಿಕೆ ವಲಯದಲ್ಲಿ 75 ಸ್ಥಾನಗಳ ಪೈಕಿ ಅವನ್ನು ನಾವು ಗೆದ್ದುಕೊಂಡೆವು. ಬರ್ದಮಾನ್, ಬಂಕುರಾ, ಪುರುಲಿಯಾ ಮತ್ತು ಕೂಚ್‌ಬಿಹಾರ ಜಿಲ್ಲೆಗಳಲ್ಲಿ ಕಾಂಗ್ರೆಸ್‌ನದ್ದು ಶೂನ್ಯ ಸಂಪಾದನೆ. ವಿಧಾನಸಭೆಯಲ್ಲಿ ಎಡರಂಗ 12,07,620 ಹೆಚ್ಚಿಗೆ ಮತಗಳನ್ನು ಗಳಿಸಿದರೂ ಲೋಕಸಭೆಗೆ ಸಂಬಂಧಿಸಿದಂತೆ 8,63,95 ಕಡಿಮೆ ಮತಗಳನ್ನು ಪಡೆಯಿತು. ಬಿಜೆಪಿ ತಲೆ ಎತ್ತಿದ ವಿಚಾರವನ್ನು ನಾವು ಚರ್ಚಿಸಿ ಅದನ್ನು ಎದುರಿಸುವ ರಾಜಕೀಯ ಯೋಜನೆಗಳನ್ನು ರೂಪಿಸಿದೆವು. ಕೇಸರಿಯ ಪಡೆಯ ಪ್ರಭಾವ ಬೆಳೆಯಬಾರದೆಂಬ ನಮ್ಮ ಪ್ರಯತ್ನಗಳ ಫಲ ಮುಂದಿನ ಚುನಾವಣೆಯಲ್ಲಿ ಪ್ರತಿಬಿಂಬಿತ ವಾಯಿತು.

ಜೂನ್ 25 ರಂದು ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಿ ನಾನು ಪ್ರಮಾಣವಚನ ಸ್ವೀಕರಿಸಿದೆ. ಪತ್ರಕರ್ತರು ದಾಖಲೆಗಳ ಬಗ್ಗೆ ಮಾತನಾಡತೊಡಗಿದರು. ಮುಂದೆ ಐದನೇ ಬಾರಿಯೂ ನಾವು ಜಯಶಾಲಿಯಾದೆವು. ಇದು ವೈಯಕ್ತಿಕ ವಿಜಯವಾಗಿರಲಿಲ್ಲ. ನಾನು ಪಕ್ಷದ ನಿರ್ದೇಶನಗಳಿಗೆ ತಕ್ಕಂತೆ ಕೆಲಸ ಮಾಡಿದೆ ಅಷ್ಟೆ. ಜನರು ಪದೇ ಪದೇ ನಮ್ಮಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸಿದ್ದು ಅತಿ ಮಹತ್ವದ ವಿಚಾರವಾಗಿತ್ತು. ಪ್ರತಿಬಾರಿಯೂ ನಮ್ಮ ಜವಾಬ್ದಾರಿ ಹೆಚ್ಚುತ್ತಿತ್ತು. ಭವಿಷ್ಯದ ಕಾರ್ಯಭಾರಕ್ಕೂ ನಾವು ಸಜ್ಜಾಗಬೇಕಾಗುತ್ತಿತ್ತು.

ಏನಿದ್ದರೂ ಕೇರಳದಲ್ಲಿ ಸ್ವಲ್ಪ ಹಿನ್ನಡೆಯಾಯಿತು. ಕೋಮುವಾದಿ ಶಕ್ತಿಗಳ ವಿರುದ್ಧ ನಿರಂತರ ಹೋರಾಟ ನಡೆಸಿದರೂ ಹಾಗೂ ಅನೇಕ ಜನಪರ ಕಾರ್ಯಕ್ರಮಗಳನ್ನು ಕೈಗೊಂಡರೂ ಎಲ್‌ಡಿಎಫ್ ಸರಾಕರ ಸೋತಿತು. ತ್ರಿಪುರಾದಲ್ಲಿ ನಮ್ಮ ಏಳು ಸಂಗಾತಿಗಳನ್ನು ಕಾಂಗ್ರೆಸ್ಸಿನವರು ಕೊಂದರು. ಅಲ್ಲಿನ ಚುನಾವಣೆ ಒಂದು ಅಣಕವಾಯಿತಷ್ಟೆ. ಚುನಾವಣೆ ಆಯೋಗ ನಮ್ಮ ಮನವಿಗಳನ್ನು ಕಿವಿಗೇ ಹಾಕಿಕೊಳ್ಳಲಿಲ್ಲ. ಜೂನ್ 22 ರಂದು ಚುನಾವಣೆಯನ್ನು ಬಹಿಷ್ಕರಿಸುವ ನಿರ್ಧಾರವನ್ನು ಪ್ರಕಟಿಸದೆ ನಮಗೆ ಅನ್ಯ ಮಾರ್ಗವಿರಲಿಲ್ಲ.

ನರಸಿಂಹರಾವ್ ನೀತಿ

ದೇಶದ ಆರ್ಥಿಕ ನೀತಿ ನರಸಿಂಹರಾವ್ ಸರಕಾರದ ಮೊದಲ ಬಲಿಪಶುವಾಯಿತು. ಆರ್ಥಿಕತೆಯನ್ನು ಮುಕ್ತಗೊಳಿಸಬೇಕೆಂಬ ಒತ್ತಡ ಅತಿಯಾಗಿತ್ತು. ರಾಜೀವಗಾಂಧಿ ಕಾಲದಿಂದಲೇ ಅದು ಕಂಡುಬಂದಿತ್ತು. ನಾವು ದೇಶವನ್ನು ಐಎಂಎಫ್‌ಗೆ ಮಾರಾಟ ಮಾಡುತ್ತಿದ್ದೆವು. ಬೇಕಾದಷ್ಟು ಪರ್ಯಾಯ ಮಾರ್ಗಗಳಿದ್ದರೂ ನರಸಿಂಹರಾವ್ ಸರಕಾರ ಅಧಿಕಾರಕ್ಕೆ ಬಂದ ನಾಲ್ಕೇ ವಾರಗಳಲ್ಲಿ ದೇಶವನ್ನು ದಾರಿದ್ರ್ಯದ ಅಂಚಿಗೆ ತಳ್ಳಿತು.

(ಮುಂದುವರಿಯುವುದು)


ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 85



ವಿಜಯದ ರ್ಯಾಲಿ

ಎನ್.ಕೆ.ಕುರಿತ ವಿಶೇಷ ಪುರವಣಿ

ಸಂಗಾತಿ ಎನ್.ಕೆ.ಯವರಿಗೆ ಐಕ್ಯರಂಗ ವಿಶಿಷ್ಟವಾದ ರೀತಿಯಲ್ಲಿ ತನ್ನ ಶ್ರದ್ಧಾಂಜಲಿ ಸಲ್ಲಿಸಲು ನಿರ್ಧರಿಸಿದೆ. ಅದರ ಬದುಕು, ಚಳುವಳಿಗೆ ಕೊಡುಗೆ, ನೆನಪುಗಳು ಒಳಗೊಂಡ ಒಂದು ವಿಶೇಷ ಪುರವಣಿಯನ್ನು ಪ್ರಕಟಿಸಲಾಗುವುದು. ನಿಮ್ಮಲ್ಲಿರುವ ಅಮೂಲ್ಯ ಫೋಟೋಗಳು, ಅವರು ಹೇಳಿದ ವಿಶೇಷ ಅನುಭವಗಳು, ಒಡನಾಟದ ನೆನಪುಗಳನ್ನು ಬರೆದು ತಪ್ಪದೇ ಕಳಿಸಿ.

- ಸಂ.

ಈ ವಾರ ಕರ್ನಾಟಕ ಹಿಂದುನೋಟ



ಎಸ್.ವೈ.ಗುರುಶಾಂತ್

ಬೆಂಗಳೂರಿನಲ್ಲಿ ಬಂಡವಾಳಗಾರರ ಮೇಳ



ಹೂವಿನೊಂದಿಗ ನಾರು - ಸ್ವರ್ಗಕ್ಕೇರುತ್ತದೆ ಎಂದು ನಂಬಿರುವ ಕೃಷ್ಣ

ಬೆಂಗಳೂರು ವಿಶ್ವದ ಬಂಡವಾಳಗಾರರಿಗಾಗಿ ಇನ್ನೊಮ್ಮೆ ಸಿಂಗಾರಗೊಂಡಿದೆ. `CII ಪಾರ್ಟನರ್‌ಶಿಪ್ ಶೃಂಗಸಭೆ'ಯೆಂದು ಕರೆಯಲಾಗುತ್ತಿರುವ ಈ ಸಭೆಯಲ್ಲಿ 15 ದೇಶಗಳು 1500 ಪ್ರತಿನಿಧಿಗಳು ಪಾಲ್ಗೊಳ್ಳಲಿದಾರೆಂದು ತಿಳಿದುಬಂದಿದೆ. ಇದಕ್ಕಾಗಿ ಬ್ರಿಟಿಶ್ ಪ್ರಧಾನಿ ಟೋನಿಬ್ಲೇರ್ ಬಂದಿಳಿದಿದ್ದಾರೆ. ಭಾರತದ ಬಂಡವಾಳಗಾರರು ಮತ್ತು ವಿಶ್ವದ ಬಂಡವಾಳಗಾರರೊಂದಿಗೆ ಕೈಗಾರಿಕಾ ಅಭಿವೃದ್ಧಿಗೆ ಬಂಡವಾಳ ಹೂಡಿಕೆಯಲ್ಲಿ ಪಾಲುಗಾರರಾಗುವುದರ ಕುರಿತ ಶೃಂಗಸಭೆ ಚರ್ಚಿಸಲಿದೆ. ಜನವರಿ 5 ರಂದು ಆರಂಭಗೊಳ್ಳುವ ಸಭೆ ಏಳು ದಿನಗಳು ಜರುಗಲಿದ್ದು ಭಾರತ-ಜಗತ್ತು, ಭಾರತ-ಏಶ್ಯಾ, ರಾಜ್ಯಗಳತ್ತ ಗಮನದಂತಹ ಐದು ಮೂಲ ಸ್ತರಗಳಲ್ಲಿ ಚರ್ಚೆಯಾಗಲಿದೆ.

ಯಥಾರೀತಿ ಕೃಷ್ಣರವರು ಬಂಡವಾಳಗಾರರ ಈ ಸೇವೆಯನ್ನೇ ತಮ್ಮ ಸುಕೃತವೆಂದು, ಅವರ ಸರ್ಕಾರದ ಸಾಧನೆಗಳನ್ನು ಗಮನಿಸಿಯೇ ಇದು ಜರುಗಲಿದೆಯೆಂದು ಕೊಚ್ಚಿಕೊಳ್ಳತೊಡಗಿದ್ದಾರೆ. ಬ್ರಿಟನ್‌ನಂತಹ ಬೃಹತ್ ರಾಷ್ಟ್ರಗಳ ಗಮನ ತನ್ನತ್ತ ತಿರುಗಿದೆಯೆಂದು ಹೇಳುತ್ತಿದ್ದಾರೆ. ತನ್ನ ಅಧಿಕಾರದ ಅವಧಿಯುದ್ದಕ್ಕೂ ವಿದೇಶಿ ಬ್ಯಾಂಕ್‌ಗಳಿಂದ ಸಾಲ ತಂದಿರುವುದೇ ಸಾಧನೆಯೆಂಬಂತೆ ಬಡಾಯಿ ಹೊಡೆಯುವ ಕೃಷ್ಣರವರು ಈ ಮೇಳದ ನಂತರ ಕರ್ನಾಟಕದಲ್ಲಿ ಬಹಳಷ್ಟು ಹೂಡಿಕೆ ಮತ್ತು ವಿಶ್ವ ಉದ್ಯಮದಲ್ಲಿ ಪಾಲುದಾರಿಕೆ ಸಿಗಲಿದೆಯೆನ್ನುತ್ತಿದ್ದಾರೆ.

ಕೃಷ್ಣರ ಈ ಸರ್ಕಾರ ಈಗಿನ ಎರಡು ವರುಷಗಳ ಅವಧಿಯಲ್ಲಿ ಆಕರ್ಷಿಸಿದ ಬಂಡವಾಳ 9923 ಕೋಟಿ ರೂಪಾಯಿಗಳು. ಆದರೆ ಇದಕ್ಕಾಗಿ ಆ ಸಂಸ್ಥೆಗಳಿಗೆ ತೆತ್ತ ಬೆಲೆ 6287 ಕೋಟಿ ರೂಪಾಯಿಗಳ ತೆರಿಗೆ ವಿನಾಯಿತಿ! ಬಂಡವಾಳಗಾರರ ಕಾಲು ಹಿಡಿಯಲು ಕೃಷ್ಣರವರ ಸರ್ಕಾರ ಜನತೆಗೆ ಎಂತಹ ವಂಚನೆ ಮಾಡುವ ಸ್ಥಿತಿಗೂ ಹೋಗಿದೆ, ರಾಜ್ಯದ ಜನತೆಯನ್ನು ಬಲಿಯಾಗಿ ತಳ್ಳಲಿದೆಯೆಂಬುದಕ್ಕೆ ಇದಕ್ಕಿಂತ ಇನ್ನೊಂದು ಉದಾಹರಣೆ ಬೇಕೆ?

ಈ ಶೃಂಗಸಭೆಯ ನಂತರದಲ್ಲಿ ಮತ್ತೆ ವಿಶ್ವದ ಬಂಡವಾಳಗಾರರು ದೇಶದ ಗುತ್ತೇದಾರಿಗಳು ಅದೆಂತಹ ಒಪ್ಪಂದಗಳಿಗೆ ಬರಲಿದ್ದಾರೋ ಕೇಂದ್ರ-ರಾಜ್ಯ ಸರ್ಕಾರಗಳು ಇವರ ತಾಳಕ್ಕೆ ಕುಣಿದು, ದೇಶದ ಜನತೆ-ಆಸ್ತಿಯನ್ನು ಇನ್ನು ಹೇಗೆ ಮುಕ್ಕಲಿದೆಯೆಂಬುದು ನಿರೀಕ್ಷಿತ, ಆದರೆ ವಿವರಗಳಿಗೆ ಕಾದು ನೋಡಬೇಕೆ?.

ಕೈಯಾಡಿಸುವ 'ಪರಿವಾರ'


ಈ ವಾರ ರಾಜ್ಯದ ಹಲವೆಡೆ ಕ್ಷುಲ್ಲಕ ಕಾರಣಗಳ ನೆಪದಲ್ಲಿ ಕೋಮುಗಲಭೆಗಳು ಸ್ಫೋಟಗೊಂಡ ಹಲವು ಘಟನೆಗಳು ಜರುಗಿವೆ. ಕೊಡಗಿನಲ್ಲಿ ಹುಟ್ಟಿಸಿದ ಕಿಚ್ಚು ನಿಧಾನವಾಗಿ ಆರುತ್ತಿರುವಂತೆ ಮತ್ತೆ ದ್ವೇಷದ ತಿದಿಯೂದಲು ಸಂಘ ಪರಿವಾರ ಸೌಹಾರ್ದತೆಯ ಶಕ್ತಿಗಳ ವಿರುದ್ಧ ಅಪಪ್ರಚಾರದ ಧಾಳಿ ಆರಂಭಿಸಿದೆ. ಚಿಕ್ಕಮಗಳೂರಿನ ಆಲ್ದೂರಿನಲ್ಲಿ ವೈಯಕ್ತಿಕ ದ್ವೇಷಗಳಿಗಾಗಿ ಹಾಗೂ ಬಿಜೆಪಿ ಯುವನಾಯಕನ ಮೇಲೆ ಕ್ರಿಮಿನಲ್ ಒಬ್ಬನು ಆಕ್ರಮಣಗೈದು ನಡೆಸಿದ ಕೊಲೆ ಯತ್ನವನ್ನು ಬಳಸಿ ಅಲ್ಪಸಂಖ್ಯಾತರ ಗುಡಿಸಲುಗಳಿಗೆ ಬೆಂಕಿ ಹಚ್ಚಿ ಆಸ್ತಿ ಹಾನಿ ಮಾಡಿ ಕೋಮುಗಲಭೆ ಎಬ್ಬಿಸಲಾಗಿದೆ.

ಕಿತ್ತೂರಿನಲ್ಲಿ ಹುಡುಗಿಯೊಬ್ಬಳನ್ನು ಹುಡುಗನೊಬ್ಬ ಚುಡಾಯಿಸಿ, ಹೊಡೆದನೆಂಬ ಕಾರಣದಿಂದ ದ್ವೇಷ ಹತ್ತಿ, ಉಭಯ ಕೋಮುಗಳ ನಡುವೆ ಘರ್ಷಣೆ ನಡೆಯಿತೆಂದು ವರದಿಯಾಗಿದೆ: ಭಜರಂಗದಳ ಘರ್ಜಿಸಿದೆ. ಹಾಗೆ ಹಳಿಯಾಳದಲ್ಲಿಯೂ ಇಂತಹ ಘಟನೆ ಬಗ್ಗೆ ವಿವರಗಳಿವೆ.

ಇಂತಹ ಕ್ಷುಲ್ಲಕ ಕಾರಣಗಳನ್ನು ಬಳಸಿ ಗಲಭೆಗಳನ್ನು ವ್ಯಾಪಕಗೊಳಿಸುವ ಪರಿಯನ್ನು ನಾವು ಕಾಣುತ್ತಿದ್ದೇವೆ. ಭಜರಂಗದಳ ಅಥವಾ ವಿಹೆಚ್‌ಪಿ ಪಡೆ ಇಂತಹ ಘಟನೆಗಳನ್ನು ಬಳಸಿಕೊಳ್ಳಲು ಹಾಗೂ ಹುಟ್ಟುಹಾಕಲು ಉತ್ಸುಕರಾಗಿರುವುದು ಕಂಡು ಬರುವ ಅಂಶ. ಭಯೋತ್ಪದನೆ ಕುರಿತ ವ್ಯಾಖ್ಯಾನಗಳು ಅವರ ಹಾಗೂ ಟಿ.ವಿ., ಪತ್ರಿಕೆಗಳಂತಹ ಮಾಧ್ಯಮಗಳ ಮೂಲಕ ತೀವ್ರ ತರವಾದ ಕೋಮು ದ್ವೇಷದ ಪ್ರಚಾರವೂ ಮನಸ್ಸುಗಳನ್ನು ವಿಷಮಯಗೊಳಿಸುತ್ತಿದೆ. ಒಂದು ರೀತಿಯಲ್ಲಿ ಯಾವಾಗಲೂ ಸ್ಫೋಟಗೊಳ್ಳುವ ಸಿಡಿಮದ್ದಿನ ಕೋಟೆಯಂತೆ ಮನಸ್ಸುಗಳನ್ನು ಸಿದ್ಧಗೊಳಿಸಲಾಗುತ್ತಿದೆ.

ಈ ಅವಧಿಯಲ್ಲಿ ಬಾಬಾ ಬುಡನ್‌ಗಿರಿಯ ಸಂದರ್ಭದಲ್ಲಿ ಭಜರಂಗದಳದ ಆಟಾಟೋಪ ನಡೆಸಲು ಯತ್ನಿಸಿದರೂ ಆಡಳಿತದ ಬಿಗಿಕ್ರಮ ಹಾಗೂ ಜನತೆಯ ಸೀಮಿತ ಪ್ರತಿಕ್ರಿಯೆಯಿಂದಾಗಿ ಅಷ್ಟಾಗಿ ನಡೆದಿಲ್ಲ. ಆದರೆ ಅದನ್ನು ಮತ್ತೆ ಮತ್ತೆ ಕೆದಕಲು ಸಿದ್ಧವಾಗಿಯೇ ಇದ್ದಾರೆ. ಕರ್ನಾಟಕದಲ್ಲಿ ಈ ಭಜರಂಗದಳದ ಚಟುವಟಿಕೆಗಳು ವ್ಯಾಪಕಗೊಳ್ಳುತ್ತಿರುವ ವರದಿಗಳಿವೆ. ಬಾಗಲಕೋಟೆ-ಬಿಜಾಪುರ , ಬೆಳಗಾಂ, ಶಿವಮೊಗ್ಗ, ದ.ಕ.ದಂತಹ ಕಡೆ ಹಳ್ಳಿ ಹಳ್ಳಿಗಳಲ್ಲಿ ಈ ತಂಡಗಳು ತಲುಪುತ್ತಿವೆ. ಅಲ್ಲಲ್ಲಾ ವರದಿಯಾದಂತೆ ಈ ಧರ್ಮಕಾಯುವ ಮುಸುಕಿನಲ್ಲಿ ಬಹುತೇಕ ಕ್ರಿಮಿನಲ್‌ಗಳು, ನಿರುದ್ಯೋಗಿ ಯುವಜನರನ್ನು ಹೆಚ್ಚು ತೊಡಗಿಸಲಾಗುತ್ತಿದೆ. ಅವರನ್ನು ಆಕ್ರಮಣಕಾರಿಯಾಗಿ ಪ್ರಚೋದಿಸಲಾಗುತ್ತಿದೆ.

ರಾಜ್ಯದಲ್ಲಿಯೂ ಆರ್‌ಎಸ್‌ಎಸ್ ತನ್ನ ಚಟುವಟಿಕೆಗಳನ್ನು ಇನ್ನೂ ಚುರುಕುಗೊಳಿಸಿದೆ.



ಎಲ್ಲಾ ಜಿಲ್ಲಾ ನಗರಗಳಲ್ಲಿ ಪಥ ಸಂಚಲನದಂತಹುಗಳನ್ನು ನಡೆಸುತ್ತಿದೆ. ದೇಶದ ಐಕ್ಯತೆ, ಸೌಹಾರ್ದತೆಯ ಹೆಸರಿನಲ್ಲಿ (!) ಆರ್‌ಎಸ್‌ಎಸ್ ರಾಜ್ಯಮಟ್ಟದ 'ಸಮರಸ' ಶಿಬಿರವನ್ನು ಬೆಂಗಳೂರಿನಲ್ಲಿ ಸಂಘಟಿಸುತ್ತಿದೆ. ಇದರಲ್ಲಿ 45000 ಕಾರ್ಯಕರ್ತರು ಭಾಗವಹಿಸಲಿದ್ದಾರಂತೆ.

ಉದಾರೀಕರಣ, ಜಾಗತೀಕರಣದ ನೀತಿಗಳ ವಿರುದ್ಧ ಕೇಂದ್ರ ಸರ್ಕಾರದ ನೀತಿಗಳು ದುಷ್ಪರಿಣಾಮಗಳ ಎದುರು ಜನತೆ ಅತೃಪ್ತಿಗೊಳ್ಳುತ್ತಿರುವಾಗ ಅದನ್ನು ರಾಜ್ಯದಲ್ಲಿ ಹಾಗೂ ದೇಶದಲ್ಲಿ ಕೋಮುಸೌಹಾರ್ದತೆಯನ್ನು ಮುರಿಯಲು, ಕೋಮುದ್ವೇಷ ಹೊತ್ತಿಸಲು ಸಂಘ ಪರಿವಾರ, ಹಲವು ಯತ್ನಗಳಲ್ಲಿ ತೊಡಗಿದೆ. ಒಂದೆಡೆ ರಾಜ್ಯ ಸರ್ಕಾರ, ಹಾಗೂ ಜನತೆ ಇದನ್ನು ದಿಟ್ಟವಾಗಿ ಎದುರಿಸಬೇಕಿದೆ.

ಹೆಗಡೆ-ಗೌಡರ ಭೇಟಿ ಮುಂದೇನು?

ಹೊಸ ವರುಷದ ಆರಂಭದಲ್ಲೇ ಒಂದು ಹೊಸ ಸುದ್ದಿ. ಅದು ಹಲವು ವರುಷಗಳ ನಂತರ ದೇವೇಗೌಡ ಮತ್ತು ಹೆಗಡೆಯವರ ಮುಖಾಮುಖಿ ಭೇಟಿಯ ಘಟನೆ. ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದ ರಾಮಕೃಷ್ಣ ಹೆಗಡೆಯವರನ್ನು ಖುದ್ದಾಗಿ ದೇವೇಗೌಡರು ವಿಚಾರಿಸಿ, 45 ನಿಮಿಷಗಳ ಕಾಲ ಚರ್ಚಿಸಿದ್ದಾರೆ. ಇದು ಎರಡೂ ಬಣಗಳ ವಿಲೀನ ಬಯಸುತ್ತಿರುವ ಆ ಪಕ್ಷಗಳ ಸಾವಿರಾರು ಕಾರ್ಯಕರ್ತರಿಗೆ ಸಂತೋಷ ತಂದಿದೆಯಂತೆ.

ಈ ಭೇಟಿಯನ್ನು ಕನಕಪುರ ಪಾರ್ಲಿಮೆಂಟ್ ಉಪ ಚುನಾವಣೆಯ ಹಿನ್ನೆಲೆಯಲ್ಲಿ ಮಹತ್ವದೆಂದು ಬಣ್ಣಿಸಲಾಗುತ್ತಿದ್ದರೂ, ಈಗಲಾದರೂ ಎರಡೂ ಬಣಗಳಲ್ಲಿ ಒಂದು ತಿಳುವಳಿಕೆ ಮೂಡುವುದು ಅತ್ಯಗತ್ಯ. ಈ ವಿಲೀನ ಕರ್ನಾಟಕದಲ್ಲಿ ಹಾಗೂ ರಾಷ್ಟ್ರದಲ್ಲಿ ಮೂರನೆಯ ಪರ್ಯಾಯ ಶಕ್ತಿಯನ್ನು ಬಲಗೊಳಿಸುವ ಕ್ರಿಯೆಗೆ ಸಹಕಾರಿ. ಆದ್ದರಿಂದ ಮೂಲಭೂತ ಪ್ರಶ್ನೆಗಳ ಆಧಾರದಲ್ಲಿ ಮಾತುಕತೆಗೆ ಚಾಲನೆ ದೊರೆಯುವುದು ಸ್ವಾಗತಾರ್ಹ. ಅಂದರೆ ಕನಕಪುರ ಉಪಚುನಾವಣೆಯತ್ತ ಕಣ್ಣಿರುವಾಗಲೇ ಜನತಾದಳ (ಎಸ್) ಪ್ರತಿಪಾದಿಸುತ್ತಾ ಬಂದಿರುವಂತೆ ಎನ್‌ಡಿಎ ಕೂಟದಿಂದ ಜೆಡಿ(ಯು) ಹೊರಬರಬೇಕೆಂಬ ನಿಲುಮೆಯನ್ನೇ ಆಧರಿಸುವುದು ಮಾತ್ರವೇ ಸರಿಯಾದ ಕ್ರಮ. ಇದರಲ್ಲಿ ಚಂಚಲತೆಗೆ ಅವಕಾಶ ಬೇಕಾಗಿಯೇ ಇಲ್ಲ. ಈ ದಿಕ್ಕಿನಲ್ಲಿ ಎರಡೂ ಬಣಗಳ ನಡುವಿನ ಸಂವಾದ ಸಾಗಲಿ.

ವಿಕ್ರಾಂತ್ ಆಡಳಿತ ಮಂಡಳಿ ಹೆಚ್ಚೆ ಹೆಚ್ಚಾಗೂ ಕಾರ್ಮಿಕರನ್ನು ವಂಚಿಸುತ್ತಿದೆ. ನ್ಯಾಯಾಲಯದ ಆದೇಶ ಉಲ್ಲಂಘನೆ ಹಾಗೂ ಅಸಾಧ್ಯವಾದ ಸುಲಿಗೆಯ ಸೂಚನೆಗಳನ್ನು ಇಡುತ್ತಿದೆ. ಈ ವಂಚಕತನಗಳನ್ನು ವಿವರಿಸುವ, ಕಾರ್ಮಿಕರ ಹೋರಾಟ ಪರಿಚಯಿಸುವ ಲೇಖನ

ಕಾರ್ಮಿಕರನ್ನು ವಂಚಿಸುತ್ತಿರುವ ವಿಕ್ರಾಂತ್ ಆಡಳಿತ

1980 ರಲ್ಲಿ ಮೈಸೂರಿನ ವಿಕ್ರಾಂತ್ ಟೈರ್ಸ್ ಕಾರ್ಖಾನೆ ಸಾರ್ವಜನಿಕ ಸಂಸ್ಥೆಯಾಗಿ ಉತ್ಪಾದನೆ ಪ್ರಾರಂಭಿಸಿತು. 1987 ರ ಮೇ ವರೆಗೆ ದ್ವಿಚಕ್ರವಾಹನಗಳ ಬಿಟ್ಟು ಬೇರೆಲ್ಲಾ ವಾಹನಗಳ ಟೈರು, ಟ್ಯೂಬ್ ಮತ್ತು ರೆಡಿಯಂ ಟೈರನ್ನು ಉತ್ಪಾದಿಸುತ್ತಿತ್ತು. 1997 ರಲ್ಲಿ ಕಾರ್ಖಾನೆಯನ್ನು ಆಧುನೀಕರಣಗೊಳಿಸಹೊರಟ ಆಡಳಿತ ಮಂಡಳಿ ಜೆ.ಕೆ.ಐ ಕಂಪನಿ ಸಹಯೋಗ ಮಾಡಿಕೊಂಡಿತು. ಕೆಎಸ್ಐಎಸ್ ಐಡಿಸಿ ಕನಿಷ್ಠ ಶೇ 26 ಶೇರುಗಳನ್ನು ಉಳಿಸಿಕೊಂಡು ಮಾರಾಟ ಮಾಡಿದ ಮೇಲೆ ಅಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸ್ಥಿತಿ ದಿನನಿತ್ಯ ಡೋಲಾಯಮಾನದಲ್ಲಿದೆ.

ಕಾರ್ಖಾನೆ JKI ನವರಿಗೆ ಹಸ್ತಾಂತರಗೊಂಡಾಗ ಇದ್ದ 3 ಸಾವಿರ ಕಾರ್ಮಿಕರ ಸಂಖ್ಯೆ ಈಗ 2500 ಕ್ಕೆ ಇಳಿದಿದೆ. ಆಧುನೀಕರಣದ ಹೆಸರಿನಲ್ಲಿ ಜೆಕೆಐ ಹಳೆಯ ಯಂತ್ರಗಳನ್ನು ತಂದು ಬಣ್ಣ ಬಳಿಸಿ ಹೊಸ ಯಂತ್ರ ಜೋಡಿಸಿದ್ದೇವೆಂದು ಅದಕ್ಕಾಗಿ ಈಗಾಗಲೇ 218 ಕೋಟಿ ರೂ. ವೆಚ್ಚ ಮಾಡಲಾಗಿದೆ ಎನ್ನುತ್ತಿದೆ.

ಕಂಪನಿ ವಹಿಸಿಕೊಂಡ ಮೊದಲಮೂರು ವರ್ಷಗಳಲ್ಲಿ 19,17,45 ಕೋಟಿ ರೂ. ಲಾಭ ಗಳಿಸಿದೆ. ಜೆಕೆಐ 1999 ರ ಅಕ್ಟೋಬರ್ ನಿಂದ ಕಾರ್ಮಿಕರ ವೇತನ ಒಪ್ಪಂದ ಬಾಕಿ ಉಳಿಸಿದೆ. 1998 ರಲ್ಲಿ ಆಡಳಿತ ವರ್ಗ ಪ್ರತಿ ಬೇಡಿಕೆಯನ್ನು ಕಾರ್ಮಿಕ ಸಂಘಕ್ಕೆ ಕಾರ್ಮಿಕರ ಕಡಿತ, ಹೆಚ್ಚಿನ ಉತ್ಪಾದನೆಗೆ ಪಟ್ಟಿ ಸಲ್ಲಿಸಿತು. 98 ಡಿಸೆಂಬರ್‌ನಲ್ಲಿ ಕಾರ್ಮಿಕರ ಬೇಡಿಕೆ ಪಟ್ಟಿ ಪಡೆದ ಆಡಳಿತ ವರ್ಗ 8 ತಿಂಗಳಲ್ಲಿ ಬೇಡಿಕೆ ಈಡೇರಿಸುವ ಭರವಸೆ ನೀಡಿತ್ತು. ಆದರೆ, ಕಾರ್ಮಿಕರ ಬೇಡಿಕೆ ಈಡೇರಿಸದೆ ಸಾಧ್ಯವಿಲ್ಲದ ಉತ್ಪಾದನಾ ಪರಿಮಾಣಗಳನ್ನು ಹೇರತೊಡಗಿತು. ಇದಕ್ಕೆ ಒಪ್ಪಿದರೆ ಒಪ್ಪಂದ ಎಂಬ ಹಠಮಾರಿ ಧೋರಣೆ ತಳೆಯಿತು.

ಎರಡು ತಿಂಗಳ ಮುಷ್ಕರ

ಕಾರ್ಮಿಕ ಬೇಡಿಕೆಗಳಿಗೆ ಸ್ಪಂದಿಸಬೇಕಾದ ಆಡಳಿತ ವರ್ಗ ಒಪ್ಪಂದಕ್ಕೆ ಕಾರ್ಮಿಕ ಸಂಘ ಅಡ್ಡಿಯಾಗಿದೆ ಎಂದು ಆರೋಪಿಸಿ ಸಂಘ ಒಡೆಯುವ ಹುನ್ನಾರ ನಡೆಸಿತು. ಸಂಘವು ಕಾರ್ಮಿಕರ ಸಭೆ ಕರೆದು ಆಡಳಿತ ವರ್ಗದ ಧೋರಣೆ ಬಗ್ಗೆ ಹಾಗೂ ಬೇಡಿಕೆ ಈಡೇರಿಸಿಕೊಳ್ಳಲು ಹಲವಾರು ರೀತಿಯ ಒತ್ತಡಗಳನ್ನು ಹೇರಿತು. ಇದಕ್ಕೂ ಜಗ್ಗದೇ ಆಡಳಿತ ವರ್ಗದ ಹಠಮಾರಿತನಕ್ಕೆ ಬೇಸತ್ತ ಸಂಘ ಜನವರಿ 11, 2001 ರ ಸರ್ವಸದಸ್ಯರ ಸಭೆಯ ತೀರ್ಮಾನದಂತೆ ಎರಡೂ ತಿಂಗಳ ಕಾಲ ಮುಷ್ಕರವನ್ನು ನಡೆಸಿತು. ಈ ಮಧ್ಯೆ ತಮ್ಮ ಸಮಸ್ಯೆಗಳತ್ತ ಸರ್ಕಾರದ ಗಮನ ಸೆಳೆಯಲು ಫೆಬ್ರವರಿ 16 ರಂದು ವಿಧಾನಸೌಧ ಚಲೋ ನಡೆಸಿತು. ಆ ಸಂದರ್ಭದಲ್ಲಿ ಕಾರ್ಮಿಕ ಮಂತ್ರಿಗಳಿಂದ ಸಮಸ್ಯೆ ಇತ್ಯರ್ಥ ಪಡಿಸುವ ಬಗ್ಗೆ ಭರವಸೆ ಸಹ ದೊರೆಯಿತು.

ಮೈಸೂರು ಬಂದ್

ಸಚಿವ ಹಿಂಡಸಗೇರಿಯವರ ಭರವಸೆಯೂ ಫಲ ನೀಡದಿದ್ದಾಗ ಕಂಗೆಟ್ಟ ಕಾರ್ಮಿಕವರ್ಗ ಮಾರ್ಚ್ 3 ರಂದು ತಮ್ಮ ಸಂಸಾರ ಸಮೇತ ಮೈಸೂರು ಜಿಲ್ಲಾಧಿಕಾರಗಳಿಗೆ ತಮ್ಮ ಸಮಸ್ಯೆಗಳ [illegible] ಆಗ್ರಹಿಸಿ ಮನವಿ ಪತ್ರ ಸಲ್ಲಿಸಿದರು. ಇದಕ್ಕೂ ಪರಿಹಾರಕಾಣದೆ ಮಾರ್ಚ್ 12 ರಂದು ವಿವಿಧ ರಾಜಕೀಯ ಪಕ್ಷಗಳು ಸಂಘಟನೆಗಳು ಹಾಗೂ ಸಂಘಗಳಿಂದ 'ಮೈಸೂರುಬಂದ್' ಗೆ ಕರೆ ನೀಡಿ ಯಶಸ್ವಿಬಂದ್ ಮಾಡಲಾಯಿತು. ನಂತರ ಕಣ್ತೆರೆದ ಸರ್ಕಾರ ಆದೇಶವೊಂದನ್ನು ಹೊರಡಿಸಿ, ಬೇಡಿಕೆಗಳನ್ನು ಕೈಗಾರಿಕಾ ಟ್ರಿಬ್ಯೂನಲ್‌ಗೆ ವಹಿಸಿತು. ಮುಷ್ಕರ ನಿಷೇಧಿಸಿ, ಕಾರ್ಮಿಕರಿಗೆ ಕೈಗಾರಿಕಾ ಕಾಯ್ದೆ 10(ಬಿ) ಅಡಿಯಲ್ಲಿ 700 ರೂ.ಗಳ ಮಧ್ಯಂತರಪರಿಹಾರಕ್ಕೆ ಆದೇಶಿಸಿತು. ಇದರಂತೆ ಮಾರ್ಚ್ 16 ರಂದು ಕಾರ್ಮಿಕರು ಕೆಲಸಕ್ಕೆ ಹಾಜರಾದರು.

ಕಂಪನಿ ಮುಚ್ಚಲು ಅನುಮತಿ ಕೋರಿಕೆ:

ಈ ಮಧ್ಯೆ ಕಾರ್ಮಿಕ ಸಂಘವು ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವ ದೃಷ್ಟಿಯಿಂದ ಕಾರ್ಮಿಕ ಕಾರ್ಯದರ್ಶಿಗಳು ಮತ್ತು ಆಯುಕ್ತರ ಜಂಟಿ ಸಭೆಗೆ ಭಾಗವಹಿಸಿತು. ಕಾರ್ಮಿಕ ಇಲಾಖೆ ಹಾಗೂ ಅಧಿಕಾರಿಗಳ ಸಲಹೆ ಮೇರೆಗೆ ಉತ್ಪಾದನೆ ಮತ್ತು ವೇತನದ ಬಗ್ಗೆ ಒಮ್ಮತಕ್ಕೆ ಬರಲಾಯಿತು. ಆದರೆ ಆಡಳಿತ ವರ್ಗವು ಕೊನೆ ಗಳಿಗೆಯಲ್ಲಿ ಎಲ್ಲಾ ಕಾರ್ಮಿಕರಿಂದ ಒಂದೇ ಉತ್ಪಾದನೆ ಕೊಡುವಂತೆ ಸಂಘ ಒಪ್ಪಬೇಕೆಂಬ ಪಟ್ಟು ಹಿಡಿಯಿತು. ಇಲ್ಲದಿದ್ದರೆ ತನಗೆ ಕಂಪನಿ ನಡೆಸಲು ಸಾಧ್ಯವಿಲ್ಲ, 2000-2001 ರಲ್ಲಿ ನಷ್ಟವಾಗಿದೆ. ಈಗಲೂ ನಷ್ಟವಾಗುತ್ತಿದೆ ಎಂದು ಹೇಳಿ ಕಂಪನಿ ಮುಚ್ಚಲು ಸರ್ಕಾರದ ಅನುಮತಿ ಕೇಳಿತು. ಕಾರ್ಮಿಕ ಸಂಘವೂ ಈಗಾಗಲೇ ಒಪ್ಪಲಾದ ಒಪ್ಪಂದಂತೆ ಉತ್ಪಾದನೆ ಕೊಡಲಾಗುವುದೆಂದು ಹೇಳಿದರೂ ಒಪ್ಪದ ಆಡಳಿತ ವರ್ಗ ಸಾವಿರಾರು ಕಾರ್ಮಿಕರಲ್ಲಿ ಯಾರೋ ಒಬ್ಬಿಬ್ಬರು ಉತ್ಪಾದನೆ ಕೊಡದಿದ್ದರೆ ಎಲ್ಲಾ ಕಾರ್ಮಿಕರಿಗೂ ಒಪ್ಪಂದದಂತೆ ವೇತನ ನಿರಾಕರಿಸುವುದು ಆಡಳಿತ ವರ್ಗದ ಉದ್ದೇಶ. ಸಂಘವು ಉತ್ಪಾದನೆ ಕೊಡದ ಕಾರ್ಮಿಕರಿಗೆ ವೇತನ ಕೊಡುವ ಬದಲು ಕಡಿತ ಮಾಡಿ ಎಂದು ಹೇಳಿದರೂ ತನ್ನ ಧೋರಣೆಯಿಂದ ಹಿಂದೆ ಸರಿಯದ ಆಡಳಿತ ವರ್ಗ ಕಂಪನಿ ಮುಚ್ಚುವ ಬೆದರಿಕೆ ಒಡಿತು.

ಕಾರ್ಖಾನೆ ಮುಚ್ಚಲು ಸರ್ಕಾರದ ವಿರೋಧ

ಇದರಿಂದ ಆತಂಕಗೊಂಡ ಕಾರ್ಮಿಕರು ಮೈಸೂರಿನ ಎಲ್ಲಾ ನಾಗರಿಕ ವಿಭಾಗಗಳಿಗೆ ಆಡಳಿತ ಮಂಡಳಿಯ ದುಷ್ಟ ಯೋಜನೆಯನ್ನು ವಿವರಿಸಲು ಕಾರ್ಮಿಕ ಮುಖಂಡರಾದ ಎಸ್.ಸೂರ್ಯ ನಾರಾಣ ರಾವ್ ನೇತೃತ್ವದಲ್ಲಿ ಜಾಗೃತ ಸಭೆ ನಡೆಸಲಾಯಿತು.

ಕಾಂ. ಸೂರಿ ಸಮ್ಮುಖದಲ್ಲಿ ಕಾರ್ಮಿಕ ಕಾರ್ಯದರ್ಶಿಗಳ ಎದುರು ಕಾರ್ಖಾನೆ ಮುಚ್ಚಲು ಸಲ್ಲಿಸಿದ ಮನವಿಗೆ ಪ್ರತ್ಯುತ್ತರ ನೀಡಿತು. 2000 ಸೆಪ್ಟೆಂಬರ್ 9 ರೊಳಗೆ ಕಾರ್ಖಾನೆಯನ್ನು ಮುಚ್ಚುವ ಆಡಳಿತ ವರ್ಗದ ನಿರ್ಧಾರವನ್ನು ತಿರಸ್ಕರಿಸಿತು. ಕಾರ್ಮಿಕರು ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಲು ಸೆಪ್ಟೆಂಬರ್ 13 ರಂದು ಮೈಸೂರಿನ ಪುರಭವನದೆದುರು ಸಾರ್ವಜನಿಕ ಸಭೆ ನಡೆಸಿದರು. ಸಭೆಯಲ್ಲಿ ಸೂರಿಯವರು ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ಹಾಗೂ ಶಾಸಕರುಗಳು ಮಾತನಾಡಿ ಆಡಳಿತ ಮಂಡಳಿಯ ಲಾಭಕೋರ ನೀತಿ ಹಾಗೂ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ ಮತ್ತು ಕಾರ್ಮಿಕರಿಗೆ ಬೆಂಬಲ ನೀಡುವುದಾಗಿ ಘೋಷಿಸಿದರು. ಇದರಿಂದ ವಿಚಲಿತರಾದ ಸರ್ಕಾರ ಕಾರ್ಖಾನೆ ಮುಚ್ಚುವ ಪ್ರಸ್ತಾಪಕ್ಕೆ ತಡೆವೊಡ್ಡಿ ವರದಿಯನ್ನು ಸಂಘಕ್ಕೆ ನೀಡಿತು.



ಕಾರ್ಮಿಕ ಸಚಿವರ ಸಮಕ್ಷಮದಲ್ಲಿ ಸಭೆ

ಆಡಳಿತ ವರ್ಗವು ಸರ್ಕಾರವು ಕೈಗಾರಿಕಾ ಕಾಯ್ದೆ 10(ಬಿ) ಡಿಯಲ್ಲಿ ನೀಡಿದ್ದ ಆದೇಶದಂತೆ 700 ರೂ.ಗಳ ಮಧ್ಯಂತರ ಪರಿಹಾರವನ್ನು ಸೆಪ್ಟೆಂಬರ್ 15 ರಿಂದ ನಿಲ್ಲಿಸಿದ್ದನ್ನು ಮುಂದುವರಿಸಬೇಕೆಂದು ಕಾರ್ಮಿಕ ಸಂಘ ಕೈಗಾರಿಕಾ ಟ್ರಿಬ್ಯುನಲ್‌ಲ್ಲಿ ಅರ್ಜಿ ಸಲ್ಲಿಸಿತು. ಇದಕ್ಕೆ ಪ್ರತಿಯಾಗಿ ಆಡಳಿತ ವರ್ಗ ಕಾರ್ಖಾನೆ ನಷ್ಟದಲ್ಲಿದೆ ಇದರಿಂದ ಮಧ್ಯಂತರ ಪರಿಹಾರಕ್ಕೆ ಉತ್ಪಾದನೆ ಕೊಡಿಸಲು ಆದೇಶ ನೀಡಬೇಕೆಂದು ಅರ್ಜಿ ಸಲ್ಲಿಸಿತು. ಆಡಳಿತ ವರ್ಗದ ಮತ್ತು ಕಾರ್ಮಿಕ ವರ್ಗದ ವಾದ ಆಲಿಸಿದ ಮೈಸೂರಿನ ಕೈಗಾರಿಕಾ ಟ್ರಿಬ್ಯುನಲ್ ಕಾರ್ಮಿಕರಿಗೆ ಮಧ್ಯಂತರ ಪರಿಹಾರ ಮುಂದುವರಿಸಲು ಆದೇಶ ನೀಡಿ ಆಡಳಿತ ವರ್ಗದ ಅರ್ಜಿಯನ್ನು ವಜಾಗೊಳಿಸಿತು. ಇದರಿಂದ ಮತ್ತಷ್ಟು ಕೆರಳಿ ಕೆಂಡಮಂಡಲವಾದ ಆಡಳಿತ ವರ್ಗವು ನವೆಂಬರ್ 7 ರಿಂದ ಎಂದಿನಂತೆ ವೇತನ ಪಾವತಿ ಮಾಡಲಾಗುವುದೆಂದು ನವೆಂಬರ್ 5 ರಂದು ಏಕಾಏಕಿ ಸೂಚನಾ ಫಲಕದಲ್ಲಿಪ್ರಕಟಿಸಿತು. ನವೆಂಬರ್ 16 ರಂದು ಸಂಘದ ಮುಖಂಡರನ್ನು ಕರೆದು ವೇತನ ಪಾವತಿ ಸಾಧ್ಯವಿಲ್ಲವೆಂದು ಘೋಷಿಸಿತು. ಇದಕ್ಕೆ ಸಂಘದ ಮುಖಂಡರು ಹಾಗೂ ಕಾರ್ಮಿಕರಿಂದ ತೀವ್ರ ಪ್ರತಿಭಟನೆ ವ್ಯಕ್ತಗೊಂಡಿತು. ನಂತರ ಪೋಲೀಸರ ಮಧ್ಯಸ್ಥಿಕೆಯಲ್ಲಿ ನವೆಂಬರ್ 8 ಮತ್ತು 9 ರಂದು ಪಾವತಿಸಲು ಒಪ್ಪಿಕೊಂಡಿತು. ಮುಂದೆ ದುಡಿತದ ಸಂಬಳ ನೀಡಲು ನಿಧಾನಿಸುವುದಿಲ್ಲವೆಂದು ವಾಗ್ದಾನ ನೀಡಿತು.

ಸರ್ಕಾರಕ್ಕೆ ಸವಾಲು

ಕಾರ್ಮಿಕರನ್ನು ಕೇವಲವಾಗಿ ಕಾಣುತ್ತಿರುವ ಆಡಳಿತ ವರ್ಗ ಪುನಃ ಡಿಸೆಂಬರ್ 7 ರಂದು ಸೂಚನಾಫಲಕದಲ್ಲಿ ಡಿಸೆಂಬರ್ 10 ರಂದು ವೇತನ ನೀಡಲಾಗವುದೆಂದು ಪ್ರಕಟಿಸಿತು. ಹೀಗೆ ಸರ್ಕಾರ ಹಾಗೂ ಕೈಗಾರಿಕಾ ಟ್ರಿಬ್ಯುನಲ್‌ಗಳಿಗೆ ಆಡಳಿತ ವರ್ಗ ಮತ್ತೆ ಮತ್ತೆ ಸವಾಲೆಸೆಯತೊಡಗಿತು.

ಈ ಮಧ್ಯೆ ಕಾರ್ಖಾನೆ ಅಧ್ಯಕ್ಷ ಹಾಗೂ ನಿರ್ದೇಶಕರಾದ ಅರುಣಕುಮಾರ್ ಬಜೋರಿಯಾರವರ ಮಗಳ ಮದುವೆಯ ಔತಣಕೂಟವನ್ನು ಡಿಸೆಂಬರ್ 9 ರಂದು ಮೈಸೂರಿನಲ್ಲಿ ಗೊತ್ತುಪಡಿಸಿ ಸೂರಿಯವರು ಸೇರಿದಂತೆ ಸಂಘದ ಮುಖಂಡರನ್ನು ಆಹ್ವಾನಿಸಿದರು. ದುಡಿತದ ಸಂಬಳ ನೀಡಲು ನಿರಾಕರಿಸುವ ಹಾಗೂ ವಿಳಂಬ ಮಾಡುವ ಕುತಂತ್ರದಿಂದ ಬೇಸತ್ತ ಕಾರ್ಮಿಕರು ಆ ದಿನ ಪ್ರತಿಭಟಿಸುವುದಾಗಿ ಹೇಳಿದರು.

ಇದರಿಂದ ಭಯಗೊಂಡ ಆಡಳಿತ ವರ್ಗ ಬೆಂಗಳೂರಿಗೆ ಔತಣಕೂಟ ಸ್ಥಳಾಂತರಿಸಿದರು. ಅಲ್ಲಿಯು ವಿಕ್ರಾಂತ ಆಡಳಿತ ವರ್ಗದಿಂದ ತಮಗಾಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸುವುದಾಗಿ ಮಾತನಾಡಲಾರಂಭಿಸಿದಾಗ, ಮೈಸೂರು ಪೋಲಿಸ್ ಕಮಿಷನರ್‌ನಲ್ಲಿ ಮೊರೆ ಹೋದ ಆಡಳಿತ ವರ್ಗ ಸಮಸ್ಯೆ ಇತ್ಯರ್ಥಗೊಳಿಸುವುದಾಗಿ ಒಪ್ಪಿ ಪ್ರತಿಭಟಿಸದಿರುವಂತೆ ಕಾರ್ಮಿಕರ ಮನವೊಲಿಸುವಂತೆ ಕೇಳಿಕೊಂಡಿತು. ಪೋಲಿಸ್ ಅಧಿಕಾರಿಯು ಶೀಘ್ರ ಸಮಸ್ಯೆ ಬಗೆಹರಿಸುವುದಾಗಿಯೂ ಕಾರ್ಮಿಕರನ್ನು ಕೇಳಿಕೊಂಡರು.

ಈ ಮಧ್ಯೆ 31 ಮಾರ್ಚ್ 2001 ಕ್ಕೆ ಕೊನೆಗೊಂಡ ವರ್ಷದ ಬೋನಸ್ಸನ್ನು ಕಾರ್ಮಿಕರಿಗೆ ನೀಡಲು ತಮ್ಮಲ್ಲಿ ಹಣವಿಲ್ಲವೆಂದು, ಇದಕ್ಕೆ ಒಂದು ವರ್ಷ ಕಾಲಾವಕಾಶ ಬೇಕೆಂದು ಕಾರ್ಮಿಕ ಆಯುಕ್ತರಿಗೆ ಆಡಳಿತ ವರ್ಗ ಪತ್ರ ಬರೆದಿತ್ತು. ನವೆಂಬರ್ 21 ರಂದು ಕಾರ್ಮಿಕ ಆಯುಕ್ತರು ಜಂಟಿ ಸಭೆ ನಡೆಸಿ ಜನವರಿ 31, 2002 ರ ಒಳಗೆ ಬೋನಸ್ ನೀಡುವಂತೆ ಆದೇಶ ನೀಡಿದೆ.

ಈಗ ಆಡಳಿತ ವರ್ಗ ಮೈಸೂರಿನ ಕೈಗಾರಿಕಾ ಟ್ರಿಬ್ಯುನಲ್ ನೀಡಿರುವ ಆದೇಶಕ್ಕೆ ಮಾನ್ಯತೆ ನೀಡದೆ ಕಾರ್ಮಿಕರಿಗೆ ನೀಡಬೇಕಾದ 700 ರೂಗಳಿಗೆ ವಂಚಿಸುವ ಉದ್ದೇಶದಿಂದ ಮುಖ್ಯನ್ಯಾಯಾಲಯದಿಂದ ತಡೆಯಾಜ್ಞೆಗಾಗಿ ಪ್ರಯತ್ನಿಸುತ್ತಿದೆ. ಹೀಗೆ ಮೇಲಿಂದ ಮೇಲೆ ಕಾರ್ಮಿಕರಿಗೆ ವಂಚಿಸುತ್ತಾ ಸರ್ಕಾರಕ್ಕೆ ಸವಾಲುಗಳ ಮೇಲೆ ಸವಾಲು ಎಸೆಯುತ್ತಿದೆ. ಇಂತಹ ಲಾಭಕೋರ ಹಾಗೂ ಕಾರ್ಮಿಕ ವಿರೋಧಿ ಆಡಳಿತ ವರ್ಗದ ಧೋರಣೆಗಳ ವಿರುದ್ಧ ಕಾರ್ಮಿಕ ವರ್ಗ ಐಕ್ಯ ಹೋರಾಟಗಳ ಮೂಲಕ ಉತ್ತರಿಸಬೇಕು ಹಾಗೂ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕಾಗಿದೆ.

- ಜಯರಾಂ

ಭಾರತ-ಪಾಕ್ ಸಂಬಂಧ

ಸಂಯಮ-ಎಚ್ಚರಿಕೆ ಅಗತ್ಯ

ಉಪಖಂಡದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಬೇಕಿರುವ ಭಾರತ-ಪಾಕಿಸ್ತಾನ ದೇಶಗಳು ತುಂಬಾ ಸಂಯಮ, ತಾಳ್ಮೆ ವಿವೇಕದಿಂದ ವರ್ತಿಸಬೇಕಿದೆ. ಪರಿಸ್ಥಿತಿ ಕೈಮೀರದಂತೆ ಎಚ್ಚರ ವಹಿಸಬೇಕಿದೆ. ಈ ಹಾದಿಯಲ್ಲದೆ ಬೇರೆ ದಾರಿಯೇನಿದೆ? ಎಂದು ವಿಶ್ಲೇಷಿಸಿದ್ದಾರೆ ಸುರ್ಜಿತ್‌ರವರು

ಭಾರತ-ಪಾಕ್ ನಡುವಿನ ಸಂಬಂಧ ನಿರ್ಣಯಕ ಹಂತ ತಲುಪಿವೆ, ಒಂದೇ ಒಂದು ಕಿಡಿ ದೊಡ್ಡ ಸ್ಫೋಟಕ್ಕೆ ಎಡೆಮಾಡಿಬಹುದು. 1965 ಮತ್ತು 71 ರಲ್ಲಿನ ಪರಿಸ್ಥಿತಿ ಮೀರುವ ಮಟ್ಟದಲ್ಲಿರದಿದ್ದರೂ, ಅಂತಹುದೆ ಹಂತವನ್ನು ಅದು ತಲುಪಿದೆ. ಎರಡು ದೇಶಗಳು ನಿಯಂತ್ರಣ ರೇಖೆಯೆಡೆಗೆ ಸೈನ್ಯ, ಟಾಂಕರ್, ಯುದ್ಧ ವಿಮಾನಗಳನ್ನು ರವಾನಿಸುತ್ತಿವೆ. ಆಗಾಗ ಗುಂಡಿನ ಚಕಮಕಿಯು ನಡೆದಿದೆ. ಗಡಿಯಲ್ಲಿನ ಹಳ್ಳಿಗರು ಭಯಬಿತರಾಗಿ, ಸುರಕ್ಷಿತ ಸ್ಥಳಗಳಿಗೆ ವಲಸೆ ಹೋಗಲಾರಂಭಿಸಿದ್ದಾರೆ.

ಸಂಯಮದ ಅಗತ್ಯ

ಏಕೆ? ಹೇಗೆ? ಏನು? ಈ ಪರಿಸ್ಥಿತಿಯನ್ನುಂಟು ಮಾಡಿತು? ಯಾರಿಂದ ಉಂಟಾಯಿತು? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವ ಬದಲು, ಪರಿಸ್ಥಿತಿಯ ಲಾಭ ಪಡೆಯುವ ಸಾಹಸಕ್ಕೆ ಕೈಹಾಕದೆ, ಉಂಟಾಗಿರುವ ಪರಿಸ್ಥಿತಿಯನ್ನು ತಿಳಿಗೊಳಿಸಿ, ಪರಿಸ್ಥಿತಿ ಕೈಮೀರದಂತೆ ಎಚ್ಚರ ವಹಿಸಬೇಕಿದೆ.

1965 ಹಾಗೂ 71ರ ಹಾಗೂ ಕಾರ್ಗಿಲ್ ಒಳನುಸುಳುವಿಕೆಯ ಯತ್ನಗಳನ್ನಂತೂ ವಿವರಿಸಬೇಕಿಲ್ಲ. ನಾಟಕೀಯವಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ಭಾರತ ಪಾಕ್ ನಡುವೆ ಒಂದು ವೇಳೆ ಯುದ್ಧ ಆರಂಭವಾದರೆ, ಅದು ಅಣ್ವಸ್ತ್ರ ಸಮರಕ್ಕೆ ಅನುವುಗೊಳಿಸುವುದಿಲ್ಲ ಎಂಬ ಖಾತರಿಯನ್ನು ಯಾರೂ ನೀಡುತ್ತಿಲ್ಲ. ದಕ್ಷಿಣ ಏಷ್ಯದ ಎರಡು ದೊಡ್ಡ ಪ್ರಮುಖ ರಾಷ್ಟ್ರಗಳ ನಡುವಿನ ಯುದ್ಧ ಇದಾಗಲಿರುವ ಕಾರಣ, ಇಡೀ ಉಪಖಂಡ ಹಾಗೂ ವಿಶ್ವದಲ್ಲಿ ಶಾಂತಿಯ ಪ್ರಶ್ನೆಗಳು ಮುಂದಾಗುತ್ತವೆ.


ಈ ಅಂಶಗಳನ್ನು ಸರ್ವಪಕ್ಷಗಳ ಸಭೆಯಲ್ಲಿ ವಿರೋಧ ಪಕ್ಷಗಳು ಭಾರತ ಸರ್ಕಾರಕ್ಕೆ ತಿಳಿಸಿವೆ. ಭಯೋತ್ಪಾದನೆ ವಿರುದ್ಧ ಭಾರತ ಗಟ್ಟಿನಿಲುವು ತಾಳಬಾರದೆಂದಲ್ಲಾ ಇದರರ್ಥ, ಬದಲಾಗಿ ಭಯೋತ್ಪಾದನೆಯನ್ನು ಬೇರು ಸಮೇತ ಕಿತ್ತಿಹಾಕಲು, ಅಗತ್ಯವಿರುವ ರಾಜಕೀಯ ಹಾಗೂ ಆಡಳಿತಾತ್ಮಕವಾದ ಎಲ್ಲಾ ಕ್ರಮಗಳನ್ನು ಜರುಗಿಸಬೇಕು. ಜೊತೆಯಲ್ಲೆ ಯುದ್ಧವನ್ನೇನಾದರು ನಮ್ಮ ಮೇಲೆ ಹೇರಲ್ಪಟ್ಟರೆ, ಅದನ್ನು ಎದುರಿಸಲಾಗದ ಪರಿಸ್ಥಿತಿಗೆ ದೇಶ ಹೋಗಬಾರದೆಂಬ ಅಂಶವಲ್ಲ ವಿರೋಧ ಪಕ್ಷಗಳದ್ದು. ಉಪಖಂಡದಲ್ಲಿನ ದೊಡ್ಡ ರಾಷ್ಟ್ರವಾಗಿರುವ ಕಾರಣ, ಉಪಖಂಡದ ಶಾಂತಿ ಸಂರಕ್ಷತೆ ಕಾಪಾಡುವ ಜವಾಬ್ದಾರಿಯೂ ಸಹ ಭಾರತದ್ದಾಗಿವೆ. ಆದ ಕಾರಣ ವಿರೋಧ ಪಕ್ಷಗಳು, ಭಯೋತ್ಪಾದನೆ ವಿರುದ್ಧ ಕ್ರಮಗಳಿಗೆ ಬೆಂಬಲ ನೀಡುವಾಗಲೇ ಯುದ್ಧದ ವಿಷಯದಲ್ಲಿ ಸಂಯಮವಹಿಸಬೇಕೆಂದು ಸರ್ಕಾರವನ್ನು ಕೋರಿವೆ. ಹಾಗಾಗಿಯೇ ರಾಷ್ಟ್ರದ ಹಿತಾಸಕ್ತಿಗೆ ಮಾರಕವಾಗುವ ಯುದ್ಧೋನ್ಮಾದದಲ್ಲಿ ವಿರೋಧ ಪಕ್ಷದವರು, ಭಾಗಿಗಳಾಗ ಬಯಸರು.


ಭಾರತದ ರಾಜತಾಂತ್ರಿಕತೆ :

ಭಾರತದ ಪ್ರಧಾನಿಗಳು ಕೆಲವು ಪತ್ರಿಕೆಗಳಿಗೆ ತಮ್ಮ ಲೇಖನಗಳಲ್ಲಿ ಭಾರತ ಪಾಕ್ ನಡುವಿನ ಸಂಬಂಧ ಕುರಿತ ಬರೆದಿದ್ದಾರೆ. ಪಾಕಿಸ್ತಾನದ ಇತ್ತೀಚಿನ ನಿಲುವುಗಳು ಕ್ರಮಗಳ ಬಗ್ಗೆ ಮೌನವಹಿಸಿರುವ ಲೇಖನ, ಪರೋಕ್ಷವಾಗಿ ಪಾಕಿಸ್ತಾನಕ್ಕೆ ಎಚ್ಚರಿಕೆಯನ್ನು ನೀಡಬಯಸಿದೆ. ಬಹುಶಃ ಆರ್.ಎಸ್.ಎಸ್. ಸಂಘ ಪರಿವಾರದ ಕಿವಿಗೆ ಇಂಪುಂಟು ಮಾಡುವ ಯತ್ನವಿದ್ದಿರಬಹುದು.

ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಕೆಲವು ರಾಜತಾಂತ್ರಿಕ ಕ್ರಮಗಳನ್ನು ಕೈಗೊಂಡಿದೆ. ಆದರೆ ಅವುಗಳಲ್ಲಿ ಕೆಲವು ತುಂಬಾ ಜಾಸ್ತಿಯಾಗಿ ಪಟ್ಟಿ ಹೂಡೆಯಬಹುದು. ಉದಾಹರಣೆಗೆ ದೆಹಲಿ - ಲಾಹೋರ್ ಬಸ್ ಹಾಗೂ ಸಮಜೋತಾ ರೈಲನ್ನು ನಿಲ್ಲಿಸಲಾಗಿದೆ. ಪತ್ರಿಕೆ ಹಾಗೂ ಮಾಧ್ಯಮಗಳಲ್ಲಿ ಕೊನೆಯ ಬಸ್-ರೈಲು ಹೊರಡುವಾಗಿನ ಸಂದರ್ಭ, ಜನರ ನೋವು, ಕಣ್ಣೀರು, ಸಂಕಟವನ್ನು ಬಿಂಬಿಸಿವೆ. ವಾಸ್ತವದಲ್ಲಿ ಇದು ಜನರ ನಡುವಿನ ಸಂಬಂಧ ಎರಡೂ ದೇಶಗಳ ನಡುವೆ ವಿಶ್ವಾಸ ಗಟ್ಟಿಗೊಳಿಸಲು ಬುನಾದಿಯಾಗುತ್ತದೆ. ಆದಕಾರಣ ಜನರ ನಡುವಿನ ಸಂಪರ್ಕ ಸಂಬಂಧ ಹೆಚ್ಚಿಸುವ ಕೆಲಸ ಆಗಬೇಕಿದೆ.

ಪಾಕ್ ಸರ್ಕಾರ ವಿನಂತಿಸಿದಲ್ಲಿ ಮಾತ್ರ ಮುಶರಫ್‌ರವರನ್ನು ಭಾರತದ ವಾಯು ಪ್ರದೇಶದ





ಮೂಲಕ ಕಠ್ಮಂಡುವಿಗೆ ಹೋಗಲು ಅನುಮತಿಸಬಹುದು ಎಂದು ಭಾರತ ಸರ್ಕಾರ ಘೋಷಿಸಿತು. ಮುಷರಫ್ ತಾನು ಇತರೆ ಮಾರ್ಗದ ಮೂಲಕ ಹೋಗುವ ಮಾತನಾಡಿ, ಅಂತೆಯೇ ಮಾಡಿದ್ದಾರೆ. SAARCನ ದೊಡ್ಡ ರಾಷ್ಟ್ರವಾದ ಭಾರತ ಈ ವಿಷಯದಲ್ಲಿ ಕನಿಷ್ಟ ರಾಜತಾಂತ್ರಿಕ ಸೌಜನ್ಯವನ್ನು ತೋರದೆ, SAARC ಶೃಂಗ ಸಭೆಯ ಅತಿಥೇಯ ರಾಷ್ಟ್ರವಾದ ನೇಪಾಳಕ್ಕೆ ಇರುಸು ಮುರುಸನ್ನು ಉಂಟುಮಾಡಿದೆ. ಅದರಿಂದಾಗಿ ಭಾರತ ನೇಪಾಲ ಸಂಬಂಧದ ಮೇಲಿನ ಪರಿಣಾಮ ಏನಾದೀತು ಎಂಬುದರ ಪರಿವೆ ಭಾರತ ಸರ್ಕಾರಕ್ಕೆ ಇದ್ದಂತಿಲ್ಲ. ಇಂತಹ ಕ್ರಮಗಳಿಂದ ವಿಶ್ವ ಅಭಿಪ್ರಾಯವನ್ನು ಭಾರತ ಸರ್ಕಾರ ಮೂಡಿಸಬಯಸುತ್ತದೆಯೇ ಎಂಬ ಆತಂಕ ಶಾಂತಿ ಪ್ರಿಯರನ್ನು ಕಾಡುತ್ತದೆ.

ಚುನಾವಣೆಗಾಗಿ ರಾಷ್ಟ್ರದ ಹಿತಬಲಿ

ಬಿಜೆಪಿ ನಾಯಕರು ಪಾಕ್ ವಿರೋಧಿ ಉನ್ಮಾದವನ್ನು ಉಂಟುಮಾಡಲು ಎಲ್ಲಡೆ ಯತ್ನಿಸುತ್ತಿದ್ದಾರೆ. ಉತ್ತರ ಪ್ರದೇಶ ಚುನಾವಣೆಯನ್ನು ಗಮನದಲ್ಲಿರಿಸಿ ಅಲ್ಲಿನ ಮುಖ್ಯಮಂತ್ರಿ ರಾಜ್‌ನಾಥ್‌ಸಿಂಗ್ ಸರ್ವಪ್ರಯತ್ನ ನಡೆಸಿಯಾದರೂ, ಪಾಕ್ ವಿರೋಧಿ ಯುದ್ಧೋನ್ಮಾದ ಸೃಷ್ಟಿಸಲು ಮುಂದಾಗಿದ್ದಾರೆ. ಜನರ ಹಾಗೂ ರಾಷ್ಟ್ರದ ಹಿತವನ್ನು ಒಂದು ರಾಜ್ಯದ ಚುನಾವಣೆಗಾಗಿ ಬಲಿಕೊಟ್ಟರೆ, ಜನತೆ ಬಿಜೆಪಿಯನ್ನು ಕ್ಷಮಿಸರೆಂಬ ಅಂಶ ಬಿಜೆಪಿ ಅವರಿಗೆ ತಿಳಿದಿರಬೇಕು.

ಕಾಶ್ಮೀರದ ಪ್ರಶ್ನೆ

ಜಮ್ಮು ಮತ್ತು ಕಾಶ್ಮೀರಕ್ಕೆ ಇನ್ನೇನು ಕೆಲವೇ ತಿಂಗಳುಗಳಲ್ಲಿ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ, ಅಲ್ಲಿಯೂ ಸಹಾ ಇಂತಹದೇ ಯತ್ನದಲ್ಲಿ ಬಿಜೆಪಿ ತೊಡಗಿದೆ. ಆಫಘಾನಿಸ್ತಾನದಲ್ಲಿ ತಾಲಿಬಾನ್ ಆಡಳಿತ ಅಂತ್ಯವಾದ ಮೇಲೆ ಅಲ್ಲಿನ ಹಾಗೂ ಇತರೆ ಪಾಕ್ ನೆಲೆಯ ಭಯೋತ್ಪಾದಕರು, ಕಾಶ್ಮೀರದೊಳಗೆ ನುಸುಳುವ ಯತ್ನ ನಡೆಸಿದ್ದಾರೆ. ಈ ನಿಟ್ಟಿನಲ್ಲಿ ಕಾಶ್ಮೀರದ ಜನತೆಗೆ ಹೆಚ್ಚಿನ ಸ್ವಾಯತ್ತತೆಯನ್ನು ನೀಡಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಭಯೋತ್ಪಾದನೆ ನಿಗ್ರಹಿಸಲು ಮುಂದಾಗಬೇಕಿದ್ದ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ, ಜನರನ್ನು ಕಡೆಗಣಿಸಿ, ಕೇವಲ ಮಿಲಿಟರಿ ಕಾರ್ಯಾಚರಣೆ ಮೂಲಕ ಭಯೋತ್ಪಾದನೆ ನಿಗ್ರಹಿಸಬೇಕೆಂಬ ಭ್ರಮೆಯಲ್ಲಿದೆ.

ಅಮೇರಿಕಾದ ಮೇಲಿನ ತನ್ನ ಅವಲಂಬನೆ ಹೆಚ್ಚು ಪ್ರಯೋಜನಕಾರಿಯಾಗದೆಂಬ ಜ್ಞಾನೋದಯ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಇನ್ನೂ ಆದಂತಿಲ್ಲ. ಕಾಶ್ಮೀರದ ಭೌಗೋಳಿಕವಾಗಿ ನಿರ್ಣಾಯಕ ಪಾತ್ರವಹಿಸುವ ಅಂಶ. ಅಮೇರಿಕಾಕ್ಕೆ ಅತಿ ಮುಖ್ಯ ಹಾಗಾಗಿ ಅದು ಸ್ವತಂತ್ರ ಕಾಶ್ಮೀರವನ್ನು ಬಯಸುತ್ತದೆ. ಅಂತೆಯೆ ಕಾಶ್ಮೀರ ಕುರಿತು ಪಾಕ್‌ಗೇನು ಅಮೇರಿಕಾಗೆ ಅನುಕೂಲವಾಗದು. ಇತ್ತೀಚಿಗೆ ಪಾಕ್ ಅಮೇರಿಕಾವನ್ನು ಬೆಂಬಲಿಸಿದರು ಸಹಾ, ತಾಲಿಬಾನ್ ನಂತರದ ಅಫಘಾನಿಸ್ತಾನದ ಪರಿಸ್ಥಿಯ ಪಾಕ್‌ಗೆ ಯಾವುದೇ ಪಾತ್ರವಿಲ್ಲದಂತೆ ಮಾಡಿದ ಅಮೇರಿಕಾದ ತಂತ್ರದ ಅನುಭವ ಪಾಕ್‌ಗೆ ಆಗಿದೆ, ಅದರಿಂದ ಅದು ಸಹಾ ಪಾಠ ಕಲಿಯಬೇಕಿದೆ.

ಮಾತುಕತೆ : ಒಂದೇ ಮಾರ್ಗ :

ಈ ಪರಿಸ್ಥಿತಿಯಲ್ಲಿ ಭಾರತ ಪಾಕ್‌ನ ನಡುವಿನ ಮಾತುಕತೆಯೊಂದೇ ಪರಿಹಾರ. 1972ರ ಶಿಮ್ಲಾ ಒಪ್ಪಂದ ಈ ಮಾತುಕತೆಗೆ ಆದಾರ ಒದಗಿಸುತ್ತದೆ. ಆದರೆ ಮುಷರೆಫ್ ಬಯಸಿದರೂ ಭಾರತ ಮಾತುಕತೆ ನಡೆಸುವುದಿಲ್ಲ ಎಂಬ ಪಟ್ಟನ್ನು ಭಾರತ ಸರ್ಕಾರ ಹಾಕುತ್ತಿದೆ. ಈ ಹಿಂದೆ ತಾಲಿಬಾನನ್ನು ಬೆಂಬಲಿಸಿದ್ದ ಮುಷರಫ್ ತಾಲಿಬಾನ್ ವಿರುದ್ಧವೇ ಕ್ರಮ ಜರುಗಿಸಬೇಕಾಗಿ ಬಂದದ್ದು ಈಗ ಇತಿಹಾಸ. ಅಂತೆಯೇ ಅಂತರಾಷ್ಟ್ರೀಯ ಅಭಿಪ್ರಾಯ ಒತ್ತಡ ಹೆಚ್ಚಿದಲ್ಲಿ ಮುಷರಫ್ ಸಹಾ ಪಾಕ್ ನೆಲೆಯಲ್ಲಿರುವ ಭಯೋತ್ಪಾದಕರ ವಿರುದ್ಧ ಕ್ರಮ ಜರುಗಿಸಬೇಕಾಗುತ್ತದೆ. ಹಾಗಾಗಿ ಭಾರತ ಒಂದರ ನಂತರ ಒಂದು ಶರತ್ತುಗಳನ್ನು ಹಾಕುವ ಬದಲು, ಅಂತರರಾಷ್ಟ್ರೀಯ ಜನಾಭಿಪ್ರಾಯ ಮೂಡಿಸಲು ಸರ್ಕಾರ ಮುಂದಾಗಬೇಕು.


ಪರಸ್ಪರ ವಿಶ್ವಾಸ ಮೂಡಿಸಲು ಆರ್ಥಿಕ ಸಹಕಾರ, ಜನರ-ಜನರ ನಡುವಿನ, ನೀರು ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ಮುಕ್ತ ಮಾತುಕತೆ, ಸಹಕಾರಕ್ಕೆ ಎರಡೂ ರಾಷ್ಟ್ರಗಳು ಮುಂದಾಗಬೇಕು. ಪಾಕ್ ಕೂಡ ಮಾತೆತ್ತಿದರೆ ಕಾಶ್ಮೀರ ವಿಷಯ ಎತ್ತುವ ಬದಲು, ಇಂತಹ ವಿಷಯಗಳಿಗೆ ಒತ್ತು ನೀಡಬೇಕು.

ಸಧ್ಯ SAARC ಶೃಂಗಸಭೆ ನಡೆಯುತ್ತಿದೆ. ಅದೊಂದು ಬಹು ರಾಷ್ಟ್ರೀಯ ಚರ್ಚೆಯಾದರು, ದ್ವಿಪಕ್ಷೀಯ ಮಾತುಕತೆ ನಡೆಸಲು ಅವಕಾಶವಿದೆ. SAARC ಸಹಾ ಭಯೋತ್ಪಾದನೆ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ. ಎರಡು ರಾಷ್ಟ್ರಗಳ ನಾಯಕರು ಶಾಂತಿ ಸುಭದ್ರತೆಯ ಹಿತದೃಷ್ಟಿಯಿಂದ ಮಾತುಕತೆ ನಡೆಸಬಹುದೆಂದು ಆಶಿಸಬಹುದು.

ಜಗತ್ತಿನ ಸಹಾರಾ ಆಫ್ರಿಕಾ ಹೊರತುಪಡಿಸಿದರೆ, ಕಡಿಮೆ ಮಾನವ ಅಬಿವೃದ್ಧಿ ಸೂಚ್ಯಾಂಕ ಹೊಂದಿರುವ ಪ್ರದೇಶವೆಂದರೆ ದಕ್ಷಿಣ ಏಷ್ಯ. ಇದನ್ನು ಸರಿಪಡಿಸಲೆಂದು ರಚನೆಗೊಂಡು SAARC (ಪ್ರಾದೇಶಿಕ ಸಹಕಾರಕ್ಕಾಗಿ ದಕ್ಷಿಣ ಏಷ್ಯಾ ಸಂಘ) ತನ್ನ ಒಂದುವರೆ ದಶಕದ ಅಸ್ತಿತ್ವದಲ್ಲಿ ನಿರೀಕ್ಷಿತ ಪ್ರಮಾಣದ ಸಾಧನೆಯನ್ನು ಮಾಡಿಲ್ಲ ಎಂಬ ಅಂಶವಿದೆ. ಯೂರೋಪಿನ ಯೂನಿಯನ್, ASEAN ನಂತಹ ಸಹಕಾರ ಸಂಘಗಳಿಗೆ ಹೋಲಿಸಿದರೆSAARC ಸಾಧನೆ ಏನೇನು ಇಲ್ಲದೆಂಬುದಾಗಿದೆ. ಇಂತಹ ಸಂದರ್ಭದಲ್ಲಿ **SAARCನಲ್ಲಿ ಪ್ರಮುಖ ಪಾತ್ರವಹಿಸಬೇಕಿರುವ ಅತಿದೊಡ್ಡ ದೇಶಗಳಾದ ಭಾರತ ಮತ್ತು ಪಾಕಿಸ್ತಾನ ಉಪಖಂಡದ ಬಿಗಡಾಯಿಸಿರುವ ಪರಿಸ್ಥಿಯಲ್ಲಿ ಎಚ್ಚರಿಕೆ ವಹಿಸುವ ಅಗತ್ಯ ಅನಿವಾರ್ಯವಾಗಿದೆ.**

○

ಭಜರಂಗದಳದ ಭಯಾನಕ ತ್ರಿಶೂಲ ದೀಕ್ಷೆ



ಭಜರಂಗದಳದ ಈಗಿನ ಬಹುತೇಕ ಕೋಮುಗಲಭೆ ಅಥವಾ ಪೂಜಾಸ್ಥಳಗಳು ಅಲ್ಪಸಂಖ್ಯಾತರ ಮೇಲಿನ ಆಕ್ರಮಣಗಳಲ್ಲಿ ಎದ್ದು ಕಾಣುವ ಫಾಶಿಸ್ಟ್ ಮಾದರಿ ಶಕ್ತಿ. ಈ ಕುಖ್ಯಾತ ಸಂಘಟನೆ ಆರ್.ಎಸ್.ಎಸ್. ನ 'ಶಕ್ತಿ ವಿಭಜನೆ'ಯ ಸೃಷ್ಟಿ! ಹಿಂದೂ ರಾಷ್ಟ್ರ ನಿರ್ಮಿಸವುದಾಗಿ ಹೇಳುವ ಭಜರಂಗದಳ ಬಿಜೆಪಿ ಆಳುತ್ತಿರುವ ಗುಜರಾತ್‌ನಲ್ಲಿ ತನ್ನ 'ಮಾದರಿ'ಯನ್ನು ಅನಾವರಣಗೊಳಿಸಿದೆ. ಈಗ ಕಾಂಗ್ರೆಸ್ ಆಳುತ್ತಿರುವ ರಾಜಸ್ತಾನದಲ್ಲಿ ಜಾರಿಗೊಳಿಸಲು ಮುಂದಾಗಿದೆ. ಅದಕ್ಕಾಗಿ ಭಜರಂಗದಳ ನಡೆಸಿದ್ದು 'ತ್ರಿಶೂಲ ದೀಕ್ಷಾ ಸಮಾರಂಭ'. ಅಂದರೆ ಧಾರ್ಮಿಕ ಸಂಕೇತವಾದ ತ್ರಿಶೂಲದ ವಿತರಣೆ! ಅಲ್ಲಲ್ಲ! ಅದು 6 ರಿಂದ 8 ಇಂಚುಗಳ ಉದ್ದದ ಹರಿತವಾದ 'ರಾಮ್‌ಪುರಿ ಚಾಕು'ಗಳು. ಹಂಚಿದ್ದು ಒಂದೆರಡಲ್ಲ. 50 ಲಕ್ಷಕ್ಕೂ ಅಧಿಕ. ಈ ಧಾರ್ಮಿಕ ಸೋಗಿನ, ಸಂಘಟನೆ ಕರ್ನಾಟಕದಲ್ಲಿಯೂ ಮೆಲ್ಲ ಮೆಲ್ಲನೇ ತನ್ನ ಜಾಲ ಹಬ್ಬಿಸುತ್ತಿದೆ. ಅದ ಕುರಿತು ಲೇಖನ ಇಲ್ಲಿ .

ರಾಜಸ್ತಾನದ ಕಾಂಗ್ರೆಸ್ ಮುಖ್ಯಮಂತ್ರಿ ಅಶೋಕ್ ಘೆಲೋಟ್ ಅವರು ಇತ್ತೀಚೆಗೆ ರ್‍ಯಾಲಿಯೊಂದರಲ್ಲಿ ಭಾಗವಹಿಸಿ ಮಾತನಾಡುತ್ತಾ 'ಭಜರಂಗ ದಳದವರು ದೇಶದ ಕೆಲವು ಭಾಗಗಳಲ್ಲಿ ಈಗಾಗಲೇ 40 ಲಕ್ಷಕ್ಕೂ ಹೆಚ್ಚು ತ್ರಿಶೂಲ ಆಕಾರದ ಹರಿತವಾದ ಆಯುಧಗಳನ್ನು ವಿತರಣೆ ಮಾಡಿದ್ದಾರೆ' ಎಂದು ಬಹಿರಂಗವಾಗಿ ಆರೋಪಿಸಿದ್ದಾರೆ. ಅವರು ಪ್ರಧಾನಿ ವಾಜಪೇಯಿ ಅವರಿಗೆ ಪತ್ರವೊಂದನ್ನು ಬರೆದು ದೇಶದ ಇತರ ಪ್ರದೇಶಗಳಲ್ಲಿಯೂ ಭಜರಂಗ ದಳವು ಹಿಂದುಗಳಿಗೆ ತ್ರಿಶೂಲಗಳನ್ನು ವಿತರಣೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಅದನ್ನು ನಿಷೇಧಿಸಬೇಕೆಂದು ಸಹ ಕೇಳಿಕೊಂಡಿದ್ದರು. ರಾಜಸ್ತಾನ ಸರ್ಕಾರದ ಈ ಎಚ್ಚರಿಕೆಯ ನಂತರವೂ ರಾಜಸ್ತಾನ, ಗುಜರಾತ್, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಭಜರಂಗದಳದ ತ್ರಿಶೂಲ ವಿತರಣೆ ಹಾಗೂ ಆಯುಧ ತರಬೇತಿ ಶಿಬಿರಗಳು ಯಾವ ಅಡೆತಡೆಗಳಿಲ್ಲದೆ ನಡೆಯುತ್ತಿದೆ ಎಂದು ವರದಿಯಾಗಿದೆ.

ದೀಕ್ಷಾ ಸಮಾರಂಭಗಳು :

ತುಂಬಾ ವ್ಯವಸ್ಥಿತವಾದ ರೀತಿಯಲ್ಲಿ ಈ ತ್ರಿಶೂಲಗಳ ವಿತರಣೆ ನಡೆಯುತ್ತದೆ. ಇದಕ್ಕಾಗಿ ಧಾರ್ಮಿಕ ಸಮಾರಂಭಗಳನ್ನು ಏರ್ಪಡಿಸಲಾಗುತ್ತಿದೆ. ಸಮಾರಂಭಗಳಿಗೆ 'ತ್ರಿಶೂಲ ದೀಕ್ಷಾ ಸಮಾರಂಭ' ಎಂದು ಕರೆಯಲಾಗುತ್ತದೆ. ಸಮಾರಂಭದಲ್ಲಿ ಕುಟುಂಬಕ್ಕೆ ಒಂದು ಮಾರಕವಾದ ಆಯುಧವನ್ನು ನೀಡಲಾಗುತ್ತದೆ. ಸುಮಾರು 8 ಅಂಗುಲ ಉದ್ದವಿರುವ ಈ ಆಯುಧವು ಮನುಷ್ಯನನ್ನು ಇರಿದು ಕೊಲೆ ಮಾಡುವಷ್ಟು ಹರಿತವಾಗಿದ್ದು ಪರಿಶೀಲಿಸಿ ನೋಡಿದಾಗ ತ್ರಿಶೂಲದಂತೆ ಕಾಣುತ್ತದೆ. ಅದು ಹಿಂದು ಧಾರ್ಮಿಕ ಸಂಕೇತವಾಗಿರುವ ತ್ರಿಶೂಲದಂತೆ ಕಾಣಲು ತುಂಬಾ ಚಾಣಾಕ್ಷತನವನ್ನು ಬಳಸಿಕೊಳ್ಳಲಾಗಿದೆ. ಈ ಸಮಾರಂಭಗಳಲ್ಲಿ ಮಾಡಲಾಗುವ ಭಾಷಣಗಳಲ್ಲಿ ಮತ್ತು ವಿತರಣೆ ಮಾಡುವ ಕರಪತ್ರಗಳಲ್ಲಿ ಬಳಸುವ ಪ್ರಚೋದನಾಕಾರಿ ಶಬ್ದಗಳ ಮೂಲಕ ಮುಗ್ಧ ಹಿಂದುಗಳ ಭಾವನೆಗಳನ್ನು ಕೆರಳಿಸಲಾಗುತ್ತದೆ. ಹಿಂದುಗಳು ಮುಂಬರುವ ಅಪಾಯವನ್ನು ಪರಿಗಣಿಸಿ ಶಸ್ತ್ರಧಾರಿಗಳಾಗಬೇಕೆಂದು ಕರೆ ನೀಡಲಾಗುತ್ತದೆ. ಉದಾಹರಣೆಗೆ ರಾಜಸ್ತಾನ ಸರ್ಕಾರವು ನವೆಂಬರ್ 12 ರಂದು ವಶಪಡಿಸಿಕೊಂಡ ಒಂದು ಕರಪತ್ರದ ಶಿರೋನಾಮೆ ಹೀಗಿತ್ತು : 'ಕೈಯಲ್ಲಿ ಕತ್ತಿ, ಮನದಲ್ಲಿ ಬಿರುಗಾಳಿ ಹೊತ್ತ ಭಜರಂಗದಳದ ಯೋಧರು ದೇಶ ರಕ್ಷಣೆ ಮಾಡುವರು'.

ಸಿಖ್ಖರು ಧರಿಸುವ ಕೃಪಾಣದಂತೆ ಹಿಂದುಗಳಿಗೆ ತ್ರಿಶೂಲವು ಒಂದು ಧಾರ್ಮಿಕ ಸಂಕೇತವಾಗಿದೆ. ಆದ್ದರಿಂದ ಅವೆರಡನ್ನೂ 1959 ರ ಆಯುಧ ಕಾಯ್ದೆಯಿಂದ ಹೊರಗಿಡಲಾಗಿದೆ. ಹೀಗಾಗಿ ಹಿಂದು ಸಾಧು ಸನ್ಯಾಸಿಗಳು ತ್ರಿಶೂಲಧಾರಿಗಳಾಗಿ ಓಡಾಡುವುದನ್ನು ಕಾಣುತ್ತೇವೆ. ಆದರೆ ಪ್ರತಿಯೊಬ್ಬ ಹಿಂದು 'ತ್ರಿಶೂಲದಂತಹ ಶಕ್ತಿಯನ್ನು ಬಚ್ಚಿಟ್ಟುಕೊಂಡು ಓಡಾಡುವುದು ಅದೆಷ್ಟು ಅಪಾಯಕಾರಿ ಎಂಬ ಬಗ್ಗೆ ಯೋಚನೆ ಬೇಡವೆ? ಹಿಂದುಗಳು ತಮ್ಮ ಆತ್ಮರಕ್ಷಣೆಗಾಗಿ ತ್ರಿಶೂಲದಂತಹ ಆಯುಧಗಳನ್ನು ಧರಿಸುವುದಾದರೆ ಅದನ್ನು ಆಯುಧ ಕಾಯ್ದೆ ವ್ಯಾಪ್ತಿಗೆ ಒಳಪಡಿಸಬೇಕಾಗುತ್ತದೆ.ಇತರರ ಮೇಲೆ ಪ್ರಯೋಗಿಸುವ ಉದ್ದೇಶದಿಂದ ಇಂತಹ ಹರಿತವಾದ ಆಯುಧವನ್ನು ಧರಿಸುವುದು ಕಾನೂನು ಬಾಹಿರವಾಗುತ್ತದೆ. ಮುಗ್ಧ ಹಿಂದುಗಳ ಮನಸ್ಸುಗಳಲ್ಲಿ ಅಲ್ಪಸಂಖ್ಯಾತ ಮುಸಲ್ಮಾನರ ಹಾಗೂ ಕ್ರೈಸ್ತರ ವಿರುದ್ಧದ ದ್ವೇಷವನ್ನು ಯಶಸ್ವಿಯಾಗಿ ತುಂಬಿದ ಬಳಿಕ ಅವರ ಕೈಯಲ್ಲಿ ಕತ್ತಿಗಳನ್ನು ಕೊಟ್ಟರೆ ಅವು ಭಯೋತ್ಪಾದಕರ ಕೈಯಲ್ಲಿನ 'ಕೊಲ್ಲುವ ... ' ಆಗದಿರಲು ಸಾಧ್ಯವೇ?



ಪರಿಷತ್ತಿನವರಿಂದ ಹಳ್ಳಿ ಹಳ್ಳಿಗಳಲ್ಲಿ 'ಜಲಾಭಿಷೇಕ' ಕಾರ್ಯಕ್ರಮಗಳು ನಡೆಯುತ್ತಿವೆ. ವಿಹೆಚ್‌ಪಿ ವಕ್ತಾರರು ಹೇಳಿಕೊಂಡಿರುವಂತೆ ಈ ಕಾರ್ಯಕ್ರಮದ ಅಂಗವಾಗಿ ದೇಶಾದ್ಯಂತ ಹತ್ತು ಸಾವಿರ ಗ್ರಾಮಗಳ ಪ್ರತಿಯೊಂದು ಹಿಂದು ಮನೆಯನ್ನು ತಲುಪುವ ಗುರಿಯನ್ನಿಟ್ಟುಕೊಳ್ಳಲಾಗಿದೆ. ದೇಶಾದ್ಯಂತ 80 ರ ದಶಕದಲ್ಲಿ ಅಡ್ವಾಣಿ 'ರಥಯಾತ್ರೆ' ಮೂಲಕ ಉಂಟು ಮಾಡಿದ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಮತ್ತೆ ಉಂಟು ಮಾಡಿ ಅದರ ರಾಜಕೀಯ ಲಾಭ ಪಡೆಯುವ ದುರುದ್ದೇಶವಾಗಿದೆ.

ದರ್ಗಾಗಳ ಮೇಲೆ ಧಾಳಿ:

ರಾಜಸ್ತಾನದಲ್ಲಿ ಇತ್ತೀಚೆಗೆ ನಡೆದ ಅಸಂಖ್ಯಾತ ದಂಗೆಗಳಲ್ಲಿ ಮುಸಲ್ಮಾನರ ಮಸೀದಿಗಳನ್ನು

ಅದರ ರಾಜಕೀಯ ಲಾಭ ಪಡೆಯುವ ದುರುದ್ದೇಶವಾಗಿದೆ.

ದರ್ಗಾಗಳ ಮೇಲೆ ಧಾಳಿ:

ರಾಜಸ್ತಾನದಲ್ಲಿ ಇತ್ತೀಚೆಗೆ ನಡೆದ ಅಸಂಖ್ಯಾತ ದಂಗೆಗಳಲ್ಲಿ ಮುಸಲ್ಮಾನರ ಮಸೀದಿಗಳನ್ನು ಅಪವಿತ್ರಗೊಳಿಸುವುದು, ದರ್ಗಾಗಳನ್ನು ಧ್ವಂಸ ಮಾಡುವುದು, ಕುರಾನ್ ಗ್ರಂಥಗಳನ್ನು ಸುಟ್ಟುಹಾಕುವುದು ನಡದದ್ದೇ ಹೆಚ್ಚು. ಮುಸಲ್ಮಾನರ ಜೊತೆಯಲ್ಲಿ ಇತರ ಕೋಮಿನವರೂ ಪವಿತ್ರವೆಂದು ಪರಿಗಣಿಸುವ ಸೂಫಿ ಸಂತರ ಗೋರಿಗಳನ್ನು ನಾಶಮಾಡುವುದಕ್ಕೆ ವಿಶೇಷ ಗುರಿ ಇಟ್ಟುಕೊಳ್ಳಲಾಗುತ್ತದೆ. ದಾಳಿಗೊಳಗಾಗಿ ಧ್ವಂಸವಾದ 'ದರ್ಗಾಗಳು' ಬೆಳಗಾಗುವುದರೊಳಗಾಗಿ 'ಪೂಜಾಸ್ಥಳ'ಗಳಾಗಿ ಮಾರ್ಪಾಡಾಗಿರುತ್ತವೆ. ಉದಾಹರಣೆಗೆ ಪಿರ್ ಬಾಬಾಜಿ ದರ್ಗಾ ಇದ್ದ ಜಾಗದಲ್ಲಿ ಬೂತ್ ಬಾಪ್‌ಜಿ ಮಂದಿರ ತಲೆ ಎತ್ತಿರುತ್ತದೆ. ಅನಿಂದ್ ಎಂಬಲ್ಲಿನ 400 ವರ್ಷ ಹಳೆಯದಾದ ಸವಾಯ್ ಬೋಜ್ ಮಸೀದಿಯನ್ನು ನೆಲಸಮ ಮಾಡಿ, ಆ ಸ್ಥಳದಲ್ಲಿ ಹನುಮಾನ್ ಮೂರ್ತಿಯೊಂದನ್ನು ಸ್ಥಾಪಿಸಿ ಪೂಜಾಸ್ಥಳವೊಂದನ್ನು ಕಟ್ಟಲಾಯಿತು. ಮುಸಲ್ಮಾನರು ಈ ಪ್ರದೇಶಗಳಲ್ಲಿ ನಿಜವಾಗಿಯೂ ಅಲ್ಪಸಂಖ್ಯಾತರಾಗಿದ್ದು ತಮ್ಮ ಪ್ರಾರ್ಥನಾಮಂದಿರಗಳು ನಾಶವಾಗುವುದನ್ನು ಮೂಕಪ್ರೇಕ್ಷಕರಂತೆ ನೋಡಿ ಸುಮ್ಮನಿರಬೇಕಾದ ಹಿಂಸೆಯನ್ನು ಅನುಭವಿಸುತ್ತಿರುತ್ತಾರೆ. ಪ್ರತಿಭಟಿಸಲು ಮುಂದಾಗುವ ಅಲ್ಪಸಂಖ್ಯಾತರು ತಮ್ಮ ಮನೆ ಮಾರು, ಆಸ್ತಿ ಪಾಸ್ತಿ ಮಾತ್ರವಲ್ಲ ಜೀವವನ್ನು ಸಹ ಕಳೆದುಕೊಳ್ಳಲು ಸಿದ್ಧರಾಗಿರಬೇಕಾಗುತ್ತದೆ. ಅಲ್ಪಸಂಖ್ಯಾತರ ಧಾರ್ಮಿಕ ಭಾವನೆಗಳನ್ನು ಹತ್ತಿಕ್ಕುವುದು, ಅವರನ್ನು ಭಯಗ್ರಸ್ತರಾಗಿಸುವುದು, ಅವರನ್ನು ದ್ವಿತೀಯ ವರ್ಗದ ನಾಗರಿಕರಂತೆ ಬದುಕಲು ಬಲವಂತ ಮಾಡುವುದು ಈ ದಾಳಿಗಳ ಹಿಂದಿನ ಉದ್ದೇಶವಾಗಿದೆ.

ಬಿಜೆಪಿ ಆಡಳಿತದ ಬಳುವಳಿ:

ವರ್ಷಗಳ ಕಾಲ ರಾಜಸ್ತಾನವು ಬಿಜೆಪಿ ಆಡಳಿತಕ್ಕೆ ಒಳಪಟ್ಟಿತ್ತು. ಈ ಅವಧಿಯಲ್ಲಿ ಆಡಳಿತದ ಹಾಗೂ ಪೋಲೀಸ್ ಇಲಾಖೆಯ ವಿವಿಧ ಹಂತಗಳಲ್ಲಿ ಸಂಘ ಪರಿವಾರದ ಕಟ್ಟಾ ಕಾರ್ಯಕರ್ತರನ್ನು ವ್ಯವಸ್ಥಿತವಾಗಿ ಸೇರ್ಪಡೆ ಮಾಡಿಕೊಳ್ಳಲಾಯಿತು. ಇಲ್ಲಿನ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಲ್ಲಿ ಹಲವರು ಈಗಲೂ ರಾಜ್ಯದ ಮಾಜಿ ಮುಖ್ಯಮಂತ್ರಿ, ಬಿಜೆಪಿಯ ಬೈರೂನ್‌ಸಿಂಗ್ ಶೇಖಾವತ್ ಅವರನ್ನು ಭೇಟ್ಟಿಯಾಗುತ್ತಿರುತ್ತಾರೆ. ಕಾನೂನು ವ್ಯವಸ್ಥೆ ಕಾಪಾಡಬೇಕಾದ ಯಂತ್ರವು ಪೂರ್ವಾಗ್ರಪೀಡತವಾಗಿ ವರ್ತಿಸಲು ಇದು ಕಾರಣವಾಗಿದೆ. ದರ್ಗಾಗಳ ಮೇಲೆ, ಮಸೀದಿಗಳ ಮೇಲೆ ಧಾಳಿ ಮಾಡುವ ಭಜರಂಗ ದಳದ ಕಾರ್ಯಕರ್ತರನ್ನು ಬಂಧಿಸಲಾಗುವುದಿಲ್ಲ. ಒಂದು ವೇಳೆ ಸಂಘ ಪರಿವಾರದ ಯಾವುದೇ ಒಬ್ಬ

ಪುಟ 12 ಕ್ಕೆ

ಕರ್ನಾಟಕದಲ್ಲಿ ಹಬ್ಬುತ್ತಿರುವ ಜಾಲ

ಭಜರಂಗ ದಳದವರ ಹಾವಳಿ ಕರ್ನಾಟಕದಲ್ಲಿ ಹೆಚ್ಚಾಗುತ್ತಿದೆ. ನಗರಗಳಲ್ಲಿನ ಗೂಂಡಾ ಪಡೆಗಳು ಭಜರಂಗ ದಳದಲ್ಲಿ ಪುನರ್ವಸತಿ ಪಡೆಯುತ್ತಿವೆ. ವಿಜಾಪುರ, ಬಾಗಲಕೋಟೆ ಜಿಲ್ಲೆಗಳ ಪ್ರಮುಖ ಸ್ಥಳಗಳಲ್ಲಿ ಭಜರಂಗದಳದ ದೊಡ್ಡ ದೊಡ್ಡ ಬೋರ್ಡುಗಳು ರಾರಾಜಿಸುತ್ತಿರುವುದು ಕಾಣಸಿಗುತ್ತವೆ. ಈ ಪ್ರದೇಶಗಳಲ್ಲಿ ಉಡಾಳರಾಗಿ ತಿರುಗುವ ಯುವಕರನ್ನು ತಮ್ಮ ಸಂಘಟನೆಯಲ್ಲಿ ಸೇರಿಸುವ ವ್ಯವಸ್ತಿತ ಪ್ರಯತ್ನ ನಡೆದಿದೆ.


ಭಜರಂಗದಳದ ಪ್ರಮೋದ್ ... ಪ್ರಚೋದನಾಕಾರಿ ಭಾಷಣಗಳಿಂದಾಗಿ ರಾಜ್ಯದ ಹಲವು ಕಡೆ ಕೋಮುಗಲಭೆಗಳು ಸಂಭವಿಸಿವೆ. ಈತನನ್ನು ಒಂದು ಜಿಲ್ಲೆಯಿಂದ ಗಡೀಪಾರು ಮಾಡಿದರೆ, ಬೇರೆ ಜಿಲ್ಲೆಗೆ ಹೋಗಿ ಗಲಭೆ ಹಬ್ಬಿಸುತ್ತಾನೆ. ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಗಲಭೆಯಲ್ಲಿ ಮುಸಲ್ಮಾನರ 22 ಪ್ರಾರ್ಥನಾ ಸ್ಥಳಗಳನ್ನು ಸುಟ್ಟುಹಾಕಲಾಗಿದೆ. ಅತ್ಯಂತ ವ್ಯವಸ್ಥಿತವಾಗಿ ನಡೆದ ಈ ಲೂಟಿ ಹಾಗೂ ಧಾಳಿಗೆ ಭಜರಂಗ ದಳದ ನಾಯಕರ ಪ್ರಚೋದನೆಯೇ ಕಾರಣವಾಗಿದೆ. ಹಲವು ದಶಕಗಳಿಂದ ಕೋಮು ಸೌಹಾರ್ದತೆಗೆ ಹೆಸರುವಾಸಿಯಾಗಿದ್ದ ಜಮಖಂಡಿ ತಾಲೂಕಿನ ಬನಹಟ್ಟಿಯಲ್ಲಿ ಭಜರಂಗ ದಳದವರಿಂದಲೇ ಮುಸಲ್ಮಾನರನ್ನು ಅವಹೇಳನ ಮಾಡಿ ಮಾತನಾಡುವ ಮೂಲಕ ಇಲ್ಲಿ ಗಲಭೆಗೆ ಪ್ರಚೋದನೆ ನೀಡಲಾಗುತ್ತಿದೆ. ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ನಡೆದ ಗಲಭೆಯಲ್ಲಿ ಭಜರಂಗದಳದ ಪುಂಡರದ್ದೇ ಪ್ರಮುಖ ಪಾತ್ರ. ರಾಣೇಬೆನ್ನೂರಿನಲ್ಲಿ ಒಂದು ವರ್ಷದ ಹಿಂದೆ ಇವರು ಹಚ್ಚಿದ ಕಿಚ್ಚು ಇನ್ನೂ ಆರಿಲ್ಲ. ಬಾಬಾ ಬುಡನ್‌ಗಿರಿಯಲ್ಲಿಯೂ ಈ ಸಲ ಮತ್ತೆ ಗಲಭೆ ನಡೆಸಲು ಪ್ರಯತ್ನ ಪಡಲಾಯಿತು. ಭಜರಂಗದಳ ಎಂಬುದೊಂದು ಭಯೋತ್ಪಾದಕ ಸಂಘಟನೆಯಾಗಿ ಬೆಳೆದು ಬರುತ್ತಿರುವುದು ಎಲ್ಲಾ ಶಾಂತಿಪ್ರಿಯ ಜನಗಳಿಗೆ ಆತಂಕದ ವಿಷಯವಾಗಿದೆ. ಹಿಂದುಗಳು ಇಂತಹ ಸಂಘಟನೆಗಳನ್ನು ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸಿದಾಗ ಮಾತ್ರ ಸಮಾಜದಲ್ಲಿ ಶಾಂತಿ

ಕೊಡಗು: ಪೋಲೀಸರು ಮತ್ತು ಪತ್ರಿಕೆಗಳ ಶಾಮೀಲು

ಕೊಡಗಿನ ಪಾಲೂರು ದೇವಸ್ಥಾನದ ಪ್ರಕರಣ ಮತ್ತು ಅದನ್ನು ನೆಪವಾಗಿಸಿ ಅಲ್ಪಸಂಖ್ಯಾತರ ಮೇಲೆ ಜಿಲ್ಲೆಯ ತುಂಬಾ ನಡೆದ ವಿಧ್ವಂಸಕ ಧಾಳಿಯ ವ್ಯಾಪಕತೆಗೆ ಸಂಘಪರಿವಾರದ ವ್ಯವಸ್ಥಿತ ಯೋಜನೆ-ಕಾರ್ಯಾಚರಣೆಯೇ ಮುಖ್ಯ ಕಾರಣವೆಂದು ಹಲವಾರು ಸಂಗತಿಗಳು ಸಾಬೀತು ಪಡಿಸುತ್ತಿವೆ. ಇದು ಅವ್ಯಾಹತವಾಗಿ ನಡೆಯಲು ತನ್ನದೇ ಆದ ನಿಷ್ಠ ಸೇವೆ ಸಲ್ಲಿಸಿ, ವ್ಯಾಪಕಗೊಳ್ಳುವಂತಾದ್ದು ಪೋಲೀಸರು ಮತ್ತು ಕೆಲ ಪತ್ರಿಕೆಗಳು ಪೂರ್ಣ ಶಾಮೀಲಿನಿಂದ. ಶಾಂತಿ ಸುವ್ಯವಸ್ಥೆ, ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಕಿಡಿಕಾರುವ ಈ ಕಿರಾತಕರದ್ದು ಪ್ರಜಾಪ್ರಭುತ್ವ - ಧರ್ಮನಿರಪೇಕ್ಷತೆ ಹಾಗೂ ಸಂವಿಧಾನದ ವಿರೋಧಿ, ದೇಶದ್ರೋಹದ ಕೃತ್ಯವಾಗಿದೆ

ಪತ್ರಕರ್ತ ಸತ್ಯಹರಿಶ್ಚಂದ್ರರು

ಜಿಲ್ಲೆಯ ಪತ್ರಿಕೆಗಳು ಜಖಂಗೊಂಡ ಪಾಲೂರು ದೇವಸ್ಥಾನದ ಚಿತ್ರಗಳನ್ನು ಮಾತ್ರವೇ ರೋಚಕ ಭಂಗಿಗಗಳಲ್ಲಿ ಪ್ರಕಟಿಸಿದವು. ಬಿಜೆಪಿ, ಭಜರಂಗದಳ ಮತ್ತು ಭಕ್ತ ಜನಸಂಘ ಎಂಬ ಸಂಘಟನೆಗಳು 'ಮಿಂಚಿನ' ರಸ್ತೆ ತಡೆ ನಡೆಸಿದ್ದಾಗಿ ವರದಿ ಮಾಡಿದವು. ಡಿಸೆಂಬರ್ 9 ರ ಬೆಳಿಗ್ಗೆ ಪಾಲೂರಿಗೆ ಸಮೀಪದ ಪಟ್ಟಣವಾದ ನಾಪೋಕ್ಲುವಿನಲ್ಲಿ ಬಿಜೆಪಿಯ ಕೆ.ಜಿ.ಬೋಪಯ್ಯ ಮತ್ತು ಸಂಘಪರಿವಾರದ ಇತರರು ಸಂಘ ಪರಿವಾರದವರನ್ನು ಹುರಿದುಂಬಿಸಿ ಉದ್ರಿಕ್ತರನ್ನಾಗಿ ಮಾಡಿದ ಸಭೆಯನ್ನು 'ಉದ್ರಿಕ್ತ ಜನಸಾಮಾನ್ಯರ ಸಭೆ' ಎಂದು ವರದಿ ಮಾಡಲಾಯಿತು. ದೇವಾಲಯ ಧ್ವಂಸ ಪ್ರಕರಣದಲ್ಲಿ 8 ಜನ ಮುಸ್ಲಿಮರ ವಿರುದ್ಧ ಕೇಸು ದಾಖಲಿಸಿಕೊಳ್ಳಲಾಗಿದೆ ಹಾಗೂ 4 ಜನರನ್ನು ಬಂಧಿಸಲಾಗಿದೆ ಎಂದು ವರದಿ ಮಾಡುತ್ತಾ ಈ 8 ಜನರ ಹೆಸರುಗಳನ್ನು (ಪಾಲೂರು ಗ್ರಾಮಕ್ಕೆ ಸೇರಿದ ಅಶ್ರಫ್, ಅಲಿ, ಅಬ್ದುಲ್ ರಹಿಮಾನ್, ಮೊಯಿದಾ, ಅದ್ರಾಮ್, ಮೊಯಿದ್ದಿನ್, ಹಂಸ, ಹಮೀದ್, ಹಾನೀಸ್, ಬಷೀರ್) ದಪ್ಪ ಅಕ್ಷರಗಳಲ್ಲಿ ಪ್ರಕಟಿಸಲಾಯಿತು. ಈ ಎಂಟ ಜನರ ಮೇಲೆ ದೂರನ್ನು ನೀಡಿದವರು ಬೋಪಯ್ಯನ ನೇತೃತ್ವದಲ್ಲಿ ಹೊರಗಿನಿಂದ ಪಾಲೂರಿಗೆ ಹೋಗಿದ್ದ ಸಂಘ ಪರಿವಾರದ ಜನರು ಎಂಬ ವಿಷಯ ಅಲ್ಲಿ ಕಾಣಲಿಲ್ಲ. ಪಾಲೂರು ದೇವಸ್ಥಾನದ ಅರ್ಚಕರು ದೇವಸ್ಥಾನ ಜಖಂಗೊಂಡಿದೆ ಎಂದು ಮಾತ್ರ ದೂರನ್ನು ದಾಖಲಿಸಿದ್ದು, ಯಾರನ್ನೂ ಆರೋಪಿಗಳೆಂದು ಹೆಸರಿಸಲ್ಲ ಎಂಬ ಅಂಶವನ್ನು ಈ ಪತ್ರಿಕೆಗಳು ಇವತ್ತಿಗೂ ವರದಿ ಮಾಡಿಲ್ಲ.



ಪ್ರಮೋದ್ ಮುತಾಲಿಕ್

ಪಾಲೂರು ದೇವಸ್ಥಾನದ ಒಟ್ಟು ಆಸ್ತಿ 68 ಎಕ್ರೆ ಇದ್ದದ್ದು ಈಗ ಮುಸ್ಲಿಮರಿಂದ ಒತ್ತುವರಿಯಾಗಿದೆ. ಹಾಗೂ ಅದನ್ನು ತೆರವುಗೊಳಿಸುವವರೆಗೆ ಬಂದ್ ನಡೆಸುತ್ತೇವೆ ಎಂದು ಬೋಪಯ್ಯ ಸಂಘ ಪರಿವಾರದ ಜನರನ್ನು ಹಿಂಸೆಗೆ ಪ್ರಚೋದಿಸಿದ್ದನ್ನು 'ಬೋಪಯ್ಯನವರಿಂದ ಅಕ್ರಮ ಒತ್ತುವರಿ ಜಾಗದ ತೆರವಿಗೆ ಎಚ್ಚರಿಕೆ' ಎಂದು ವರದಿ ಮಾಡಲಾಯಿತು.

ಸಂಘ ಪರಿವಾರದವರು ಈ ಮಾತುಗಳನ್ನು ಕೇಳುತ್ತಿದ್ದಂತೆಯೇ ಮೂರು ಕಿ.ಮಿ. ರಸ್ತೆಯುದ್ದಕ್ಕೂ ಮುಸ್ಲಿಮರ ಮನೆಗಳ ಮೇಲೆ ಧಾಳಿ ಮಾಡುತ್ತಾ ಪಾಲೂರು ದೇವಸ್ಥಾನ ತಲುಪಿ, ದೇವಸ್ಥಾನದ ಪಕ್ಕದ ಮುಸ್ಲಿಮ 110 ಎಕ್ರೆ ತೋಟದಲ್ಲಿ 80 ಎಕ್ರೆಯನ್ನು ಸುಟ್ಟು ಹಾಕಿದ್ದನ್ನು 'ಉದ್ರಿಕ್ತ ಜನತೆಯಿಂದ ಒತ್ತುವರಿ ತೆರವಿಗಾಗಿ ದಾಂಧಲೆ' ಎಂದು ವರದಿ ಮಾಡಲಾಯಿತು.

ಪಾಲೂರಿನ ಪಾಲು

ಪಾಲೂರಿನ ದೇವಸ್ಥಾನದ ಪಕ್ಕದ ಈ ಪ್ರದೇಶವನ್ನು ಪಾಲೂರು ದೇವಸ್ಥಾನಕ್ಕೆ ಸಂಬಂಧಪಟ್ಟ ಭಟ್ಟರೊಬ್ಬರು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ದಾವೆ ಹೂಡಿ ಬಹಳ ಹಿಂದಯೇ ತಮ್ಮದನ್ನಾಗಿ ಮಾಡಿಕೊಂಡಿದ್ದರು. ಈ ಟ್ರಿಬ್ಯುನಲ್‌ನಲ್ಲಿ ಇದ್ದ ಎಲ್ಲ ಹಿಂದೂಗಳು ಇದಕ್ಕೆ ಸಮ್ಮತಿಯನ್ನು ಸೂಚಿಸಿದ್ದರು. ಅದೇ ಟ್ರಿಬ್ಯುನಲ್‌ನಲ್ಲಿದ್ದ ಏಕಮಾತ್ರ ಮುಸ್ಲಿಂರೊಬ್ಬರು ಮಾತ್ರ ಈ ಜಮೀನನ್ನು ದೇವಸ್ಥಾನಕ್ಕೆ ಉಳಿಸಿಕೊಡಬೇಕು ಎಂದು ವಾದಿಸಿದ್ದೂ ಅಲ್ಲದೇ ಭಟ್ಟರಿಗೆ ಜಮೀನು ನೀಡುವತೀರ್ಮಾನವಾದಾಗ ಈ ಜಮೀನನ್ನು ದೇವಸ್ಥಾನಕ್ಕಾಗಿ ಉಳಿಸಲಾಗಲಿಲ್ಲ ಎಂಬುದನ್ನು 'ಭಾರವಾದ ಹೃದಯದಿಂದ ದಾಖಲಿಸುತ್ತಿದ್ದೇನೆ' ಎಂದೂ ಅಭಿಪ್ರಾಯ ದಾಖಲು ಮಾಡಿದ್ದರು.

ತನ್ನಂತೆ ಆದ ಈ ಜಮೀನನ್ನು ಕ್ರಮೇಣ ಈ ಭಟ್ಟರು ಮುಸ್ಲಿಮರಿಗೆ ಮಾರಿಕೊಂಡರು. ಹಾಗಾಗಿ ಈ ಜಮೀನನ್ನು ಈಗ ಉಪಯೋಗಿಸುತ್ತಿರುವ ಮುಸ್ಲಿಮರು ಎಲ್ಲಾ ದೃಷ್ಟಿಗಳಿಂದಲೂ ಅದರ



...ಸುಬ್ಬಯ್ಯ, ಪೀಟರ್ ...ಸೋಜೋ, ಕಾಳಯ್ಯ ಮತ್ತಿತರರು

ಏಕಮಾತ್ರ ವಾರಸುದಾರರು. ಈ ಜಮೀನು ದೇವಸ್ಥಾನಕ್ಕೆ ಸೇರಿದ್ದು ಎಂದು ಪತ್ರಿಕೆಯಲ್ಲಿ 'ವಕೀಲ'ರಾಗಿರುವ ಬೋಪಯ್ಯ ಕೈಗೊಂಡ ಸರ್ವಾಧಿಕಾರಿ ತೀರ್ಮಾನದ ಪ್ರಕಾರ, ಅದರಲ್ಲಿ 80 ಎಕ್ರೆ ಜಮೀನನ್ನು ಸುಟ್ಟು ಹಾಕಿದ್ದಲ್ಲದೇ ಇಡೀ ಕೊಡಗು ಜಿಲ್ಲೆಯನ್ನೇ ಸಂಘ ಪರಿವಾರದವರು ಖುದ್ದಾಗಿ ನಿಂತು ಹೊತ್ತಿ ಉರಿಸುತ್ತಿದ್ದಾಗ, ಜಿಲ್ಲೆಯ ಪತ್ರಿಕೆಗಳವರು ತಮ್ಮ ಕಛೇರಿಗಳಲ್ಲೇ ಕುಳಿತುಕೊಂಡು, ಪಾಲೂರಿನ ಕಡೆ ತಲೆ ಕೂಡಾ ಹಾಕಿ ಮಲಗದೇ ಬೋಪಯ್ಯ ಹಾಗೂ ಸಂಘ ಪರಿವಾರದ ಪರಮ ಮಿತ್ರರಾದ ಪೋಲೀಸರ ಹೇಳಿಕೆಗಳನ್ನು ವರದಿ ಮಾಡುತ್ತಾ 'ದೇವಸ್ಥಾನದ 68 ಎಕ್ರೆ ಜಾಗ ಅನ್ಯಕೋಮಿನವರಿಂದ ಅಕ್ರಮ ಒತ್ತುವರಿಯಾಗಿದೆ' ಎಂದರು. ಅಲ್ಲದೇ ಬೋಪಯ್ಯ ಮತ್ತಿತರರು 'ಅಕ್ರಮ ಒತ್ತುವರಿ ತಕ್ಷಣ ತೆರವು ಮಾಡುವಂತೆ ಉಸ್ತುವಾರಿ ಮಂತ್ರಿಗಳಿಗೆ ಎಚ್ಚರಿಕೆ ನೀಡಿದ್ದಾರೆ' ಎಂದು ತಣ್ಣಗೆ ವರದಿ ಮಾಡಿದರು. ಬೋಪಯ್ಯ ಮತ್ತು ತಂಡದವರು ತಮ್ಮ ಹೇಳಿಕೆಗಳ ಮೂಲಕ ಸತ್ಯ ಹರಿಶ್ಚಂದ್ರರೆಂದೇ ಪ್ರತಿದಿನ ರಾರಾಜಿಸುತ್ತಾ ಜನರನ್ನು ಉದ್ರೇಕಿಸಿದ ಕೆಲಸಗಳಿಗಕೆ ವರದಿಗಾರರು ತಮ್ಮ ಪತ್ರಿಕೆಗಳಲ್ಲಿ ಮೈದಾನಗಳಷ್ಟು ಜಾಗವನ್ನು ಮೀಸಲಾಗಿಟ್ಟರು.

ಅದಕ್ಕೂ ಒಂದು ವಾರದ ಹಿಂದೆಯಷ್ಟೇ ಮಡಿಕೇರಿಯ ಬ್ಲಾಸಮ್ ಶಾಲೆಯಲ್ಲಿ 'ಜೆಹೋವಾನ ಸಾಕ್ಷಿಗಳು' ಎಂಬ ಪಂಥದ ಮೂವರು ಪುಟ್ಟ ಮಕ್ಕಳು ರಾಷ್ಟ್ರಗೀತೆ ಹಾಡಲಿಲ್ಲ ಎಂಬ ನೆಪ ನೀಡಿ 'ಸಂಘ ಪರಿವಾರದವರು ಶಾಲೆಗೆ ನುಗ್ಗಿ ಈ ಮಕ್ಕಳನ್ನು ಅಮಾನತ್ತಿನಲ್ಲಿ ಇರಿಸುವಂತೆ ಮಾಡಿ, ಮಡಿಕೇರಿಯ ಬೀದಿಗಳಲ್ಲಿ ಈ ಪುಟ್ಟಮಕ್ಕಳು ರಾಷ್ಟ್ರದ್ರೋಹಿಗಳು ಎಂದು ಕಿರುಚಾಡುತ್ತಾ ದೊಡ್ಡ ಮೆರವಣಿಗೆ ತೆಗೆದರು. ಹಾಗೂ ಜಿಲ್ಲಾಧಿಕಾರಿ ಕಛೇರಿ ಮುಂದೆ ಭಜರಂಗದಳದವರು, ಅಮಾನತ್ತಿನಲ್ಲಿರುವ ಈ ಮೂರು ಪುಟ್ಟಮಕ್ಕಳು ತಮ್ಮೆದುರು ಬಂದು ರಾಷ್ಟ್ರಗೀತೆ ಹಾಡಬೇಕು ಎಂದು ಪಟ್ಟು ಹಿಡಿದು ಉಪವಾಸ ಸತ್ಯಾಗ್ರಹ ನಡೆಸಿದರು. ಹಸಿವಾಗಲು ಆರಂಭವಾಗುತ್ತಿದ್ದ ಹಾಗೆಯೇ ಜಿಲ್ಲಾಧಿಕಾರಿಗಳು ಕ್ರಮಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂಬ ನೆಪ ಹೇಳಿ ತಕ್ಷಣ ಉಪವಾಸದ ನಾಟಕ ನಿಲ್ಲಿಸಿ ಹೊಟ್ಟೆ ತುಂಬ ಊಟ ಮಾಡಿದರು. ಜಿಲ್ಲೆಯ ಪತ್ರಿಕೆಗಳು ಈ ಮಕ್ಕಳ ಪರವಾದ ಮಾತುಗಳು ಬರದಂತೆ ಸಾಕಷ್ಟು ನಿಗಾ ವಹಿಸಿದವು.

ಪಾಲೂರಿನ ಎಂಟು ಜನ ಮುಸ್ಲಿಮರನ್ನು ಆರೋಪಿಗಳೆಂದು ಹೆಸರಿಸಿದವರು ಪಾಲೂರಿಗೆ ಹೊರಗಿನಿಂದ ಮಿಂಚಿನ ವೇಗದಲ್ಲಿ ಧಾವಿಸಿಬಂದ ಬೋಪಯ್ಯ ಮತ್ತು ಸಂಘಪರಿವಾರದ ಇತರರು ಎಂಬುದನ್ನು ಗಮನಿಸಬೇಕಾಗಿದೆ. ಈ ಆರೋಪದ ಆಧಾರದ ಮೇಲೆಯೇ ಪೋಲೀಸರು ನಾಲ್ಕು ಜನ ಮುಸ್ಲಿಮರನ್ನು ಅದೇ ದಿನ ಸಂಜೆ (ಡಿಸೆಂಬರ್ 9) ಬಂಧಿಸಿದ್ದಾರೆ ಎಂಬುದನ್ನು ಗಮನಿಸಬೇಕಾಗಿದೆ. ಹಾಗಿದ್ದಾಗಲೂ, ದುಷ್ಕರ್ಮಿಗಳನ್ನು ಬಂಧಿಸಬೇಕು ಎಂಬ ಬೇಡಿಕೆಯೊಡನೆ ಮರುದಿನ (ಡಿಸೆಂಬರ್ 10) ಜಿಲ್ಲೆಯಾದ್ಯಂತ ರಸ್ತೆ ತಡೆಗೆ ಕರೆಕೊಟ್ಟು ದಿನಗಟ್ಟಲೆ ವ್ಯವಸ್ಥಿತವಾಗಿ ಹಲ್ಲೆ ನಡೆಸಿದವರು ಇದೇ ಬೋಪಯ್ಯ ಮತ್ತು ಅವರ ಸಂಗಡಿಗರಾದ ಸಂಘ ಪರಿವಾರದವರು ಎಂಬುದನ್ನೂ ವೃತ್ತಿಯಲ್ಲಿ ವಕೀಲ ಮತ್ತು ಪ್ರವೃತ್ತಿಯಲ್ಲಿ ಅಪರಾಧಿ ಎಂಬುದನ್ನು ಮತ್ತೊಮ್ಮೆ ನೆನಪು ಮಾಡಿಕೊಳ್ಳಬೇಕಾಗಿದೆ.

ಕಾನೂನಿನ ಕುರಿತು ನಯಾಪೈಸೆಯ ಗೌರವವಿಲ್ಲದೇ ಬಂಧನಗಳು ನಡೆದ ನಂತರವೇಬಂಧನಕ್ಕೆ ಆಗ್ರಹಿಸಿ ರಸ್ತೆ ತಡೆ ಚಳುವಳಿಗೆ ಕರೆ ಕೊಟ್ಟದ್ದಕ್ಕಾಗಲೀ, ಹಾಗೂ ಇಲ್ಲಿನ ಪತ್ರಿಕೆಗಳು ಮತ್ತು ರಾಜಕಾರಣಿಗಳೇ ಹೇಳುವಂತೆ ಈ ವ್ಯಾಪಕ ಹಿಂಸಾಚಾರದಲ್ಲಿ ಆರ್ಥಿಕವಾಗಿ 1 ಕೋಟಿ ಗೂ ಮಿಕ್ಕ ಆಸ್ತಿಪಾಸ್ತಿಯನ್ನು ನಾಶ ಮಾಡಿರುವುದಕ್ಕಾಗಲೀ, ಮುಸ್ಲಿಮರನ್ನು ಹೊಡೆದು ಹಿಂಸಿಸಿ ಭಯಭೀತರನ್ನಾಗಿ ಮಾಡಿರುವುದಕ್ಕಾಗಲೀ ಬೋಪಯ್ಯ ಅಥವಾ ಸಂಘ ಪರಿವಾರದ ಯಾರೂ ಬಂಧನಕ್ಕೆ ಒಳಗಾಗಿಲ್ಲ ಎಂಬುದನ್ನು ಕೂಡಾ ಗಮನಿಸಬೇಕಾಗಿದೆ. ಮುಸ್ಲಿಮರು ತಮ್ಮ ಅಂಗಡಿ ಮನೆಗಳಿಗೆ ತಾವೇ ಬೆಂಕಿ ಇಟ್ಟುಕೊಂಡರು ಎಂದು ಕೂಡಾ ಬೋಪಯ್ಯ ಹೇಳುತ್ತಾನೆ. ಪತ್ರಿಕೆಗಳು ಪ್ರಕಟಿಸುತ್ತವೆ. ಆಸ್ಪತ್ರೆಗಳಲ್ಲಿ ಜೈಲಿನಲ್ಲಿ ಇರುವ ಮುಸ್ಲಿಮರನ್ನು ಮಾತನಾಡಿಸುವವರಿಲ್ಲ.

ಬಾಳೆಲೆ, ಕುಟ್ಟ ಮತ್ತು ಕೊಟ್ಟಮುಡಿಗಳಲ್ಲಿ ಪೋಲಿಸರೇ ಜೊತೆಯಲ್ಲಿ ನಿಂತು ಹಲ್ಲೆ ನಡೆಸುತ್ತಿದ್ದ ಸಂಘ ಪರಿವಾರದವರಿಗೆ ಪೂರ್ಣಬೆಂಬಲ ನೀಡಿದ್ದನ್ನೂ ಕಂಡವರಿದ್ದಾರೆ. ಕೆಎಸ್‌ಆರ್‌ಪಿ ಮತ್ತು ರ್‍ಯಾಪಿಡ್ ಆಕ್ಷನ್ ಫೋರ್ಸ್ ಪಡೆಗಳು ಬರುವ ಸೂಚನೆಸಿಕ್ಕಿದ ತಕ್ಷಣ ಸಂಘ ಪರಿವಾರದವರನ್ನು ಜಾಗ ಖಾಲಿ ಮಾಡುವಂತೆ ವಿನಂತಿಸಿಕೊಂಡು ಅವರನ್ನು ರಕ್ಷಿಸಿದ್ದಾರೆ. ಇದನ್ನು ಕಣ್ಣಾರೆ ಕಂಡ ಊರಿನ ಅಮಾಯಕರು ಹೇಳುತ್ತಿದ್ದಾರೆ. ಪತ್ರಿಕೆಗಳವರು ಮಾತ್ರ ಪೋಲೀಸರು ಅಸಹಾಯಕರಾಗಿದ್ದರು. ಉದ್ರಿಕ್ತ ಜನತೆ ದಾಂಧಲೆ ನಡೆಸಿ ಪರಾರಿಯಾದ ನಂತರವಷ್ಟೇ ಪೋಲೀಸರ ದೊಡ್ಡ ತುಕಡಿಗಳು ಆಗಮಿಸಿದವು ಎಂದು ವರದಿ ಮಾಡಿವೆ.

- ಸೋಮಯಾಜಿ

ಪೋಲೀಸರ ಪಾತ್ರ

ಈ ರೀತಿ ವ್ಯವಸ್ಥಿತವಾಗಿ ಹಿಂಸಾಚಾರ ನಡೆಯುತ್ತಿದ್ದಾಗ ರಕ್ಷಣೆ ಮಾಡಬೇಕಾದ ಪೋಲೀಸರು ಕೈಕಟ್ಟಿ ಕುಳಿಸಿದ್ದರು ಹಾಗೂ ಹಿಂಸೆಯಲ್ಲಿ ತೊಡಗಿದ್ದವರಿಗೆ ಪ್ರಚೋದನೆ ನೀಡಿದ್ದರು ಎಂದರೆ ನಾವು ನಮ್ಮ ಪೋಲೀಸ್ ವ್ಯವಸ್ಥೆಯ ಬಗ್ಗೆ ತಲೆ ತಗ್ಗಿಸಬೇಕಾಗುತ್ತದೆ.

ಬೆಟ್ಟಗೇರಿಯಲ್ಲಿ ಒಂದು ಎಸ್‌ಟಿಡಿ ಬೂತ್ ಸೇರಿದಂತೆ ಹಲವು ಪ್ರದೇಶಕ್ಕೆ ಬೆಂಕಿ ಕೊಡುವಾಗ ಸಾಕಷ್ಟು ಸಂಖ್ಯೆಯಲ್ಲಿದ್ದ ಪೋಲೀಸರು ಮೌನವಾಗಿಯೇ ಇದ್ದರು. ಕೊಟ್ಟಮುಡಿಯಲ್ಲಿ ಹಾಗೂ ದೇವಾಲಯ ಪ್ರದೇಶದಲ್ಲಿ ಸಾವಿರಾರು

ಘಟನೆ ಸಿಓಡಿ ತನಿಖೆಗೆ ಬಾಯಿಬಾಯಿ ಬಡಿದುಕೊಳ್ಳುತ್ತಿರುವ ಶಕ್ತಿ ಹಾಗೂ ಹಾಯ್ ಬೆಂಗಳೂರು

ಕೋಮುಸೌಹಾರ್ದತಾ ರ್‍ಯಾಲಿಯ ನಂತರ ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆಯವರು ಕೊಡಗು ಜಿಲ್ಲೆಯ ಗಲಭೆಗ್ರಸ್ತ ಪ್ರದೇಶಗಳಿಗೆ ಭೇಟಿನೀಡಿದ್ದಾರೆ. ನೊಂದು ಜರ್ಜಿತಗೊಂಡ ಜನತೆಯ ಅಹವಾಲು ಸ್ವೀಕರಿಸಿದ್ದಾರೆ. ಈ ಸ್ಥಳಗಳಿಗೆ ಭೇಟಿ ನೀಡದಂತೆ ಪೊಲೀಸ್ ಇಲಾಖೆಯ ಕೆಲ ಅಧಿಕಾರಿಗಳೂ, ಕಮಲದಾರಿ ಕಾಂಗ್ರೆಸ್ಸಿಗರೂ ಯತ್ನಿಸಿದರೂ ಫಲನೀಡಿಲ್ಲ. ಈ ಸಂದರ್ಭದಲ್ಲಿ ಎ.ಕೆ. ಸುಬ್ಬಯ್ಯ ಹಾಗೂ ಮಿತ್ರರು ಗೃಹಸಚಿವರನ್ನು ಭೇಟಿಮಾಡದಂತೆ ನಡೆಸಿದ ಮಸಲತ್ತು ನಡೆಯಲಿಲ್ಲ. ಖುದ್ದಾಗಿ ಗೃಹಸಚಿವರೇ ಅವರನ್ನು ಅಂತಹ ಸ್ಥಳಗಳಿಗೆ ಕರೆದೊಯ್ದದ್ದು ಆ ಚೆಡ್ಡಿ ಪಡೆಗೆ ಕಸಿವಿಸಿ ಉಂಟುಮಾಡಿದೆ.

ಈ ಘಟನೆ ಸಿಓಡಿ ತನಿಖೆಗೊಪ್ಪಿಸುವುದಾಗಿ, ಶಾಮೀಲಾಗಿರುವ ಪೊಲೀಸ್ ಅಧಿಕಾರಿಗಳು ವಿಚಾರಣೆ ನಂತರ ಕ್ರಮವಹಿಸುವುದಾಗಿ ಖರ್ಗೆ ಘೋಷಿಸಿದ್ದಾರೆ. **ಬಣ್ಣ ಬಯಲಾಗುವ ಭಯದಿಂದಾಗಿ, ಶಕ್ತಿ ಹಾಗೂ ಹಾಯ್ ಬೆಂಗಳೂರು ಎದೆ ಎದೆ, ಬಾಯಿ ಬಾಯಿ ಬಡಿದುಕೊಂಡು ಶೋಕಿಸುತ್ತಿವೆ. ಕೋಮು ಸೌಹಾರ್ದತಾ ರ್‍ಯಾಲಿಯನ್ನು 'ಸುಬ್ಬಯ್ಯನ ಮುಸ್ಲಿಂ ಸಮಾವೇಶದ ವರಸೆ' ಎಂದು ತಿರುಚಿ ಬರೆದು ರದ್ದಿ ಅಂಗಡಿಗೆ ಪ್ರಯಾಣಿಸುತ್ತಿವೆ.**

ಇವರು ಪತ್ರಕರ್ತರು! ಆದರೆ.... ಮಾಧ್ಯಮದ ಕರಸೇವಕರು

ತಮಗೆ ತೋಚಿದಂತೆ ಗೀಚುವ, ತಮ್ಮ ಅನಿಸಿಕೆಗಳನ್ನು ಇತರರ ಬಾಯಲ್ಲಿ ತುರುಕುವ, ತಿರುಚುವ, ಸುದ್ದಿ-ಹೇಳಿಕೆಗಳನ್ನು ವಿಕೃತಗೊಳಿಸಿ ವಿಜೃಂಭಿಸುವ ವಿಶೇಷ ಪರಿಣತಿ ಇರುವುದು ಮಡಿಕೇರಿಯಿಂದ ಪ್ರಕಟವಾಗುವ 'ಶಕ್ತಿ' ಪತ್ರಿಕೆಗೆ ಪ್ರತ್ಯೇಕ ರಾಜ್ಯದ ಚಳುವಳಿಗೂ, ಕೋಮುವಾದಿಗಳ ಕುಕೃತ್ಯಗಳಿಗೂ ಸಾಕಷ್ಟು ಪೆಟ್ರೋಲ್ ಎರಚಿ, ತಿದಿಯೂದಿ ವಿಭಜನೆ ತರುವ ಕಾಯಕಕ್ಕೆ ನಿಷ್ಠವಾಗಿ ಅಹೋರತ ಶ್ರಮಿಸುತ್ತಿರುವ ಪತ್ರಿಕೆಯಿದು. ಇದನ್ನು ಪತ್ರಿಕೆ ಅಥವಾ ಪತ್ರಿಕಾಲಯವೆಂದು ಭಾವಿಸುವುದಕ್ಕಿಂತ 'ಚೆಡ್ಡಿ'ಗಳ 'ಅಡ್ಡಾ'ವೆಂದು ಬಲ್ಲವರು ಕರೆಯುತ್ತಾರೆ. ಕೊಡಗಿನ ಬಹುತೇಕ ಪಿತೂರಿಗಳು ಇಲ್ಲಿಯ ಬೈಠಕ್‌ಗಳಲ್ಲಿ ರೂಪುಗೊಂಡು ಜಾರಿಯಾಗುತ್ತವೆಯೆಂತಲೂ ಸುದ್ದಿಗಳಿವೆ.

ಇಲ್ಲಿನ ಸಂಘಪರಿವಾರದ ಬೌದ್ಧಿಕ ಶಿಬಿರಗಳಲ್ಲಿ ಹಾಗೂ ಬಡಿಗೆ ಕವಾಯತಿನ ವರಸೆಗಳಲ್ಲಿ ಸ್ಪಷ್ಟಗೊಂಡ ಅಮೋಘ ಪ್ರತಿಭೆಗಳ ಪಡೆಯೇ ಕೊಡಗಿನ ಮಾಧ್ಯಮ ಸಾಮ್ರಾಜ್ಯದಲ್ಲಿ ಧ್ವಜಊರಿದೆ. ಹೀಗಾಗಿ ಬೇಕಾದ ತುತ್ತೂರಿಯನ್ನು ಊದುತ್ತಿದೆ. ಈ 'ಖಾವಿಪಡೆ'ಯ ಬಯೋಡಾಟ ಗೊತ್ತಾಗಿದ್ದು ಹೀಗಿದೆ.

- ಶಕ್ತಿಯ ಪತ್ರಿಕೆಯ ಸಂಪಾದಕ, ಮಾಲೀಕ ಜಿಲ್ಲಾ ವರದಿಗಾರ. ಮೇಲಾಗಿ ಛೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ
- ಆತನ ಸಹೋದರ ಪಿ.ಟಿ.ಐ. ನ ವರದಿಗಾರ. ಚಿದ್ವಿಲಾಸ - ಈತನಿಗೆ 'ಚೆಡ್ಡಿ ವಿಲಾಸ' ಎಂಬ ಅಡ್ಡ ನಾಮವೂ ಪ್ರಖ್ಯಾತವಾಗಿದೆ.
- ಇನ್ನೊಬ್ಬ ಸಹೋದರ - ಬಿ.ಜಿ. ಅನಂತಶಯನ, ಯುಎನ್‌ಐ ವರದಿಗಾರ ಹಾಗೂ ಕೊಡಗು ಫ್ರಂಟ್ ಎಂಬುದರ ಸಂಪಾದಕ
- ಇದೇ 'ಚೆಡ್ಡಿ ಗ್ರೂಪ್' ನ ಹೆಚ್.ಟಿ.ಅನಿಲ್, **ಉದಯ** ಟಿ.ವಿ. ವರದಿಗಾರ.
- ಆ ತಂಡದ ಕರುಳಬಳ್ಳಿ, ಸತ್ಯಪ್ರಸಾದ್ ಈ ಟಿವಿ ವರದಿಗಾರ
- ಚಿ.ನಾ.ಸೋಮಶೇಖರ್ ಎಂಬಾತ ಶಕ್ತಿ ಪತ್ರಿಕೆಯ ಸಹಸಂಪಾದಕ. ಭಜರಂಗದಳದ ಜಿಲ್ಲಾ ಸಹಕಾರ್ಯದರ್ಶಿ. **ಹಾಯ್ ಬೆಂಗಳೂರಿನ** ವರದಿಗಾರನೂ ಇದೇ 'ಗ್ಯಾಂಗ್' ನ ಮುದ್ದಿನ ಕೂಸು. ಇದೇ ಛಾತಿಯ, ಛಾಪಿನ ಹಲವಾರು ಮಾಧ್ಯಮಲೋಕದಲ್ಲಿ ಹರಡಿಕೊಂಡು ಫ್ಯಾಸಿಸ್ಟ್ ವೈರಸ್‌ನಿಂದ ಸಾಂಕ್ರಾಮಿಕರೋಗ ಹಬ್ಬಿಸುತ್ತಿದ್ದಾರೆ.

ಇವುಗಳ ನಡುವೆಯೂ ಕತ್ತಲೆಯೊಡನೆ ಹೋರಾಡುವ ಹಣತೆಗಳಂತೆ ಕೊಡಗು ಸಮಾಚಾರ, ವೀರನಾಡು ನಂತಹ ಸ್ಥಳೀಯ ಪತ್ರಿಕೆಗಳು ಜವಾಬ್ದಾರಿಯಿಂದ ವರ್ತಿಸಿರುವುದು ಉಲ್ಲೇಖನೀಯ. ಹಾಗೆ ಲಂಕೇಶ್ ಪತ್ರಿಕೆ.

ಧಾರ್ಮಿಕ ಮೂಲಭೂತವಾದಿಗಳು ಧರ್ಮ ಸಂಸ್ಕೃತಿಯ ಹೆಸರಿನಲ್ಲಿ, ಸನಾತನವಾದಿಗಳು ಕೌಟುಂಬಿಕ ಮೌಲ್ಯಗಳ ಹೆಸರಿನಲ್ಲಿ, ಭಯೋತ್ಪಾದಕರು ಆಕ್ರಮಣಕಾರರು ರಾಜಕೀಯ ಹೋರಾಟದ ತಂತ್ರವಾಗಿ ಉಡುಪು ಸಂಹಿತೆ ಹೇರಿದ್ದಾರೆ ಹೇರುತ್ತಿದ್ದಾರೆ.

ಎಸ್. ಸತ್ಯಾ

ಪರದೆಯ ಹಿಂದಿನ ರಾಜಕೀಯ

ಹೊಸ ನೀರು ಬಂದಾಗ ಹಳೆಯ ನೀರು ಕೊಚ್ಚಿಕೊಂಡು ಹೋಗುತ್ತದೆ. ಅದೇ ರೀತಿ ಹೊಸತೊಂದು ಸುದ್ದಿ ಬಂದಾಗ ಹಳೆಯ ಸುದ್ದಿಗಳು ಪ್ರಾಮುಖ್ಯತೆ ಕಳೆದುಕೊಳ್ಳುತ್ತವೆ. ಅಮೆರಿಕಾದ ಮೇಲೆ ನಡೆದ ಭಯೋತಾದಕರ ದಾಳಿಯ ಸುದ್ದಿ, ಅಫಘಾನಿಸ್ತಾನದ ಮೇಲಿನ ಯುದ್ಧದ ಸುದ್ದಿಗಳು ಇಡೀ ವಿಶ್ವವನ್ನು ಆವರಿಸಿರುವಾಗ ಕಾಶ್ಮೀರದ ಕಣಿವೆಯಲ್ಲಿ ಮುಸ್ಲಿಂ ಮಹಿಳೆಯರು ಕಡ್ಡಾಯವಾಗಿ ಬುರ್ಖಾ ಧರಿಸಬೇಕಾದ ಪರಿಸ್ಥಿತಿ, ರಾಜ್ಯದಲ್ಲಿ ದಲಿತ ಮಹಿಳೆಯರ ಮೇಲೆ ನಡೆಯುತ್ತಿರುವ ಹಲ್ಲೆಯ ಪ್ರಕರಣಗಳು ಕೊಚ್ಚಿಕೊಂಡು ಹೋಗಿವೆ.

ಅಮೆರಿಕಾದ ಮೇಲೆ ದಾಳಿ ನಡೆದು ತಿಂಗಳುಗಳು ಕಳೆದರೂ ಅಮೆರಿಕವೇ ಮಾಧ್ಯಮಗಳ ಮನಸ್ಸನ್ನೆಲ್ಲ ಆಕ್ರಮಿಸಿಕೊಂಡಿದ್ದು ಮಹಿಳೆಯರ ಮೇಲಿನ ಹಲ್ಲೆಗಳು, ರೈತರ ಸಾವುಗಳು ಒಳಪುಟದ ಸುದ್ದಿಗಳಾಗುತ್ತಿರುವುದು ಆತಂಕದ ವಿಷಯವಾಗಿದೆ.

ಕಾಶ್ಮೀರದ ನೆಲಕ್ಕಾಗಿ ಭಯೋತ್ಪಾದಕರು ಮಾಡುತ್ತಿರುವ ಹೋರಾಟ ರಾಜಕೀಯ ಪ್ರೇರಿತವಾದದ್ದು, ಇದು ಎರಡು ರಾಷ್ಟ್ರಗಳ ಸರಕಾರಗಳಿಗೆ ಸಂಬಂಧಿಸಿದ ರಾಜತಾಂತ್ರಿಕ ವಿಷಯ. ಕಾಶ್ಮೀರದ ಪ್ರಶ್ನೆಯನ್ನು ಭಯೋತ್ಪಾದನೆಯ ಮೂಲಕ ಪರಿಹರಿಸಿಕೊಳ್ಳಲು ಪಾಕಿಸ್ತಾನ ನಡೆಸುತ್ತಿರುವ ಯತ್ನವೇ ಅನೈತಿಕವಾದದ್ದು. ತಮ್ಮ ಉದ್ದೇಶಿತ ಗುರಿಸಾಧನೆಗಾಗಿ ಭಯೋತ್ಪಾದಕರು ಕಾಶ್ಮೀರದ ಮುಗ್ಧ ಜನರ ಮೇಲೆ ನಡೆಸುತ್ತಿರುವ ಹಲ್ಲೆ ದಾಳಿ, ಕೊಲೆ, ಸುಲಿಗೆ, ಅಪಹರಣಗಳು ಮತ್ತೂ ಅಮಾನವೀಯವಾಗಿವೆ. ರಾಜಕೀಯ ವೇದಿಕೆಯ ಮೂಲಕ ಪರಿಹರಿಸಿಕೊಳ್ಳಬೇಕಾದ ವಿವಾದವನ್ನು ಭಯೋತ್ಪಾದನೆಯ ಮೂಲಕ ಪರಿಹರಿಸಿಕೊಳ್ಳಲು ಯತ್ನಿಸುವುದೇ ಆಕ್ರಮಣಕಾರರ ಹತಾಶೆಯನ್ನು ಅವರ ರಾಜಕೀಯ ಇಚ್ಛಾಶಕ್ತಿಯ ಕೊರತೆಯನ್ನು ತೋರಿಸುತ್ತದೆ. ಇಂತಹ ಹತಾಶ ಮನಸ್ಥಿತಿಯ ಮತ್ತೊಂದು ಮುಖವೇ ಕಾಶ್ಮೀರ ಕಣಿವೆಯ ಮಹಿಳೆಯರ ಮೇಲೆ ಹಿಡಿತ ಸಾಧಿಸಲು ನಡೆಸಿರುವ ಪ್ರಯತ್ನ.

ಲಷ್ಕರ್ ಎ ಜಬ್ಬರ್ ಎಂಬ ಸಂಘಟನೆ ಕಾಶ್ಮೀರದ ಮುಸ್ಲಿಂ ಮಹಿಳೆಯರೆಲ್ಲ ಇನ್ನು ಮುಂದೆ ಬುರ್ಖಾ ಅಥವಾ ಘೋಷಾ ಧರಿಸದೆ ತಿರುಗಾಡುವಂತಿಲ್ಲ ಎಂದು ಫರ್ಮಾನು ಹೊರಡಿಸಿದಾಗ ಭಾರತದಲ್ಲಿ ತಾಲಿಬಾನ್ ಕಾಲಿಟ್ಟಂತೆ ಬೆಚ್ಚಿಬಿದ್ದವು. ಲಷ್ಕರ್ ಎ ಜಬ್ಬರ್ ಕೊಟ್ಟ ಗಡುವು ಸಮೀಪಿಸುವವರೆಗೂ ಯಾರೂ ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಜನರ ಉಪೇಕ್ಷೆಯನ್ನು ಗಮನಿಸಿದ ಸಂಘಟನೆ ಬುರ್ಖಾ ಇಲ್ಲದ ಮಹಿಳೆ ಮೇಲೆ ಆಸಿಡ್ ಎರಚುವುದಾಗಿ ಬೆದರಿಸಿದ್ದಲ್ಲದೆ ಶ್ರೀನಗರದಲ್ಲಿ ಓರ್ವ ಯುವತಿಯ ಮೇಲೆ ಆಸಿಡ್ ಎರಚಿ ಮಹಿಳೆಯರಲ್ಲಿ ಭೀತಿ ಹುಟ್ಟಿಸಿತು. ಭಯೋತ್ಪಾದಕರ ಪ್ರಕಟಣೆಯ ಬೆನ್ನ ಹಿಂದೆಯೇ ಜವಳಿ ಅಂಗಡಿಗಳು ಬುರ್ಖಾ ಮಾರಾಟ ಹೆಚ್ಚಿಸಲು ಸರ್ಕಸ್ ನಡೆಸಲು ಆರಂಭಿಸಿದವು. ಸಿದ್ಧ ಉಡುಪು ಮಳಿಗೆಗಳು ಬಗೆಬಗೆಯ ಬುರ್ಖಾಗಳನ್ನು ಪ್ರದರ್ಶಿಸಿದವು. ಈ ಮಧ್ಯೆ ಬುರ್ಖಾಗಳ ಬೆಲೆ ದಿಢೀರನೆ ಹೆಚ್ಚಾಯಿತು. ಉಡುಪು ಸಂಹಿತೆಯ ಹೇರಿಕೆಯಿಂದಲೇ ಮಾನಸಿಕ ಆಘಾತಕ್ಕೆ ಗುರಿಯಾಗಿದ್ದ ಮಹಿಳೆಯರಿಗೆ, ವ್ಯಾಪಾರಿಗಳು ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುವುದನ್ನು ಕಂಡು ಹೇಸಿಗೆಯಾಯಿತು. ಒಂದು ಕೈಯಲ್ಲಿ ಉಡುಪು ಸಂಹಿತೆ ಎಂಬ ತಲವಾರ್ ಹಿಡಿದಿದ್ದ ಲಷ್ಕರ್ ಎ ... ವ್ಯಾಪಾರಿಗಳಿಗೆ ...

ಆಡಿತು.

ಬುರ್ಖಾ ಮಾರಾಟದ ವಿಷಯವನ್ನು ರಂಜನೀಯ ಸುದ್ದಿಯನ್ನಾಗಿ ಮಾಡಿದ ಮಾಧ್ಯಮಗಳು ಈ ಉಡುಪು ಸಂಹಿತೆಯ ಹಿಂದಿನ ವಿಷಮಯ ಮಗ್ಗಲುಗಳನ್ನು ಬಯಲಿಗೆಳೆಯುವ ಕೆಲಸ ಮಾಡಲಿಲ್ಲ. ಈ ಕ್ರಮದ ವಿರುದ್ಧ ಜನರ ವಿರೋಧವನ್ನು ಕ್ರೋಡಿಕರಿಸುವ, ಆತಂಕದಲ್ಲಿದ್ದ ಕಾಶ್ಮೀರಿ ಮಹಿಳೆಯರಿಗೆ ಜನರ ಬೆಂಬಲದ ದನಿ ಮುಟ್ಟಿಸುವ ಈ ಹೇರಿಕೆಯನ್ನು ವಿರೋಧಿಸಲು ಬೇಕಾದ ಮಾನಸಿಕ ಸ್ಥೈರ್ಯವನ್ನು ನೀಡುವ ಕೆಲಸವನ್ನು ಮಾಧ್ಯಮಗಳು ಮಾಡಲಿಲ್ಲ.



ಮಾಧ್ಯಮಗಳಲ್ಲಿ ಸುದ್ದಿಯಾದದ್ದು ಬುರ್ಖಾ ಖರೀದಿಸಲು ಉದ್ದುದ್ದನೆಯ ಸಾಲುಗಳು, ಮಾರುಕಟ್ಟೆಯ ವೈವಿಧ್ಯಮಯ ಬುರ್ಖಾಗಳ ಪ್ರದರ್ಶನ ಎಂಬ ವಿಷಯಗಳು. ಉಡುಪು ಸಂಹಿತೆ ಜಾರಿಗೆ ನೀಡಲಾಗಿದ್ದ ಸೆಪ್ಟೆಂಬರ್ 10ರ ಗಡುವು ಕಳೆಯುವುದರಲ್ಲಿ ಮಾಧ್ಯಮಗಳಿಗೆ ಪುರುಸೊತ್ತಿಲ್ಲದಂತೆ ಕೆಲಸ ಕೊಟ್ಟಿದ್ದರು ಮತ್ತದೇ ತಾಲಿಬಾನ್ ನೆಲದ ಭಯೋತ್ಪಾದಕರು. ಈ ಬಾರಿ ದಾಳಿಗೆ ಗುರಿಯಾಗಿದ್ದು ಜಗತ್ತಿನ ದೊಡ್ಡಣ್ಣನಾದ್ದರಿಂದ ಮಾಧ್ಯಮಗಳ ಕಣ್ಣಿಗೆ ಬುರ್ಖಾ ಅಡ್ಡಿಯಾಗಲಿಲ್ಲ.

ದಶಕಗಳಿಂದ ನಡೆಸುತ್ತಿರುವ ಭಯೋತ್ಪಾದನೆಯಾಗಲಿ, ಯುದ್ಧವಾಗಲಿ, ಅಲ್ಲಲ್ಲಿ ನಡೆದ ಮಾತುಕತೆಯ ಪ್ರಯತ್ನಗಳಾಗಲಿ ಅವರಿಗೆ ಬೇಕಾದ ಫಲ ನೀಡದಿದ್ದಾಗ ಕಾಶ್ಮೀರದ ಭಯೋತ್ಪಾದಕರು ಕೈ ಹಾಕಿದ್ದು ಉಡುಪು ಸಂಹಿತೆಯ ಮೂಲಕ ಮುಸ್ಲಿಂ ಮಹಿಳೆಯರ ನಿಯಂತ್ರಣಕ್ಕೆ ಹಾಗೂ ಆ ಮೂಲಕ ಒಂದು ಧಾರ್ಮಿಕ ಪಂಥಕ್ಕೆ ಸೇರಿದ ಜನರ ನಿಯಂತ್ರಣಕ್ಕೆ.

ದಿಂದಲೂ ಈ ಪ್ರಕರಣಕ್ಕೆ ಸೂಕ್ತವಾದ ಪ್ರತಿಭಟನೆ ಇದುವರೆಗೆ ವ್ಯಕ್ತವಾಗಿಲ್ಲ. 1990ರಲ್ಲಿ ದಖ್ತರನ್ ಎ ಮಿಲ್ಲೇತ್ ಎಂಬ ಸಂಘಟನೆ ಇಂತಹುದೇ ಹಲವು ನಿಯಂತ್ರಣಗಳನ್ನು ಹೇರಿತ್ತು. ಅಂದು ವ್ಯಕ್ತವಾದ ವ್ಯಾಪಕ ವಿರೋಧದ ಮುಂದೆ ನಿಯಂತ್ರಣಗಳು ನಿಲ್ಲಲಿಲ್ಲ. ಆದರೆ ಅಂದಿನಂತೆ ಈ ಬಾರಿ ವಿರೋಧ ವ್ಯಕ್ತವಾಗದಿರುವುದು ಗಮನಾರ್ಹ. ಅಲ್ಲಲ್ಲಿ ಹಲವರು, ಹಲವು ಸಂಘಟನೆಗಳು, ಇದನ್ನು ವಿರೋಧಿಸಿದ್ದರೂ ಸಮಾನ ಮನಸ್ಕರು ಒಂದಾಗಿ ಖಚಿತವಾಗಿ, ಭಯೋತ್ಪಾದಕರ ಫರ್ಮಾನಿಗೆ ಸರಿಸಾಟಿಯಾದ ದನಿಯಲ್ಲಿ ವಿರೋಧಿಸಿಲ್ಲದಿರುವುದು ಆತಂಕದ ವಿಷಯವಾಗಿದೆ. ಇದು ಕೇವಲ ಮಹಿಳೆಯರಿಗೆ ಸಂಬಂಧಿಸಿದ, ಅದರಲ್ಲೂ ಕಾಶ್ಮೀರಿ ಮಹಿಳೆಯರಿಗೆ ಸಂಬಂಧಿಸಿದ ವಿಷಯ ಅಲ್ಲ ಎಂಬುದನ್ನು ನಮ್ಮ ಸಮಾಜ ಮನಗಾಣಬೇಕಿದೆ. ಇಂದು ಕಾಶ್ಮೀರ ಹೊಕ್ಕಿರುವ ಇಂತಹ ನಿಯಂತ್ರಣಗಳನ್ನು ವಿರೋಧಿಸದೇ ಹೋದರೆ ನಾಳೆ ನಮ್ಮಲ್ಲಿಗೂ ಅದು ಹರಿದುಬರುವುದರಲ್ಲಿ ಸಂಶಯವಿಲ್ಲ. ಇದಕ್ಕೆ ಉದಾಹರಣೆ, ಮಣಿಪುರದ ಭಯೋತ್ಪಾದಕ ಸಂಘಟನೆ ಕಾಂಗ್ಲೀ ಯವೋಲ್ ಕಾನ್‌ಲುಪ್ಪ ಪ್ರಕಟಣೆ. ಕಾಶ್ಮೀರಿ ಭಯೋತ್ಪಾದಕರಿಂದ ಪ್ರೇರಣೆ ಪಡೆದ ಮಣಿಪುರದ ಈ ಭಯೋತ್ಪಾದಕ ಸಂಘಟನೆ ಮಹಿಳೆಯರು ಶತಮಾನಗಳ ಪರಂಪರೆಯನ್ನು ಕಾಯ್ದುಕೊಳ್ಳಲು ಸಾಂಪ್ರದಾಯಕ ಉಡುಪು ಧರಿಸಬೇಕೆಂದು ಹಾಗೂ ಧರಿಸದೇ ಇರುವ ಮಹಿಳೆಯರನ್ನು ಯಾವುದೇ ಮುನ್ಸೂಚನೆ ನೀಡದೆ ಗುಂಡಿಕ್ಕಿ ಕೊಲ್ಲುವುದಾಗಿ ಬೆದರಿಕೆ ಒಡ್ಡಿದೆ ಎಂದು ಪತ್ರಿಕೆಗಳು ವರದಿ ಮಾಡಿವೆ.

ಉಡುಪು ಸಂಹಿತೆಯು ಹಿಂದಿರಬಹುದಾದ ಮತ್ತೊಂದು ಕುಟಿಲತೆ.

ಈ ಮಧ್ಯೆ ಕಾಶ್ಮೀರಿ ಮಹಿಳೆಯರು ಬುರ್ಖಾದೊಳಗೆ ಅನಿವಾರ್ಯವಾಗಿ ಅವಿತುಕೊಳ್ಳುತ್ತಿದ್ದಾರೆ. ತಮ್ಮ ಮನಸ್ಸಿನಾಳದ ಪ್ರತಿಭಟನೆಗೆ ಸಾಮಾಜಿಕ ಬೆಂಬಲದ ಸಹಾಯ ಹಸ್ತ ಇಲ್ಲದೆ ಅವರು ಅಸಹಾಯಕರಾಗಿದ್ದಾರೆ. ಈ ಉಡುಪು ಸಂಹಿತೆಗೆ ತಲೆಬಾಗಿರುವುದು ಭೀತಿಯಿಂದಲೇ ಹೊರತು ಇಸ್ಲಾಂ ಧರ್ಮದ ಕಾರಣದಿಂದಲ್ಲ ಎನ್ನುತ್ತಾರೆ. ಜಮ್ಮು ಕಾಶ್ಮೀರದ ಜನತಾ ಪ್ರಜಾಸತ್ತಾತ್ಮಕ ಪಕ್ಷದ ಉಪಾಧ್ಯಕ್ಷೆ ಮೆಹಬೂಬ ಮುಫ್ತಿ. ಯಾಕೆಂದರೆ ಇಸ್ಲಾಂ ಧರ್ಮ ಅನುಯಾಯಿಗಳಿಗೆ ಏನನ್ನೂ ಹೇರುವುದಿಲ್ಲ ಎನ್ನುತ್ತಾರೆ ಅವರು.

ಖುರಾನ್‌ನ ವಿಶ್ಲೇಷಣೆಯ ಮೂಲಕ ಬುರ್ಖಾ ಹೇರಿಕೆ ಇಸ್ಲಾಂ ವಿರೋಧಿ ಕ್ರಮ ಎನ್ನುವ ಹಿರಿಯ ಚಿಂತಕ ಅಸ್ಗರ್ ಆಲಿ ಎಂಜಿನಿಯರ್ ಮತ್ತು ಮುಸ್ಲಿಂ ಮಹಿಳೆಯರ ವೇದಿಕೆಯ ಸಂಚಾಲಕಿ ಸಯೀದಾ ಹಮೀದ್ ಅವರುಗಳು, ಖುರಾನ್‌ನಲ್ಲಿ ಬುರ್ಖಾ ಮತ್ತು ಘೋಷಾ ಕುರಿತು ಬರುವ ಪ್ರಸ್ತಾವಗಳನ್ನು ಅಲ್ಲಿನ ಸಂದರ್ಭಾನುಸಾರ ಅರ್ಥೈಸಬೇಕು, ಖುರಾನ್ ರಚನೆಯಾದ ಕಾಲ ಮತ್ತು ಸಂದರ್ಭವನ್ನು ಆಗ ಚಾಲ್ತಿಯಲ್ಲಿದ್ದ ಮಹಿಳೆಯರ ಉಡುಪು ಮತ್ತು ನಡೆವಳಿಕೆಗಳನ್ನು ಗಮನದಲ್ಲಿರಿಸಿಕೊಳ್ಳಬೇಕು ಎನ್ನುತ್ತಾರೆ.

ಈ ರೀತಿಯ ನಿಯಂತ್ರಣಗಳ ಹೇರುವಿಕೆ ಸಾಧ್ಯವಾಗಲು ಮುಖ್ಯ ಕಾರಣ ದೇಶದಲ್ಲಿ ಹೆಚ್ಚುತ್ತಿರುವ ಮೂಲಭೂತವಾದ. ಈ ದೇಶದ ನೆಲದಲ್ಲೇ ಇತ್ತೀಚೆಗೆ ಹುಟ್ಟಿಕೊಂಡಿರುವ ಮೂಲಭೂತವಾದವು ಭಯೋತ್ಪಾದಕರ ಕುತಂತ್ರಗಳಿಗೆ ಸುಲಭ ದಾರಿ ಮಾಡಿಕೊಟ್ಟಿದೆಯಲ್ಲದೆ ಮೂಲಭೂತ ಹಕ್ಕುಗಳ ದಮನವನ್ನು ಸಂಸ್ಕೃತಿಯ ರಕ್ಷಣೆ ಎಂದು ವ್ಯಾಖ್ಯಾನಿಸುವ ಮಟ್ಟಕ್ಕೆ ತಲುಪಿವೆ.

ಜಗತ್ತಿನ ಯಾವ ಭಾಗದಲ್ಲಾಗಲಿ, ಇತಿಹಾಸದ ಯಾವ ಘಟ್ಟದಲ್ಲಾಗಲಿ (ನಿನ್ನೆಯದು ಇಂದಿನ ಮಟ್ಟಿಗೆ ಇತಿಹಾಸವೇ) ಉಡುಪು ಸಂಹಿತೆಗೆ ಬಲಿಯಾಗಿರುವುದು ಮಹಿಳೆಯರೇ, ಯಾಕೆಂದರೆ ಇಂತಹ ಸಂಹಿತೆಗಳನ್ನು ರೂಪಿಸುವವರು ಪುರುಷರಾದ್ದರಿಂದ ಮಹಿಳೆಯರ ಚಲನಶೀಲತೆಯನ್ನು ಆ ಮೂಲಕ ಅವರ ಅಭಿವೃದ್ಧಿಯನ್ನು ನಿಯಂತ್ರಿಸಲು ಈ ಉಡುಪು ಸಂಹಿತೆ ಒಂದು ಅಸ್ತ್ರವಾಗಿ ಪರಿಣಮಿಸಿದೆ. ಸ್ಥಾಪಿತ ಮೌಲ್ಯಗಳು ತಮ್ಮೆಲ್ಲ ಹಿತಾಸಕ್ತಿಗಳ ಈಡೇರಿಕೆಗಾಗಿ ಮಹಿಳೆಯರ ಉಡುಗೆ ತೊಡುಗೆಯನ್ನು ಸದಾ ನಿಯಂತ್ರಿಸುತ್ತವೆ. ಧಾರ್ಮಿಕ ಮೂಲಭೂತವಾದಿಗಳು ಧರ್ಮ ಸಂಸ್ಕೃತಿಯ ಹೆಸರಿನಲ್ಲಿ, ಸನಾತನವಾದಿಗಳು ಕೌಟುಂಬಿಕ ಮೌಲ್ಯಗಳ ಹೆಸರಿನಲ್ಲಿ, ಭಯೋತ್ಪಾದಕರು ಆಕ್ರಮಣಕಾರರು ರಾಜಕೀಯ ಹೋರಾಟದ ತಂತ್ರವಾಗಿ ಉಡುಪು ಸಂಹಿತೆ ಹೇರಿದ್ದಾರೆ, ಹೇರುತ್ತಿದ್ದಾರೆ. ಕಳೆದ ಒಂದೂವರೆ ದಶಕದಿಂದೀಚೆಗೆ ಇಂತಹ ಪ್ರಯತ್ನಗಳು ಭಾರತದ ನೆಲದಲ್ಲೇ ಹಲವು ಧರ್ಮಗಳಲ್ಲಿ ನಡೆದಿರುವುದನ್ನು ಕಾಣಬಹುದು. ಹಿಂದೂ ಮೂಲಭೂತವಾದಿಗಳು ಕಾಲೇಜು, ವಿಶ್ವವಿದ್ಯಾಲಯಗಳ ಮೂಲಕ ಇಂತಹ ನಿಯಂತ್ರಣ ಹೇರಿದ್ದಾರೆ. ಅಲ್ಪಸಂಖ್ಯಾತ ಸಮುದಾಯಗಳು ಬಹುಸಂಖ್ಯಾತ ಸಮುದಾಯಗಳ ಆಕ್ರಮಣಗಳಿಗೆ ಪ್ರತಿರೋಧವಾಗಿ, ತಮ್ಮ ಅಸ್ತಿತ್ವದ ಕುರುಹಾಗಿ, ಪ್ರತ್ಯೇಕತೆಯ ಸಂಕೇತವಾಗಿ ಇಂತಹ ನಿಯಂತ್ರಣವನ್ನು ತಮ್ಮ ಮಹಿಳೆಯರ ಮೇಲೆ ಹೇರಿದ್ದಾರೆ. ಆರಂಭದಲ್ಲಿ ಬಹುಸಂಖ್ಯಾತರ ಆಕ್ರಮಣಕ್ಕೆ ಪ್ರತಿರೋಧವಾಗಿ ಕಾಣಿಸಿಕೊಳ್ಳುವ ಇಂತಹ ಪದ್ಧತಿಗಳು ಮುಂದೆ ಆ ಧರ್ಮದ ಮೂಲಭೂತವಾದಿಗಳಿಂದಾಗಿ ಗಟ್ಟಿಯಾದ ನೆಲೆ ಕಂಡುಕೊಳ್ಳಲು ಆರಂಭಿಸುತ್ತವೆ. ಪುರುಷರ ಏಕಾಧಿಪತ್ಯಾವಾಗಿರುವ ಮೂಲಭೂತವಾದದ ಆಚರಣೆಯಲ್ಲಿ ಮಹಿಳೆ ದಾಳವಾಗಿದ್ದಾರೆ. ಒಮ್ಮೆ ಬುರ್ಖಾ ಧರಿಸಿದರೆ ಮುಗಿಯಿತು ಇನ್ನಷ್ಟು, ಮತ್ತಷ್ಟು ನಿಯಂತ್ರಣಗಳು ಹಿಂಬಾಲಿಸುತ್ತವೆ.

ಕೃಪೆ: **ಹೊಸತು**

ಮೂಲಭೂತವಾದಿಗಳ ಆಳ್ವಿಕೆಯಲ್ಲಿ ಮಹಿಳೆ


ಇದು ಬಂದೂಕು ಹಿಡಿದು ನಡೆಸುವ ಭಯೋತ್ಪಾದನೆಗಿಂತಲೂ ಭೀಕರವಾದದ್ದು. ಭಯೋತ್ಪಾದಕರಿಗೆ ಇದು ರಾಜಕೀಯ ತಂತ್ರಗಾರಿಕೆಯಾದರೆ, ಜನರಿಗೆ ಇದು ಮೂಲಭೂತ ಹಕ್ಕುಗಳ ದಮನ. ಜನರ ಮೂಲಭೂತ ಹಕ್ಕುಗಳನ್ನು ರಕ್ಷಿಸಬೇಕಾದ ಜವಾಬ್ದಾರಿ ಸರ್ಕಾರದ್ದು. ಆದರೆ ಈ ಪ್ರಕರಣದಲ್ಲಿ ಭಾರತ ಸರ್ಕಾರ ಪೂರ್ಣ ಮೌನ ವಹಿಸಿದೆ. ಭಯೋತ್ಪಾಕರು ಉಡುಪು ಸಂಹಿತೆಯ ಪ್ರಕಟಣೆ ನೀಡಿ ಎರಡು ತಿಂಗಳಾದರೂ ಭಾರತ ಸರ್ಕಾರ ಈ ಕುರಿತು ಇದುವರೆಗೂ ಏನು ಹೇಳಿಲ್ಲ. ಬಂದೂಕು ಹಿಡಿದು ನಡೆಸುವ ಆಕ್ರಮಣವನ್ನು ಮಾತ್ರ ದೇಶದ ವಿರುದ್ಧದ ದಾಳಿ ಎಂದುಕೊಂಡಿರುವ ಸರ್ಕಾರಕ್ಕೆ ಈ ನೆಲದ ಜನರ ಹಕ್ಕುಗಳ ಮೇಲೆ ನಡೆವ ದಾಳಿಯೂ ದೇಶದ ವಿರುದ್ಧದ ದಾಳಿಯೇ ಎಂದು ಅನ್ನಿಸಿಲ್ಲ. ಈ ದೇಶದ ಪ್ರಜೆಗಳ ಧಾರ್ಮಿಕ ಸಾಂಸ್ಕೃತಿಕ ಸ್ವಾತಂತ್ರ್ಯದ ಮೇಲೆ ಪರಕೀಯರು ದಬ್ಬಾಳಿಕೆ ಮಾಡುವುದೆಂದರೆ ಅದು ಸಾಮಾಜಿಕ ವ್ಯವಸ್ಥೆಯನ್ನು ಪಲ್ಲಟಗೊಳಿಸುವ ಹುನ್ನಾರ ಎಂಬ ಸರಳ ಸತ್ಯ ಸರ್ಕಾರಕ್ಕೆ ಅರ್ಥವಾಗಬೇಕಿದೆ.

ಇತ್ತೀಚಿನ ದಿನಗಳಲ್ಲಿ ಕಾಶ್ಮೀರದ ನೆಲದಲ್ಲಿ ಸಣ್ಣದೊಂದು ಬದಲಾವಣೆಯ ಬೆಳಕು ಹರಿದಿತ್ತು. ದಶಕಗಳಿಂದ ಭಯೋತ್ಪಾದಕರ ಹಿಂಸೆಯಿಂದ ತತ್ತರಿಸಿ, ಆಡಳಿತ ವ್ಯವಸ್ಥೆಯಿಂದ ಶಾಂತಿ ಸ್ಥಾಪನೆಯ ಯಾವ ಭರವಸೆ ಇಲ್ಲದಾದಾಗ ಅಲ್ಲಿನ ಮಹಿಳೆಯರೇ ಶಾಂತಿ ಸ್ಥಾಪನೆ ಪ್ರಕ್ರಿಯೆಗೆ ಮುಂದಾಗಿದ್ದಾರೆ. ಜಾತಿ, ಧರ್ಮ, ಮತ, ಭಾಷೆ ಯಾವುದರ ಗೊಡವೆಯೂ ಇಲ್ಲದೆ ನೊಂದ ಮಹಿಳೆಯರೆಲ್ಲರೂ ಸಣ್ಣ ಸಣ್ಣ ಗುಂಪುಗಳನ್ನು ರಚಿಸಿಕೊಂಡು, ತಮ್ಮ ದುಃಖ ಹಂಚಿಕೊಳ್ಳುತ್ತಿದ್ದಾರೆ. ಕಾಶ್ಮೀರದ ಅಸಂಖ್ಯಾತ ಕುಟುಂಬಗಳಲ್ಲಿ ಇಂದು ವಯಸ್ಕ ಪುರುಷರು ಭಯೋತ್ಪಾದಕರ ದಾಳಿಗೆ ಅಥವಾ ಅಪಹರಣಕ್ಕೆ ಅಥವಾ ಸೇನೆಯ ಕಾರ್ಯಾಚರಣೆಗೆ ಬಲಿಯಾಗಿದ್ದಾರೆ. ಆದರೆ ಈ ಕುಟುಂಬಗಳು ಇಂದಿಗೂ ಧೈರ್ಯವಾಗಿ ಕಣಿವೆಯಲ್ಲೇ ಬದುಕು ಮುಂದುವರಿಸಿವೆ. ಇಂತಹ ಕುಟುಂಬಗಳ ಮಹಿಳೆಯರು ಇಂದು ಒಂದಾಗಲು, ಪರಸ್ಪರ ನೋವಿಗೆ ಸಾಂತ್ವನ ಹೇಳಲು, ಬದುಕಿಗೊಂದು ದಿಕ್ಕು ನೀಡಲು, ಮಕ್ಕಳ ಭವಿಷ್ಯಕ್ಕೆ ರೂಪು ನೀಡಲು ಯತ್ನಿಸುತ್ತಿದ್ದಾರೆ. ಇಂತಹ ಪ್ರಯತ್ನಗಳು ಭಯೋತ್ಪಾದಕ ಸಂಘಟನೆಗಳಿಗೆ ಸವಾಲಾಗಿ ಕಂಡಿದೆ. ಒಂದಾದ ಮಹಿಳೆಯರ

"ವಿನಾಶಕಾರಿ ಯುದ್ಧಕ್ಕೆ ಬಿಜೆಪಿ ಒಲವು"

ವಿಜಯರಾಘವನ್

"ಯುದ್ಧದ ಬಗ್ಗೆ ಬಿಜೆಪಿಗೆ ಎಲ್ಲಿಲ್ಲದ ಮಮಕಾರ. ಕಾರ್ಗಿಲ್ ಯುದ್ಧದಿಂದಾಗಿ ವಾಜಪೇಯಿಗೆ ಮತ್ತೆ ಪ್ರಧಾನಿಪಟ್ಟ ಸಿಕ್ಕಿತು. ತನ್ನ ಜನವಿರೋಧಿ ನಿತಿಗಳಿಂದಾಗಿ ಇದೀಗ ಎಲ್ಲಾ ವಿಭಾಗದ ಜನರ ಕೋಪಕ್ಕೆ ಬಿಜೆಪಿ ಗುರಿಯಾಗಿದೆ. ಈತನ್ಮಧ್ಯೆ ಉತ್ತರಪ್ರದೇಶ ವಿಧಾನಸಭಾ ಚುನಾವಣೆ ಬಂದಿರುವುದು ಬಿಜೆಪಿ ಎಲ್ಲಿಲ್ಲದ ಇರಿಸುಮುರುಸು ಉಂಟಾಗಿದೆ. ತನ್ನ ಸೋಲು ಖಚಿತವೆಂದು ತಿಳಿದಿರುವ ಅದು ಮತ್ತೆ ಯುದ್ಧದ ಮೊರೆ ಹೊಕ್ಕಿದೆ. ಆದರೆ ಬಿಜೆಪಿಯ ಕುತಂತ್ರ ಈ ಬಾರಿ ಫಲಿಸದು" ಎಂದು ಸಿಪಿಐ(ಎಂ) ರಾಜ್ಯ ಸಭಾ ಸದಸ್ಯ ಮತ್ತು ಅಭಾ. ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ವಿಜಯರಾಘವನ್ ವಿವರಿಸಿದರು. ಸಿಪಿಐ(ಎಂ)ನ 17ನೇ ಜಿಲ್ಲಾ ಸಮ್ಮೇಳನದ ಅಂಗವಾಗಿ ಕಾಂ। ಎನ್ಕೆ ಉಪಾಧ್ಯಾಯ ನಗರ (ನೆಹರೂ ಮೈದಾನ)ದಲ್ಲಿ ಬೃಹತ್ ಬಹಿರಂಗಸಭೆಯಲ್ಲಿ ಅವರು ಮಾತನಾಡುತ್ತಿದ್ದರು. ಯುದ್ಧವೆಂಬುದು ವಿನಾಶಕಾರಿ. ಅದು ನಮ್ಮ ಆರ್ಥಿಕತೆಯನ್ನು ನುಚ್ಚು ನೂರು ಮಾಡುತ್ತದೆ. ಅಮಾಯಕರ ಪ್ರಾಣಗಳನ್ನು ಬಲಿತೆಗೆದು ಕೊಳ್ಳುತ್ತದೆ. ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ಈಗಾಗಲೇ ನಾವು ರೂ. 65 ಸಾವಿರ ಕೋಟಿಯನ್ನು ರಕ್ಷಣೆಗಾಗಿಯೇ ಮೀಸಲಿರಿಸಿದ್ದೇವೆ. ಜಗತ್ತಿನಲ್ಲೇ ಇದು ಅತೀ ಹೆಚ್ಚಿನದರಲ್ಲೊಂದು. ಇನ್ನು ಯುದ್ಧ ನಡೆದರೆ ನಮ್ಮ ಅಭಿವೃದ್ಧಿಯ ಹಣವನ್ನೆಲ್ಲಾ ಅದು ನುಂಗಿಹಾಕುತ್ತದೆ. ಆದುದರಿಂದ ದೇಶದ ಹಿತ ಬಯಸುವವರೆಲ್ಲಾ ಯುದ್ಧವನ್ನು ತಪ್ಪಿಸಬೇಕಾಗಿದೆ. ನಮ್ಮ ನೆರೆಹೊರೆಯವರೊಂದಿಗೆ ಶಾಂತಿಯನ್ನು ಬೆಳೆಸಿದರೆ ಕೋಟಿ ಕೋಟಿ ಹಣ ಉಳಿತಾಯವಾಗುತ್ತದೆ. 1962ರಲ್ಲಿ ಚೀನಾದೊಂದಿಗೆ ಯುದ್ಧ ನಡೆದಾಗ ಶಾಂತಿಮಾತುಕತೆಯನ್ನು ಪ್ರಸ್ತಾಪಿಸಿ ಸಿಪಿಐ(ಎಂ)ನ ನಿಲುವು ಅತ್ಯಂತ ಸರಿಯಾದುದು ಎಂದು ಸಾಬಿತಾಗಿದೆ. ಇಂದು ಚೀನಾದೊಂದಿಗೆ ಶಾಂತಿ ಕಾಪಾಡಿಕೊಂಡು ಬಂದ ಕಾರಣ ಚೀನಾ ಗಡಿಯ ಬಳಿಯಲ್ಲಿ ಟ್ಯಾಂಕರುಗಳಿಲ್ಲ, ಗುಂಡಿನ ಶಬ್ದಗಳಿಲ್ಲ. ಆದರೆ ಬಿಜೆಪಿಗೆ ಅದು ಬೇಕಾಗಿಲ್ಲ. ಯುದ್ಧದ ಮೂಲಕ, ಶವದ ಪೆಟ್ಟಿಗೆ ಮುಖಾಂತರ ಹಣ ಮಾಡುವುದು ಅದಕ್ಕೆ ಬೇಕಾಗಿದೆ. ನಮ್ಮ ದೇಶದ ಬಡಗಿಗಳು ಕಡಿಮೆದರದಲ್ಲಿ ಶವಪೆಟ್ಟಿಗೆ ಮುಖಾಂತರ ಹಣ ಮಾಡುವುದು ಅದಕ್ಕೆ ಬೇಕಾಗಿದೆ. ನಮ್ಮ ದೇಶದ ಬಡಗಿಗಳು ಕಡಿಮೆದರದಲ್ಲಿ ಶವಪೆಟ್ಟಿಗೆ ಮಾಡಿಕೊಡುವಾಗ ಅಮೆರಿಕಾದಿಂದ ಹವಾನಿಯಂತ್ರಿತ ಶವಪೆಟ್ಟಿಗೆ ತರಿಸಿ ಅದಕ್ಕೆ ತಮ್ಮ ಸ್ವದೇಶಿ ಪ್ರೇಮದ ಮೊಳೆಹೊಡೆಯುವ ಬಿಜೆಪಿಯವರ ದೇಶ ಪ್ರೇಮಕ್ಕೆ ಏನೆನ್ನಬೇಕು? ನಮ್ಮ




ಯೋಧರಿಗೆ 6 ರಿಂದ 9 ಇಂಚಿನ ಬೂಟುಗಳು ಬೇಕಾದಾಗ ಶಾಲಾಮಕ್ಕಳಿಗೆ ಹೊಂದುವ 5 ಇಂಚಿನ ಬೂಟುಗಳನ್ನು ಆಮದು ಮಾಡಿಕೊಂಡು ಕೊಳ್ಳೆಹೊಡೆದ ಬಿಜೆಪಿ ನೀತಿಗೆ ಏನೆನ್ನಬೇಕು.


ಸಿಪಿಐ(ಎಂ) ದ.ಕ. 17ನೇ ಜಿಲ್ಲಾ ಸಮ್ಮೇಳನ

ಇಂಡಿಯಾದ ಕೋವಿಗಳಿಗೆ 7.62 ಮಿ.ಮೀ ಮದ್ದುಗುಂಡು ಬೇಕಿರುವಾಗ 11.0 ಮಿ.ಮೀನ ಗುಂಡುಗಳನ್ನು ವಿದೇಶದಿಂದ ತರಿಸಿಕೊಂಡ ಬಿಜೆಪಿಯ ದೇಶಾಭಿಮಾನಕ್ಕೆ ಎಣೆಯುಂಟೇ? ಬಿಜೆಪಿಯ ಆಡಳಿತವು ರಾಷ್ಟ್ರೀಯ ಲಜ್ಜೆಗೇಡಿತನ" ಎಂದು ವಿಜಯ ರಾಘವನ್ ಕಟುವಾಗಿ ಖಂಡಿಸಿದರು.

"ಬಿಜೆಪಿಯು ಇಡೀ ಸಮಾಜವನ್ನೇ ಕೋಮುವಾದಿಕರಣಗೊಳಿಸುತ್ತಿದೆ. ಮಾನವ ಸಂಪನ್ಮೂಲ ಸಚಿವ ಮುರಳಿ ಮನೋಹರ ಜೋಷಿಯಂತೂ ನಮ್ಮ ದೇಶದ ಪ್ರಸಿದ್ಧ ಪ್ರಖ್ಯಾತ ಇತಿಹಾಸಕಾರರನ್ನು ಮತ್ತು ಶಿಕ್ಷಣತಜ್ಞರನ್ನು POTO ಕಾಯ್ದೆಯಡಿ ಬಂಧಿಸುವುದಾಗಿ ಬೆದರಿಕೆಯೊಡ್ಡಿದ್ದಾರೆ. ಸೆ. 11ರ ಬಳಿಕ ವಿಶ್ವದ ಅಭಿವೃದ್ಧಿಹೊಂದಿದ ದೇಶಗಳು ಭಯೋತ್ಪಾದನೆ ನಿಗ್ರಹದ ಹೆಸರಿನಲ್ಲಿ ಜನವಿರೋಧಿ ಶಾಸನಗಳನ್ನು ಜ್ಯಾರಿಗೊಳಿಸುತ್ತಿದ್ದಾರೆ. ಆದರೆ ಇವರ್ಯಾರೂ ಚರಿತ್ರೆಕಾರರನ್ನು, ಶಿಕ್ಷಣ ತಜ್ಞರನ್ನು ಬಂಧಿಸಲು ಹೊರಟಿಲ್ಲ.



ಕೆ.ಆರ್.ಶ್ರೀಯಾನ್



ಕೆ.ಶಂಕರ್

ಇದು ಸಂಘ ಪರಿವಾರದ ಆಡಳಿತ ವೈಖರಿ, ಭಯೋತ್ಪಾದನೆಯ ತೂಗುಗತ್ತಿ ತನ್ನ ನೆತ್ತಿಯ ಮೇಲಿರುವುದೆಂದು ಪ್ರಧಾನಿ ಮುಂಬೈಯಲ್ಲಿ ಹೇಳುತ್ತಿರುವಾಗಲೇ ಪಾರ್ಲಿಮೆಂಟಿನ ಗೋಡೆಗಳನ್ನು ಬೇಧಿಸಿ ಉಗ್ರಗಾಮಿಗಳು ನುಗ್ಗುವುದೆಂದರೆ ಬಿಜೆಪಿಯವರ ಭಯೋತ್ಪಾದನೆ ನಿಗ್ರಹದ, ರಕ್ಷಣಾ ವ್ಯವಸ್ಥೆಯ ಕಾಳಜಿಯಾದರೂ ಏನು? ಭಯೋತ್ಪಾದನೆಯನ್ನು ಪ್ರಚೋದಿಸುತ್ತಿರುವ ಪಾಕಿಸ್ತಾನವನ್ನು ಇಡೀ ವಿಶ್ವದ ಜನತೆ ದೂರಿಕರಿಸುವಂತೆ ಜನಾಭಿಪ್ರಾಯವನ್ನು ಬೆಳೆಸುವ ಪ್ರಯತ್ನವನ್ನು ಸರಕಾರ ಮಾಡಬೇಕು. ಆದರೆ ಕೇಂದ್ರವು ತನ್ನದೇ ಏಕಪಕ್ಷೀಯ ಉದ್ರಿಕ್ತಕಾರಿ ನಿಲುವಿನ ಮೂಲಕ ಭಯೋತ್ಪಾದನೆ ವಿರೋಧಿ ಹೋರಾಟದ ತೀವ್ರತೆಯನ್ನು ಕಡಿಮೆಗೊಳಿಸಿದೆ." ಎಂದು ಅವರು ಟೀಕಿಸಿದರು.

"ಬಿಜೆಪಿ ಅಧಿಕಾರಕ್ಕೇರಿದ ಬಳಿಕ ಅದು ಅಮೇರಿಕಾದ ಬಾಲಂಗೋಚಿಯಂತೆ ವರ್ತಿಸುತ್ತಿದೆ. ಕಳೆದ ಕೆಲವು ದಶಕಗಳಿಂದ ಅಲಿಪ್ತ ನೀತಿಯ ನಾಯಕನ ಪಾತ್ರ ವಹಿಸಿಗಳಿಸಿದ ಖ್ಯಾತಿಗೆ ಇದೀಗ ಮಸಿ ಬಳಿದುಕೊಂಡಿದೆ. ಕ್ಯೂಬಾ, ಫ್ಯಾಲೆಸ್ತೈನ್ ಹೋರಾಟಗಳಿಗೆ ಸ್ಪೂರ್ತಿ ನೆರವು ನೀಡಿದ್ದ ಭಾರತ ಇದೀಗ ಪ್ರತಿಗಾಮಿ ಇಸ್ರೇಲಿನ ಮಿತ್ರನಾಗಿದೆ.

ದೇಶಕ್ಕೆ ಇಷ್ಟೆಲ್ಲಾ ಅನಿಷ್ಟ ಸಂಭವಿಸುತ್ತಿರುವಾಗಲೂ ವಿರೋಧ ಪಕ್ಷವಾದ ಕಾಂಗ್ರೆಸ್ಸು ಬಿಜೆಪಿಯ ಜನವಿರೋಧಿ ನೀತಿಗಳಿಗೆ ಮಿತ್ರನಂತೆ ಬೆಂಬಲ ನೀಡುತ್ತಾ ಬಂದಿದೆ. ದೇಶದ ಜನತೆ ಉಭಯ ಪಕ್ಷಗಳಿಂದ ಬೇಸತ್ತು ಹೋಗಿದ್ದಾರೆ. ಮೂರನೇ ಶಕ್ತಿಗಾಗಿ ಹುಡುಕಾಟ ನಡೆಸಿದ್ದಾರೆ. ಪ. ಬಂಗಾಳದ ಎಡರಂಗ ಹಾಗೂ ಕೇರಳದಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದ ಎಡಪ್ರಜಾಪ್ರಭುತ್ವ ರಂಗಗಳು ಪರ್ಯಾಯದಾರಿಯನ್ನು ತೋರಿಸಿವೆ. ನಮ್ಮ ನೆರೆಯ ಕೇರಳವು ಶೈಕ್ಷಣಿಕ ರಂಗದಲ್ಲಾಗಲೀ ಆರೋಗ್ಯ ರಂಗದಲ್ಲಾಗಲೀ, ರೇಶನ್ ವ್ಯವಸ್ಥೆಯಲ್ಲಾಗಲೀ ದೇಶಕ್ಕೆ ಮಾದರಿಯಾಗಿದೆ. ಪ.ಬಂಗಾಳದ ಭೂಮಿ ಹಂಚುವಿಕೆಯು ವಿಶ್ವದ ಗಮನ ಸೆಳೆದಿದೆ. ಎರಡನೇದಾಗಿ ಹೋರಾಟಗಳ ಮೂಲಕ ದೇಶದಾದ್ಯಂತ ಪರ್ಯಾಯ ನೀತಿಗಳು ಜ್ಯಾರಿಯಾಗುವಂತೆ ಪ್ರಯತ್ನಿಸ ಬೇಕು. ಬಿಜೆಪಿಯು ಇಡೀ ದೇಶದಲ್ಲಿ ಹಬ್ಬಿಸಿರುವ ಅಂದಾಕಾರ ವನ್ನು ದೇಶದ ಎಲ್ಲಾ ವಿಭಾಗದ ಜನಗಳ ಐಕ್ಯ ಹೋರಾಟದ ಮೂಲಕ ತೊಲಗಿಸಿ, ಬೆಳಕಿನೆಡೆಗೆ ಸಾಗಿಸುವ ಕೆಲಸವನ್ನು ಸಿಪಿಐ(ಎಂ)ನ ಕಾರ್ಯಕರ್ತರು, ಹಿತೈಷಿಗಳು ಮಾಡಬೇಕಾಗಿದೆ." ಎಂದು ವಿಜಯರಾಘವನ್ ಕರೆಯಿತ್ತರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್. ಸೂರ್ಯನಾರಾಯಣರಾವ್‌ರವರು, ಕಾಂಗ್ರೆಸ್‌ಗೆ ಪರ್ಯಾಯ ನೀಡುತ್ತೇವೆಂದು ಅಧಿಕಾರಕ್ಕೆ ಬಂದ ಬಿಜೆಪಿ ದೇಶವನ್ನು ನುಚ್ಚುನೂರು ಮಾಡಿದೆ. 1 ಕೋಟಿ ಉದ್ಯೋಗ ನೀಡುತ್ತೇವೆಂದು ಭರವಸೆ ನೀಡಿದ ಬಿಜೆಪಿ ಉದ್ಯೋಗಿಗಳನ್ನು ನಿರುದ್ಯೋಗಿಗಳನ್ನಾಗಿಸುತ್ತಿದೆ. ದೇಶದ ಆರ್ಥಿಕತೆಗೆ ಮಹೋನ್ನತ ಕೊಡುಗೆಗಳನ್ನು ನೀಡಿದ ಜೀವವಿಮಾ ನಿಗಮ, ಬ್ಯಾಂಕುಗಳನ್ನು ಖಾಸಗಿಕರಣಗೊಳಿಸಿ ದೇಶವನ್ನು ವಿನಾಶದತ್ತ ಒಯ್ಯುತ್ತಿದೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ. ಮಾಧವರವರು ಭಯೋತ್ಪಾದಕತೆಯನ್ನು ಅಲ್ಪಸಂಖ್ಯಾತರೊಂದಿಗೆ ಸಮೀಕರಿಸುವ ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡರು. ಮಹಾತ್ಮ ಗಾಂಧಿಯವರನ್ನು ಹತ್ಯೆಗೈದ ಭಯೋತ್ಪಾದಕ ನಾಥೂರಾಮಗೋಡ್ಸೆ ಓರ್ವ ಹಿಂದೂ ಮತಾಂಧ ಮೂಲಭುತವಾದಿ ಎಂಬುದನ್ನು ಮರೆಯಲಾಗದು ಎಂದರು.

ಸಭೆಯ ಆರಂಭಕ್ಕೆ ಬಾವುಟ ಗುಡ್ಡೆಯಿಂದ ಸುಮಾರು 10 ಸಾವಿರ ಸಿಪಿಐ(ಎಂ) ಕಾರ್ಯಕರ್ತರ ಮತ್ತು ಹಿತೈಷಿಗಳ ಬೃಹತ್ ಆಕರ್ಷಕ ರ್‍ಯಾಲಿ ನಡೆಯಿತು. ಮೆರವಣಿಗೆಯಲ್ಲಿದ್ದ ವಿವಿಧ ವೇಷಭೂಷಣಗಳು, ಸಾಂಸ್ಕೃತಿಕ ಪ್ರಕಾರಗಳು ನಾಗರೀಕರ ಗಮನ ಸೆಳೆದವು. ಮೆರವಣಿಗೆಕಾರರಲ್ಲಿ ಗಣನೀಯ ಸಂಖ್ಯೆಲ್ಲಿ ಮಹಿಳೆಯರಿದ್ದುದು ಗಮನಾರ್ಹವಾಗಿತ್ತು.

ಜಿಲ್ಲಾ ಕಾರ್ಯದರ್ಶಿ ಕೆ.ಆರ್. ಶ್ರೀಯಾನ್‌ರವರು ಸಮ್ಮೇಳನ ಕೈಗೊಂಡ ನಿರ್ಣಯಗಳ ವಿವರಗಳನ್ನು ನೀಡಿದರು. ಸ್ವಾಗತ ಸಮಿತಿಯ ಕಾರ್ಯದರ್ಶಿ ಬಾಲಕೃಷ್ಣಶೆಟ್ಟಿ ಸ್ವಾಗತಿಸಿದರು. ಯಾದವ ಶೆಟ್ಟಿಯವರು ವಂದಿಸಿದರು.

ದ.ಕ. ಉಡುಪಿ ಎರಡು ಜಿಲ್ಲಾಸಮಿತಿಗಳ ರಚನೆ: ಸಂಘಟನಾತ್ಮಕ ಅನುಕೂಲತೆಗಾಗಿ ಸಿಪಿಐ(ಎಂ)ನ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಮಿತಿಗಳು, ರಚನೆಯಾದವು. ದಕ್ಷಿಣ ಕನ್ನಡ ಜಿಲ್ಲಾಸಮಿತಿಯ ಕಾರ್ಯದರ್ಶಿಯಾಗಿ ಕೆ.ಆರ್. ಶ್ರೀಯಾನ್‌ರವರು ಪುನರಾಯ್ಕೆಗೊಂಡರು. ನೂತನ ಉಡುಪಿ ಜಿಲ್ಲಾಸಮಿತಿ ಕಾರ್ಯದರ್ಶಿಯಾಗಿ ಕೆ. ಶಂಕರ್ ಆಯ್ಕೆಯಾಗಿದ್ದಾರೆ.

- ನಾಗೇಶ್‌ಕುಮಾರ್

ಸಿಪಿಐ(ಎಂ) ಸಮ್ಮೇಳನ ನಗರದಲ್ಲಿ ಜನಮನ ಸೆಳೆದ ಚಿತ್ರಗಳು

ಸಿಪಿಐ(ಎಂ)ನ 17ನೇ ಜಿಲ್ಲಾ ಸಮ್ಮೇಳನವು ಕಾಮ್ರೇಡ್ ಪಿ. ರಾಮಚಂದ್ರರಾವ್ ನಗರ (ಕುಲಾಲಭವನ, ಮಂಗಳಾದೇವಿ)ದಲ್ಲಿ ಪ್ರದರ್ಶಿಸಲಾದ ಆಕರ್ಷಕ ಕಟೌಟ್‌ಗಳು ನಾಗರಿಕರ ಗಮನ ಸೆಳೆಯುವಲ್ಲಿ ಯಶಸ್ವಿಯಾದವು.

ಯುದ್ಧವನ್ನು ವಿರೋಧಿಸುವ, ಶಾಂತಿಯ ಅಗತ್ಯತೆಯನ್ನು ಬಯಸುವ, ಕೇಂದ್ರ ಮುಕ್ತ ಆಮದು ನೀತಿ ಕೃಷಿಕರ ಮೇಲೆ ಬೀರುವ ಪರಿಣಾಮಗಳು ಕೋಮುವಾದದ ವಿಷಜ್ವಾಲೆ, ನಿರುದ್ಯೋಗಿಗಳನ್ನು ಸತಾಯಿಸುತ್ತಿರುವ ಕೇಂದ್ರ ಸರಕಾರದ ನೀತಿಗಳು, ಶಿಕ್ಷಣದ ಕೇಸರೀಕರಣ-ಮುಂತಾದವುಗಳನ್ನು ಪ್ರತಿಬಿಂಬಿಸುವ ಅಣಕವಾಡುವ, ವ್ಯಂಗ್ಯವಾಡುವ ಆಕರ್ಷಕ ವರ್ಣಮಯ ಚಿತ್ರಗಳು ಅಪಾರ ಸಂಖ್ಯೆಯ ಜನರ ಮುಕ್ತ ಪ್ರಶಂಸೆಗೊಳಗಾದವು.

ಸಮ್ಮೇಳನವನ್ನು ಎಸ್. ಸೂರ್ಯನಾರಾಯಣರಾವ್ ಉದ್ಘಾಟಿಸಿದರು. ಆರಂಭದಲ್ಲಿ ಹಿರಿಯ ಸಂಗಾತಿ ಸಿ.ನಂಜುಂಡಪ್ಪನವರು ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನದ ಕಲಾಪಗಳು ಆರಂಭಗೊಂಡವು.

ಬಿಜೆಪಿಯವರ ಮೂಷಿಕವಾಹನ ಭಕ್ತಿ!

'ಬಿಜೆಪಿಯವರಿಗೆ ದೇವರುಗಳೆಂದರೆ ಅತಿ ಪ್ರೀತಿ! ಇದೀಗ ಅವರು ದೇವರುಗಳ ವಾಹನವನ್ನು ಪ್ರೀತಿಸಲಾರಂಭಿಸಿದ್ದಾರೆ.

ನಮ್ಮ ದೇಶದ ರೇಶನ್ ಅಂಗಡಿಗಳಲ್ಲಿ ಧವಸದಾನ್ಯಗಳೇ ಮಾಯವಾಗಿರುವಾಗ ನಮ್ಮ ದೇಶದ ಗೋಡೌನ್‌ನಲ್ಲಿ 6-4 ಮಿಲಿಯ ಟನ್ ಅಕ್ಕಿ, ಗೋಧಿ ದವಸಧಾನ್ಯಗಳು ಕೊಳೆಯುತ್ತಿವೆ. 40 ಕೋಟಿ ಜನರು ಬಡತನದ ರೇಖೆಯ ಕೆಳಗೆ ವಾಸಿಸುತ್ತಾ ತಿನ್ನಲು ಆಹಾರವಿಲ್ಲದೆ ನರಳುತ್ತಿರುವಾಗ ದಾಸ್ತಾನು ಮಳಿಗೆಗಳಲ್ಲಿ ಅಕ್ಕಿ, ಗೋಧಿಗಳು ಗಣಪತಿ ವಾಹನ ಇಲಿಗಳ ಪಾಲಾಗುತ್ತಿದೆ. ಒಂದೆಡೆ ಭಾರತ ಮಾತಾಕೀ ಜೈ' ಎಂದು ಹೇಳುತ್ತಾ ಇನ್ನೊಂದೆಡೆ ಭಾರತ ಮಾತೆಯ ಮಕ್ಕಳಿಗೆ ಒಪ್ಪೊತ್ತಿನ ಊಟ ಸಿಗದಂತೆ ಮಾಡುವಲ್ಲಿ ಯಶಸ್ಸು ಪಡೆದಿದ್ದಾರೆ. ನಮ್ಮನ್ನಾಳುವ ಸಂಘ ಪರಿವಾರಿಗಳು".

ತಮ್ಮ ಹರಿತವಾದ ವ್ಯಂಗ್ಯ ಮಾತುಗಳಿಂದ ಬಿಜೆಪಿ ಸರಕಾರವನ್ನು ಸಿಪಿಐ(ಎಂ)ನ ಯುವ ಸಂಸದ ವಿಜಯರಾಘವನ್ ಚುಚ್ಚಿದ ಪರಿಯಿದು

ಕಾಂಗ್ರೆಸ್ಸು - ಬಿಜೆಪಿಗಳ ಪ್ರಜಾಪ್ರಭುತ್ವ ನೀತಿ!

ಕಾಂಗ್ರೆಸ್ಸು, ಬಿಜೆಪಿಗಳು ತಾವು ಪ್ರಜಾಪ್ರಭುತ್ವ ಪಕ್ಷಗಳೆಂದು ಅಬ್ಬರಿಸುತ್ತವೆ. ಕಾಂಗ್ರೆಸ್ಸಿನ ಅಧ್ಯಕ್ಷರನ್ನು ಯಾರು ಯಾರು ಆಯ್ಕೆಮಾಡುತ್ತಾರೆ? ಪ್ರಧಾನ ಕಾರ್ಯದರ್ಶಿಗಳನ್ನು ಪಿ.ಸಿ.ಸಿ. ಅಧ್ಯಕ್ಷರನ್ನು ಯಾರು ಆಯ್ಕೆಗೊಳಿಸುತ್ತಾರೆ? ಎಲ್ಲವೂ ನೇಮಕಾತಿಯೇ! ಇತ್ತೀಚೆಗೆ ದೆಹಲಿಯಲ್ಲಿ ತಮಾಷೆಯೊಂದು ನಡೆಯಿತು. ಕಾಂಗ್ರೆ ಅಧ್ಯಕ್ಷೆ ಸೋನಿಯಾರ ಪುತ್ರಿ ಪ್ರಿಯಾಂಕಳಿಗೆ ಮಗು ಜನಿಸಿದಕ್ಕೆ ಕಾಂಗ್ರೆಸ್ ಕಛೇರಿಯಲ್ಲಿ ಸಮಾರಂಭ ಏರ್ಪಡಿಸಲಾಗಿತ್ತು. ಆ ಸಮಾರಂಭದಲ್ಲಿ ಆ ಮಗು ಮುಂದೆ ಕಾಂಗ್ರೆಸ್ ಅಧ್ಯಕ್ಷರಾಗುವರೆಂದು ಘೋಷಿಸಲಾಯಿತು! ಇದು ಕಾಂಗ್ರೆಸ್‌ನ ಪ್ರಜಾಪ್ರಭುತ್ವ!

ಬಿಜೆಪಿಯೂ ಹಿಂದೆ ಬಿದ್ದಿಲ್ಲ. ಸಂಘ ಪರಿವಾರ, ಆರೆಸ್ಸೆಸ್‌ನಲ್ಲಿ ಪ್ರಜಾಪ್ರಭುತ್ವವೆಂಬುದೇ ಇಲ್ಲ. ಸರಸಂಘ ಚಾಲಕನನ್ನು ಆಯ್ಕೆ ಮಾಡುವುದು ಸದಸ್ಯರಲ್ಲ ಹಿಂದಿನ ಸರಸಂಘಚಾಲಕರ ಚೀಟಿಯಂತೆ ನೇಮಕ.

ಆದರೆ ಸಿಪಿಐ(ಎಂ)ನಲ್ಲಿ ಪ್ರಜಾಪ್ರಭುತ್ವದ ಶ್ರೇಷ್ಠ ಪರಂಪರೆಯಿದೆ. 3 ವರ್ಷಕ್ಕೊಮ್ಮೆ ತಳಮಟ್ಟದ ಶಾಖೆಯಿಂದ ಹಿಡಿದು ರಾಷ್ಟ್ರೀಯ ಮಟ್ಟದವರೆಗೆ ಸಮ್ಮೇಳನ ನಡೆಯುತ್ತದೆ. ಪಕ್ಷದ ಸದಸ್ಯರೇ ಸಮಿತಿಯನು, ಕಾರ್ಯದರ್ಶಿಯನು ಆಯ್ಕೆಮಾಡುತ್ತಾರೆ...

ಸಮಕಾಲೀನ ಸವಾಲು ಎದುರಿಸಲು ಜನ ಚಳುವಳಿಯ ಸಮರ್ಥ ಸಂಘಟನೆ ಬೇಕು

ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮ್ಮೇಳನ

ವರದಿ : ಸಿ.ಆರ್.ಭಟ್


ಸಿ.ಪಿ.ಐ (ಎಂ) ಧಾರವಾಡ ಜಿಲ್ಲಾ ಸಮ್ಮೇಳನ ನವೆಂಬರ್ 17-18-2001 ರಂದು ಧಾರವಾಡದ ಸ್ಕೌಟ್ ಹಾಲಿನಲ್ಲಿ ಕಾಂ। ಇ.ಎಂ.ಎಸ್. ನಂಬೂದರಿ ಪಾಡ್ ಸಭಾಂಗಣ ಮತ್ತು ಕಾಂ। ಪಿ. ರಾಮಚಂದ್ರರಾವ್ ವೇದಿಕೆಯಲ್ಲಿ ನಡೆಯಿತು. ರಾಜ್ಯದಲ್ಲಿ ಜನತಾದಳದ ಒಢಕಿನಿಂದಾಗಿ, ಬೆಂಗಳೂರನ್ನು ಸಿಂಗಾಪುರ ಮಾಡುವ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಿದ್ದು, ಪ್ರಮುಖ ವಿರೋಧ ಪಕ್ಷವಾದ ಬಿ.ಜೆ.ಪಿ. ತನ್ನ ನೇತೃತ್ವದ ಕೇಂದ್ರ ಸರಕಾರದ ಜನವಿರೋಧಿ ನೀತಿ ಆರ್ಥಿಕ ನೀತಿಯನ್ನು ಮರೆಮಾಚಿ ಅಧಿಕಾರಕ್ಕಾಗಿ ತಪತಪಿಸುತ್ತ ಆಗಾಗ ತನ್ನ ಅಟಾಟೋಪಗಳನ್ನು ಪ್ರದರ್ಶಿಸುತ್ತ ಇರುವ ಹಿನ್ನೆಲೆಯಲ್ಲಿ, ಪರ್ಯಾಯ ಶಕ್ತಿಗಾಗಿ ಸಿ.ಪಿ.ಐ(ಎಂ) ಪ್ರಯತ್ನಿಸುತ್ತಿದೆ. ಇದರ ಅಂಗವಾಗಿ ಧಾರವಾಡ ಜಿಲ್ಲಾ ಸಮಿತಿಯು ಈ ಪ್ರದೇಶದಲ್ಲಿ ರಾಜಕೀಯ ಪರಿಸ್ಥಿತಿಯನ್ನು ಮತ್ತು ನಮ್ಮ ಮಧ್ಯ ಪ್ರವೇಶವನ್ನು ಸಮ್ಮೇಳನದಲ್ಲಿ ಮಂಡಿಸಿದ ವರದಿಯಲ್ಲಿ ವಿಮರ್ಶಿಸಲಾಗಿದೆ.

ಲೋಕ ಸಭಾ ವಿಧಾನ ಸಭಾ ಚುನಾವಣೆ

ಸೆಪ್ಟೆಂಬರ್ 99ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಧಾರವಾಡ ಉತ್ತರ ಕ್ಷೇತ್ರವನ್ನು ಬಿಜೆಪಿ ಉಳಿಸಿಕೊಂಡಿದೆ. ಕಾಂಗ್ರೆಸ್ 2ನೇ ಸ್ಥಾನಕ್ಕೆ ಬಂದು, ಜನತಾ ದಳ (ಎಸ್.) 3ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಧಾರವಾಡ ದಕ್ಷಿಣದಲ್ಲಿ ಬಿಜೆಪಿ ಲೋಕಶಕ್ತಿಯ ಹಾಲಿ ಅಭ್ಯರ್ಥಿ ಪುನಃ ಸ್ಪರ್ಧಿಸಿದ್ದು, ಅವರನ್ನು ಅಲ್ಪ ಸಂಖ್ಯಾತರ ಕಾಂಗ್ರೆಸ್ ಅಭ್ಯರ್ಥಿ ಸೋಲಿಸಿ ಗೆದಿದ್ದಾರೆ. ಜನತಾ ದಳ (ಎಸ್) 3ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ದಾವಣಗೆರೆಯಲ್ಲಿ ಕಾಂಗ್ರೆಸ್‌ನ್ನು ಹಿಮ್ಮೆಟ್ಟಿಸಿ ಬಿಜೆಪಿ ಅಭ್ಯರ್ಥಿ ಗೆದ್ದಿದ್ದಾರೆ. ಜನತಾ ದಳ (ಎಸ್) 3ನೇ ಸ್ಥಾನಕ್ಕೆ ಇಳಿದಿದೆ. ಚಿತ್ರದುರ್ಗದಲ್ಲಿ ಕಾಂಗ್ರೆಸ್ ತನ್ನ ಸ್ಥಾನ ಉಳಿಸಿಕೊಂಡು ಬಿಜೆಪಿ ಮತ್ತು ಜನತಾದಳ (ಎಸ್) 2ನೇ ಮತ್ತು 3ನೇ ಸ್ಥಾನಕ್ಕೆ ತಳ್ಳಲ್ಪಟ್ಟಿವೆ. ಈ ಪ್ರದೇಶದ ಒಟ್ಟು ನಾಲ್ಕು ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡು ಸ್ಥಾನಗಳನ್ನು ಕ್ಷೇತ್ರ ಬದಲಾದರೂ ಉಳಿಸಿಕೊಂಡಿವೆ.

1999ರಲ್ಲಿ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದ 8 ಸ್ಥಾನಗಳಲ್ಲಿ ಕಾಂಗ್ರೆಸ್ 2 ಸ್ವತಂತ್ರ 3, ಬಿಜೆಪಿ 2 ಮತ್ತು ಜನತಾದಳ (ಯು) 1 ಸ್ಥಾನ ಗಳಿಸಿವೆ. ಸ್ವತಂತ್ರ ಅಭ್ಯರ್ಥಿಗಳು ನತಂರ ಕಾಂಗ್ರೆಸ್ ಸೇರಿದರು. ಚಿತ್ರದುರ್ಗ ಲೋಕಸಭಾ ಕ್ಷೇತ್ರದ 8 ಸ್ಥಾನಗಳಲ್ಲಿ ಕಾಂಗ್ರೆಸ್ 5, ಬಿಜೆಪಿ 1, ಪಕ್ಷೇತರರು 2 ಸ್ಥಾನ ಗೆದ್ದಿದ್ದಾರೆ. ಜನತಾ ದಳದ ಎರಡು ಬಣಗಳು ಹೀನಾಯ ಸೋಲು ಅನುಭವಿಸಿವೆ. ದಾರವಾಡ ಉತ್ತರೆ ಲೋಕಸಭಾ ಕ್ಷೇತ್ರದ ದಾರವಾಡ ಗ್ರಾಮೀಣದಲ್ಲಿ ಒಬ್ಬ ಸ್ವತಂತ್ರ ಅಭ್ಯರ್ಥಿ (ನಂತರ ಕಾಂಗ್ರೆಸ್ಸಿಗೆ ಪಕ್ಷಾಂತರ), ಧಾರವಾಡ ನಗರ ಪ್ರದೇಶದಲ್ಲಿ ಮತ್ತು ಹುಬ್ಬಳ್ಳಿ ಗ್ರಾಮೀಣದಲ್ಲಿ ಬಿಜೆಪಿ ಹುಬ್ಬಳ್ಳಿ ನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದಿದ್ದಾರೆ. ಬಿಜೆಪಿಯ ಭದ್ರ ಕೋಟೆಯಾದ ಹುಬ್ಬಳ್ಳಿ ನಗರ ಕ್ಷೇತ್ರದಲ್ಲಿ ಬಿಜೆಪಿ ಸೋಲು ಅನುಭವಿಸಿದ್ದು ಮತ್ತು ಧಾರವಾಡ ದಕ್ಷಿಣ ಲೋಕಸಭಾ ಕ್ಷೇತ್ರದ ಹಾನಗಲ್ಲ ಮತ್ತು ರಾಣೆಬೆನ್ನೂರ ವಿಧಾನ ಸಭಾ ಕ್ಷೇತ್ರಗಳಲ್ಲಿ ಜನತಾದಳ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ಇಬ್ಬರು ಅಭ್ಯರ್ಥಿಗಳು ಸೋತು ಕಾಂಗ್ರೆಸ್ ಗೆದ್ದಿರುವದು ಗಮನಾರ್ಹ. ಗದಗ ಜಿಲ್ಲೆಯಲ್ಲಿ ಮುಂಡರಗಿ ವಿಧಾನ ಸಭಾ ಕ್ಷೇತ್ರದಲ್ಲಿ ಜನತಾದಳ(ಯು) ಗೆದ್ದು, ಉಳಿದ 4 ಸ್ಥಾನಗಳಲ್ಲಿ ಕಾಂಗ್ರೆಸ್ ಗೆದ್ದಿತು.

ಹಾನಗಲ್ಲ ವಿಧಾನ ಸಭಾ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾಗಿ ನಮ್ಮ ಪಕ್ಷದ ಅಭ್ಯರ್ಥಿಯು ಸ್ಪರ್ಧಿಸಿರುವುದು ಸ್ವಾಗತಾರ್ಹ ಹಾಗೂ ಸಾಹಸದಾಯಕವಾಗಿದೆ. ಚುನಾವಣೆಯ



ಸಮ್ಮೇಳನ ಉದ್ಘಾಟಿಸಿದ ಬಿ.ಮಾಧವ್, ನಿತ್ಯಾನಂದ ಸ್ವಾಮಿ, ಸಿ.ಆರ್.ಭಟ್, ಆರ್.ಹೆಚ್.ಅಯ್ಯ ವೇದಿಕೆಯಲ್ಲಿ

ಪ್ರಚಾರ ಮತ್ತು ಪ್ರಕ್ಷೋಭೆಗಳಲ್ಲಿ ನಮ್ಮ ನೂರಾರು ಸಂಗಾತಿಗಳು ಯಾವ ಪ್ರತಿಫಲಾಪೇಕ್ಷೆ ಇಲ್ಲದೇ ಗ್ರಾಮೀಣ ರೈತರ ಹಾಗೂ ಕೃಷಿ ಕೂಲಿಕಾರರ ನೆರವಿನಿಂದ ಯಶಸ್ವಿ ಪಡೆದರೂ ಎದುರಾಳಿಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಬೆಂಬಲಿತ ಜನತಾದಳ (ಯು) ಅಭ್ಯರ್ಥಿಗಳ ಅಬ್ಬರದ ಪ್ರಚಾರ, ಜಾತಿ ರಾಜಕೀಯ, ಕೊನೆಯ ದಿನಗಳಲ್ಲಿ ಹಣ ಹೆಂಡಗಳ ಹರಿದಾಟ, ಇತ್ಯಾದಿಗಳಿಂದ ಕಾಂಗ್ರೆಸ್ ಅಭ್ಯರ್ಥಿ ಗೆದ್ದು, ಜನತಾದಳ (ಯು) 2ನೇ ಸ್ಥಾನ ಗಳಿಸಿ ನಮ್ಮ ಅಭ್ಯರ್ಥಿ ನಿರೀಕ್ಷಿಸಿದಷ್ಟು ಮತ ಗಳಿಸದೇ ಸೋಲು ಅನುಭವಿಸುವಂತಾಯಿತು.

ಪಂಚಾಯತ್, ಪುರಸಭಾ ಚುನಾವಣೆಗಳು :

ಮುಂದೆ 2000ದ ಸಾಲಿನಲ್ಲಿ ನಡೆದ ಪಂಚಾಯತ್ ಚುನಾವಣೆಗಳಲ್ಲಿ 5 ಜಿಲ್ಲೆಗಳ ಪಂಚಾಯತಿಗಳು ಕಾಂಗ್ರೆಸ್ಸಿನ ಆಳ್ವಿಕೆಗೆ ಒಳಗಾದವು. ಬಿಜೆಪಿಯ ಹಿಂದಕ್ಕೆ ತಳ್ಳಲ್ಪಟ್ಟಿತು. ಜನತಾದಳದ 2 ಬಣಗಳು ತಮ್ಮ ಹಿಂದಿನ ಬಲ ಉಳಿಸಿಕೊಳ್ಳಲು ವಿಫಲವಾದವು.

ಮೇ 2001ರಲ್ಲಿ ಮಹಾನಗರಗಳಿಗೆ ಮತ್ತು ಪುರಸಭೆಗಳಿಗೆ ನಡೆದ ಚುನಾವಣೆಯಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರದ 67 ವಾರ್ಡುಗಳಲ್ಲಿ ಕಾಂಗ್ರೆಸ್ ಬಹುಮತ ಪಡೆಯದಿದ್ದರೂ 1ನೇ ಸ್ಥಾನಗಳಿಸಿತು. ಬಿಜೆಪಿ 2ನೇ ಸ್ಥಾನಕ್ಕೆ ಬಂದಿತು. ಜನತಾದಳ (ಎಸ್) 12 ಸ್ಥಾನಗಳಿಸಿ 3ನೇ ಸ್ಥಾನಕ್ಕೆ ತಳ್ಳಲ್ಪಟ್ಟಿತು. ನಂತರ ಕಾಂಗ್ರೆಸ್ ಅಭ್ಯರ್ಥಿ ಮಹಾ ಪೌರರಾಗಿ ಮತ್ತು ಜನತಾದಳ (ಎಸ್) ಅಭ್ಯರ್ಥಿ ಉಪ ಮಹಾ ಪೌರರಾಗಿ ಆಯ್ಕೆಗೊಂಡರು.

ಅಭಿವೃದ್ಧಿ ಪರ - ಪ್ರತ್ಯೇಕತೆಗೆ ವಿರೋಧ

ಉತ್ತರ ಕರ್ನಾಟಕದ ಜಿಲ್ಲೆಗಳು, ಹೈದರಾಬಾದ್ ಕರ್ನಾಟಕ ಜಿಲ್ಲೆಗಳೂ ಸೇರಿದಂತೆ ನಮ್ಮ ರಾಜ್ಯದ ಇತರ ಪ್ರದೇಶಗಳಿಗೆ ಹೋಲಿಸಿದಾಗ ಆರ್ಥಿಕ ಅಭಿವೃದ್ಧಿಯಲ್ಲಿ ತುಂಬಾ ಹಿಂದುಳಿದಿವೆ. ಕಳೆದ 50ಕ್ಕೂ ಹೆಚ್ಚು ವರ್ಷಗಳ ಅವಧಿಯಲ್ಲಿ ಇಲ್ಲಿಯ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು, ರಾಜ್ಯದ ಯಾವದೇ ಸರಕಾರಕ್ಕೆ ಸಾಧ್ಯವಾಗದೇ ಇದ್ದುದು ವಿಪರ್ಯಾಸ. ಉತ್ತರ ಕರ್ನಾಟಕದ ಸರ್ವತೋಮುಖವಾದ ಅಭಿವೃದ್ಧಿಯ ಭಾಗವಾಗಿ ಹುಬ್ಬಳ್ಳಿಯಲ್ಲಿ ದಕ್ಷಿಣ ಮಧ್ಯ ರೈಲ್ವೆ ವಲಯ ಸ್ಥಾಪಿಸುವದು ಮತ್ತು ಈ ಪ್ರದೇಶದಲ್ಲಿ ಹೈಕೋರ್ಟ್ ವಿಭಾಗೀಯ ಪೀಠ ಸ್ಥಾಪಿಸುವದು, ಈ ಎರಡು ಮುಖ್ಯ ಬೇಡಿಕೆಗಳನ್ನು ಒತ್ತಾಯಿಸಿ ಪ್ರಬಲವಾದ ಜನಾಂದೋಲನ ನಡೆಯುತ್ತಾ ಬಂದಿದೆ. ಹುಬ್ಬಳ್ಳಿಯಲ್ಲಿ ನೂತನ ರೈಲ್ವೆ ಸ್ಥಾಪಿಸಲು ಇದ್ದ ಅಡೆತಡೆಗಳನ್ನು ಇತ್ತೀಚಿಗೆ ಸುಪ್ರೀಂ ಕೋರ್ಟ ತೆರವು ಮಾಡಿತು. ಸಿಪಿಐ(ಎಂ) ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ನಡೆಯುವ ಜನಾಂದೋಲನವನ್ನು ಸ್ಥಳೀಯವಾಗಿ ಬೆಂಬಲಿಸುತ್ತ ಬಂದಿದೆ. ಆದರೆ ಈ ಆಂದೋಲನ ಉತ್ತರ ಕರ್ನಾಟಕದ ಪ್ರತ್ಯೇಕ ರಾಜ್ಯದ ಬೇಡಿಕೆಗೆ ತಿರುಗಿದಾಗ ನಾವು ಅದರಿಂದ ದೂರ ಉಳಿಯಬೇಕಾಯಿತು.

ಜಿಲ್ಲಾ ಸಮ್ಮೇಳನದಲ್ಲಿ ಉತ್ತರ ಕರ್ನಾಟಕದ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ವಿರೋಧಿಸಿ ಮತ್ತು ಈ ಪ್ರದೇಶದ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಿ ಸರ್ವತೋಮುಖವಾದ ಅಭಿವೃದ್ಧಿಗಾಗಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಲು ಒಂದು ಠರಾವನ್ನು ಅಂಗೀಕರಿಸಲಾಯಿತು. ಅಲ್ಲದೇ ಹಲವು ಜ್ವಲಂತ ಪ್ರದೇಶಗಳ ಬಗ್ಗೆ ಠರಾವುಗಳನ್ನು ಅಂಗೀಕರಿಸಲಾಯಿತು.

ಧಾರವಾಡ ಜಿಲ್ಲಾ ಸಮ್ಮೇಳನದ ನಿರ್ಣಯಗಳು ಮತ್ತು ನಡಾವಳಿಗಳು ಈ ಪ್ರದೇಶದಲ್ಲಿ ನಮ್ಮ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳನ್ನು ಹೊಸ ವಿಚಾರ ಹೊಸ ವಿಧಾನ, ಹೊಸ ಕ್ಷೇತ್ರಗಳ ಮೂಲಕ ಆತ್ಮ ವಿಶ್ವಾಸದಿಂದ ಕಟ್ಟಿ ಬೆಳೆಸಲು

ಪುಟ 11 ಕ್ಕೆ

ಕೋಮು ಗಲಭೆ ಸಂದರ್ಭಗಳಲ್ಲಿ ....

ನಮ್ಮ ಇತಿ-ಮಿತಿಗಳಲ್ಲಿ ಕೆಲವು ಸ್ಥಳೀಯ ಸಮಸ್ಯೆಗಳನ್ನು ಎತ್ತಿಕೊಂಡು ನಾವು ಮಧ್ಯಪ್ರವೇಶ ಮಾಡಿದ್ದೇವೆ. ಹುಬ್ಬಳ್ಳಿಯ ಈದ್ಗಾ ಮೈದಾನದ ವಿವಾದ ಜನತಾ ದಳ ಸರಕಾರ ಬಂದ ಮೇಲೆ ಪರಿಹಾರವಾದ ನಂತರ, ಕೋಮುವಾದಿಗಳ ಗಲಭೆ ಭುಗಿಲೆಬ್ಬಿಸಲು ಬಿಜೆಪಿ ಸಂಘ ಪರಿವಾರ ಹೋಳಿಯಂತಹ ಹಬ್ಬಗಳನ್ನು ಬಳಸಿಕೊಳ್ಳುತ್ತಿದೆ. ಇತ್ತೀಚೆಗೆ ಹಿಂದೂ ವಿಶ್ವ ಪರಿಷತ್‌ನ ಮುಖಂಡರಾದ ಅಶೋಕ ಸಿಂಘಾಲ ಅವರ 75ನೇ ಹುಟ್ಟು ಹಬ್ಬ ಆಚರಿಸುವ ನೆಪದಿಂದ 50.000ಕ್ಕೂ ಹೆಚ್ಚು ಸಂಖ್ಯೆಯಲ್ಲಿ ನಗರದ ಕೆಲವು ಆಯಕಟ್ಟಿನ ಪ್ರದೇಶವೂ ಸೇರಿದಂತೆ ಹಲವು ಬೀದಿಗಳ ಮೂಲಕ ಉದ್ರಿಕ್ತ ಮೆರವಣಿಗೆ ನಡೆಯಿತು. ವಿವಾದಾತ್ಮಕ ಈದ್ಗಾ ಮೈದಾನದಲ್ಲಿ ಸಂಘ ಪರಿವಾರದ ಕೆಲವು ತಮ್ಮ ಕೇಸರಿ ಧ್ವಜವನ್ನು ಏರಿಸಲು ನಡೆಸಿದ ಪ್ರಯತ್ನದ ಫಲವಾಗಿ ಪರಿಸ್ಥಿತಿ ಪೊಲಿಸರ ಕೈ ತಪ್ಪಿತು. ಮೆರವಣಿಗೆ ಉದ್ದಕ್ಕೂ ಅಲ್ಪ ಸಂಖ್ಯಾತರ ಅಂಗಡಿ ಮತ್ತು ಪೂಜಾ ಸ್ಥಳಗಳ ಮೇಲೆ ದಾಳಿ ನಡೆಯಿತು. ಇದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು. ಮುಂದೆ ವಾರಗಟ್ಟಲೆ ಕರ್ಫ್ಯೂ ಮತ್ತು ಸೆಕ್ಷನ್ 144 ಜಾರಿಗೊಂಡು ಜನ ಸಾಮಾನ್ಯರು ತೀವ್ರ ಕೋರ್ಟಿನ ಅದೇಶದಂತೆ ಈದ್ಗಾ ಮೈದಾನ ವಿವಾದಕ್ಕೆ ಅಂತಿಮ ಪರಿಹಾರ ಕಂಡುಕೊಳ್ಳಲು ಮಹಾ ನಗರದಲ್ಲಿ ವಿವಿಧ ಜಾತಿ ಧರ್ಮಗಳ ಮತ್ತು ರಾಜಕೀಯ ಪ್ರತಿನಿಧಿಗಳಿರುವ ಒಂದು ಸಮಿತಿ ರಚಿಸಲಾಗಿದೆ. ನಮ್ಮ ಪಕ್ಷ ಈ ಸಂದರ್ಭಗಳಲ್ಲಿ ಕೋಮು ಗಲಭೆಗಳಿಗೆ ಒಳಗಾದ ಸಂತ್ರಸ್ತರನ್ನು ಭೇಟಿ ಮಾಡಿ ಸಂತೈಸುವದು, ಶಾಂತಿ ಸಭೆಗಳಲ್ಲಿ ಭಾಗವಹಿಸುವದು, ಪೊಲಿಸ್ ವರಿಷ್ಠ ಅಧಿಕಾರಿಗಳಿಗೆ ಮನವಿ ಸಲ್ಲಿಸುವುದು, ನಮ್ಮ ಕಾರ್ಯಕರ್ತರಿರುವ ಪ್ರದೇಶಗಳಲ್ಲಿ ಶಾಂತಿ ಕಾಪಾಡಲು ಪ್ರಯತ್ನಿಸುವದು, ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸುವುದು. ಇತ್ಯಾದಿ ಕ್ರಮಗಳನ್ನು ಕೈಗೊಳ್ಳುತ್ತಾ ಬಂದಿವೆ. ಈ ಹಿಂದೆ ನಮ್ಮ ಪಕ್ಷದ ಮಾಜಿ ಸಂಸತ್ ಸದಸ್ಯೆ ಸುಭಾಷಿಣಿ ಅಲಿ ಅವರನ್ನು ಹುಬ್ಬಳ್ಳಿಗೆ ಕರೆಯಿಸಿ ಬೃಹತ್ ಶಾಂತಿ ಮೆರವಣಿಗೆ ನಡೆಸಲಾಯಿತು. ಈದ್ಗಾ ಮೈದಾನ ವಿವಾದ ಬಗೆಹರಿಸಲು ಅವರ ನೇತೃತ್ವದ ನಿಯೋಗ ಸ್ಥಳೀಯ ಮೂರು ಸಾವಿರ ಮಠದ ಸ್ವಾಮಿಗಳನ್ನು ಮತ್ತು ಅಂಜುಮನ್ ಸಂಸ್ಥೆಯ ಮುಖಂಡರನ್ನು ಭೇಟಿ ಮಾಡಿತು.

ಹಾನಗಲ್ಲ ತಾಲೂಕಿನ ಅಕ್ಕಿ ಆಲೂರಿನಲ್ಲಿ ಮೇ 1998ರಲ್ಲಿ ಕುರಾನ ಗ್ರಂಥದ ಪ್ರತಿಗಳನ್ನು, ಪೂಜಾ [illegible] ಮತ್ತು ಸಮಾಜ ಮಾಡುವ ಜಮಖಾನೆಗಳನ್ನು ಸಮೀಪದ 'ಕೆರೆ, ಬಾವಿ, ಪೈಯುಖಾನೆಗಳಲ್ಲಿ ಹುದುಗಿ ಹಾಕಿ, ಅಲ್ಪ ಸಂಖ್ಯಾತರನ್ನು ರೊಚ್ಚಿಗೆಬ್ಬಿಸುವಂತೆ ಮಾಡಲಾಯಿತು. ಅವರ ಸ್ಮಶಾನ ಪ್ರದೇಶದಲ್ಲಿ ಕಾಗೆ, ಹಂದಿ, ಕೋಳಿಗಳನ್ನು ಕೊಂದು ಹಾಕಿ ಎಸೆಯಲಾಗಿತ್ತು. ಈ ದುರ್ಘಟನೆಗಳಲ್ಲಿ ಕೋಮುವಾದಿ ಸಂಘ ಪರಿವಾರಗಳ ಕೈವಾಡವಿದೆಯೆಂದು ಸಂಶಯ ಪಡಲಾಗಿದೆ. ನಮ್ಮ ಸ್ಥಳಿಯ ಮುಖಂಡರು ಇದರಲ್ಲಿ ಮಧ್ಯ ಪ್ರವೇಶಿಸಿ ಅಲ್ಪ ಸಂಖ್ಯಾತರು ತಾಳ್ಮೆಗೆಟ್ಟು ಉದ್ವಿಗ್ನರಾಗದಂತೆ ನೋಡಿಕೊಂಡರು. ಶಾಂತಿ ಕಾಪಾಡುವಂತೆ ಮನವೊಲಿಸಿ ದರು. ಹಾವೇರಿಯಲ್ಲಿ ಈ ದುರ್ಘಟನೆಗಳ ವಿರುದ್ಧ ನಿತ್ಯಾನಂದ ಸ್ವಾಮಿಯವರ ನೇತೃತ್ವದಲ್ಲಿ ಬೃಹತ್ ಮೆರವಣಿಗೆ ನಡೆಯಿಸಿ ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಸುಧೀರ್ಘ ಮನವಿ ಸಲ್ಲಿಸಿದರು. ಮುಂದೆ ರಾಜ್ಯ ಸಮಿತಿಯು ನಿಯೋಗ ಈ ಕುರಿತು ಗೃಹ ಸಚಿವರಿಗೆ ಇಂತಹದೇ ಮನವಿ ಸಲ್ಲಿಸಲಾಯಿತು. ಅಕ್ಕಿಆಲೂರಿನಲ್ಲಿ ಸ್ಮಶಾನಕ್ಕೆ ಸಂಬಂಧಿಸಿ, ಹೋಳಿ ಹಬ್ಬದ ಮೆರವಣಿಗೆಗೆ ಸಂಬಂಧಿಸಿ ಅಗಾಗ ಭುಗಿಲೇಳುತ್ತಿರುವ ಕೋಮು ಗಲಭೆಗಳ ಸಂದರ್ಭ ನಮ್ಮ ಸ್ಥಳೀಯ ಸಂಗಾತಿಗಳು ಮಧ್ಯ ಪ್ರವೇಶಿಸಿ ಶಾಂತಿ ಕಾಪಾಡಲು ಪ್ರಯತ್ನಿಸುತ್ತಾ ಬಂದಿರುತ್ತಾರೆ

ಚಳುವಳಿ ವಿಸ್ತರಣೆ, ಐಕ್ಯತೆ ಮಹತ್ವ ಗುರುತಿಸಿದ ಮೈಸೂರು ಸಮ್ಮೇಳನ



ಕೆಂಬಾವುಟ ಎತ್ತಿಹಿಡಿದು ಸಾಗಿದ ಮೆರವಣಿಗೆ

ಪಕ್ಷದ 17ನೇ ಮೈಸೂರು ಜಿಲ್ಲಾ ಸಮ್ಮೇಳನ ಡಿಸೆಂಬರ್ 23-24, 2001ರಂದು ಜರುಗಿತು. ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ಎಂ.ಎನ್. ಉಗ್ರಪ್ಪನವರು ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನದ ಕಾರ್ಯಕ್ರಮ ಆರಂಭವಾಯಿತು. ಪಕ್ಷದ ಸದಸ್ಯರು ಮತ್ತು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದ ಕಾರ್ಮಿಕರು ಘೋಷಣೆಗಳನ್ನು ಕೂಗುತ್ತ ಮೆರವಣಿಗೆ ನಡೆಸಿದರು. ಪುರಭವನದಲ್ಲಿ ಸಮ್ಮೇಳನದ ಉದ್ಘಾಟನೆಯನ್ನು ಕಾರ್ಯದರ್ಶಿ ಸೂರ್ಯ ನಾರಾಯಣರಾವ್‌ನೆರವೇರಿಸಿದರು. ಸಿಪಿಐ(ಎಂ) ಪಕ್ಷದ ಸಮ್ಮೇಳನಗಳ ಮಹತ್ವವನ್ನು ವಿವರಿಸಿದ ಸೂರಿಯವರು ಶಾಖಾಮಟ್ಟದಿಂದ ಅಖಿಲ ಭಾರತ ಮಹಾಧಿವೇಶನದವರೆಗೆ ಹೇಗೆ ಪ್ರಜಾಪ್ರಭುತ್ವದ ತಿರುಳನ್ನು ಕಾಯ್ದುಕೊಳ್ಳಲಾಗುವುದೆಂದು ತಿಳಿಸಿದರು. ಕಳೆದ ಮಹಾಧಿವೇಶನದಿಂದೀಚೆಗೆ



ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಾಗಿರುವ ಬೆಳವಣಿಗೆಗಳನ್ನು ವಿಶ್ಲೇಷಿಸಿದ ಸೂರಿಯವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿಗಳನ್ನು ಕಟುವಾಗಿ ಟೀಕಿಸಿದರು. ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿಯ ಮುಖವಾಡವನ್ನು ಕಿತ್ತೆಸೆದು, ಅದರ ನಿಜವಾದ ಬಣ್ಣವನ್ನು ಬಯಲಿಗೆಳೆದರು. ಐ.ಎಂ.ಎಫ್. ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಸಂಘಟನೆಗಳ ಗುಲಾಮರಂತೆ ವರ್ತಿಸುತ್ತಿರುವ ಸರ್ಕಾರಗಳ ನೀತಿಯಿಂದಾಗಿ ಜನಸಾಮಾನ್ಯರ ಮೇಲೆ, ರೈತರು, ಕಾರ್ಮಿಕರ ಮೇಲೆ ಉಂಟಾಗಿರುವ ದುಷ್ಪರಿಣಾಮಗಳನ್ನು, ಬಿಜೆಪಿಯ ಕೋಮುವಾದಿ ರಾಜಕೀಯದಿಂದುಂಟಾಗಿರುವ ಸಾಮಾಜಿಕ ಕ್ಷೋಭೆಯನ್ನು ವಿಶದವಾಗಿ ವಿವರಿಸಿದ ಸೂರಿಯವರು ಇವುಗಳ ವಿರುದ್ಧ ಐಕ್ಯತೆಯಿಂದ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ದೇಶಕ್ಕೆ ಸ್ವಾತಂತ್ರ್ಯ ಬಂದು 54 ವರ್ಷಗಳಾದರೂ, ಅಧಿಕಾರ ಬಂಡವಾಳ ಶಾಹಿ - ಭೂಮಾಲೀಕರ ವರ್ಗಗಳ ಕೈಯಲ್ಲಿರುವುದರಿಂದ ಜನಸಾಮಾನ್ಯರಿಗೆ ಸ್ವಾತಂತ್ರ್ಯ ಅರ್ಥಪೂರ್ಣವಾಗಿಲ್ಲ. ದುಡಿಯುವ ಜನರ ಕೈಗೆ ಅಧಿಕಾರ ಸಿಕ್ಕಾಗ ಮಾತ್ರ ನಿಜವಾದ ಸ್ವಾತಂತ್ರ್ಯ ಲಭಿಸುವುದೆಂದು ಹೇಳಿದರು.

ಸಿಪಿಐನ ಜಿಲ್ಲಾ ಕಾರ್ಯದರ್ಶಿ ವೆಂಕಟರಾಮಯ್ಯನವರು ಸಮ್ಮೇಳನಕ್ಕೆ ಶುಭ ಹಾರೈಸಿದರು. ಸಮ್ಮೇಳನವು 10 ಸದಸ್ಯರ ಜಿಲ್ಲಾ ಸಂಘಟನಾ ಸಮಿತಿಯನ್ನು ಮಾಡಿತು. ಸಮಿತಿಯ ಕಾರ್ಯದರ್ಶಿಯಾಗಿ ಎನ್.ಎಸ್. ಪ್ರಭಾಕರ್ ಆಯ್ಕೆಯಾದರು.

ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ವೈ. ಗುರುಶಾಂತ್ ಸಮಾರೋಪದಲ್ಲಿ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿ ಸಮ್ಮೇಳನ ಸಾಧಿಸಿದ ಯಶಸ್ಸು ಮತ್ತು ಐಕ್ಯತೆಯನ್ನು ಗುರುತಿಸಿದರು. ಸೂರಿಯವರ ಸಮಾರೋಪ ಭಾಷಣದೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

ಎನ್.ಎಸ್. ಪ್ರಭಾಕರ್.

'ಸಾವಿನ ಕಣಿವೆ' ಮುಳ್ಳೂರು ಘಾಟ್ ರಸ್ತೆ ಸುಧಾರಿಸೀತೇ?

ಹುಬ್ಬಳ್ಳಿಯಿಂದ ಬಿಜಾಪೂರಕ್ಕೆ ಹೋಗುವ ರಾಜ್ಯ ಹೆದ್ದಾರಿಯಲ್ಲಿ ರಾಮದುರ್ಗದ ಸಮೀಪ ಇದೆ ಈ ಸಾವಿನ ಕಣಿವೆ. ಮುಳ್ಳೂರು ಗ್ರಾಮದ ಸಮೀಪದಲ್ಲಿರುವುದರಿಂದ ಮುಳ್ಳೂರು ಘಾಟ್ ಎಂದೇ ಕರೆಯುತ್ತಾರೆ. ಗುಡ್ಡದ ಮೇಲೆ ಅತಿ ಕಡಿದಾಗಿ ನಿರ್ಮಿಸಿದ್ದರಿಂದ ವಾಹನ ಚಾಲಕ ಸ್ವಲ್ಪವೇ ನಿರ್ಲಕ್ಷ್ಯ ತೋರಿದರೂ ಸಾವು ಕಟ್ಟಿಟ್ಟ ಬುತ್ತಿ.

ಪ್ರತಿವರ್ಷ 4-6 ಅಪಘಾತದ ಘಟನೆಗಳು ಜರುಗುತ್ತಲೇ ಇರುತ್ತವೆ. ಈ ಘಾಟ್ ತಪ್ಪಿಸಿ ಬೇರೆ ರಸ್ತೆ ನಿರ್ಮಾಣಕ್ಕೆ ಕಳೆದ ಐವತ್ತು ವರ್ಷಗಳಿಂದ ಜನತೆ ಒತ್ತಾಯಿಸುತ್ತಲೇ ಇದೆ. ಪ್ರತಿವರ್ಷ ಕನಿಷ್ಟ 20 ಜನ ಅಫಘಾತಗಳಲ್ಲಿ ಸಾವನ್ನಪ್ಪುವುದು ವಾಡಿಕೆಯಾಗಿದೆ.

ಕಳೆದ 27.9.01 ರಂದು ಕಂಕನವಾಡಿ ಎಂಬ ಗ್ರಾಮದ ಮದುವೆ ದಿಬ್ಬಣ ಟ್ರ್ಯಾಕ್ಟರಿನಲ್ಲಿ ಈ ಮಾರ್ಗವಾಗಿ ಸಾಗುತ್ತಿದ್ದಾಗ ಅಪಘಾತ ನಡೆಯಿತು. 14 ಜನ ಸಾವಿಗೀಡಾದರು.

ಈ ಕಹಿ ನೆನಪು ಮಾಸುವ ಮೊದಲೇ ದಿನಾಂಕ ಡಿಸೆಂಬರ್ 17 ರಂದು ಇನ್ನೊಂದು ಬಾರಿ ನಡೆಯಿತು. ಗುಲ್ಬರ್ಗಾದಿಂದ ಹುಬ್ಬಳ್ಳಿಗೆ ತೆರಳುತ್ತಿದ್ದ ಬಸ್ಸು ಸಂಜೆ ಅಪಘಾತಕ್ಕೀಡಾಯಿತು. ಸ್ಥಳಈಲ್ಲಿ 15 ಜನ ಸಾವಿಗೀಡಾದರು. ಅನೇಕ ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕೆಎಂಸಿ ಆಸ್ಪತ್ರೆಗೆ ಸಾಗಿಸಲಾಯಿತು. ಮಾರಕ ತಿರುವಿನಲ್ಲಿ ಅಪ್ಪಳಿಸಿದ ಬಸ್ ಸುಮಾರು 400 ಮೀ. ಕೆಳಗೆ ಕೊಳ್ಳದಲ್ಲಿಬಿದ್ದಿತು.

ಈ ಸಾವಿನ ಸರಮಾಲೆ ಇಡೀ ರಾಮದುರ್ಗ ತಾಲೂಕಿನ ಜನತೆಯನ್ನು ದುಃಖಕ್ಕೆ ಈಡುಮಾಡಿತು. ಕಳೆದ ಐದು ದಶಕಗಳಿಂದ ನಡೆಯುತ್ತಿರುವ ಈ ರೀತಿಯ ದುರ್ಘನೆಗಳಿಗೆ ಕೊನೆಹಾಡಲು ಜನ ನಿರ್ಧರಿಸಿದ್ದಾರೆ.

ಘಾಟ್ ರಸ್ತೆ ಪುನರ್ ನಿರ್ಮಾಣ ಹೋರಾಟ ಸಮಿತಿ ರಚನೆಯಾಯಿತು. ಎಲ್ಲಾ ರಾಜಕೀಯ ಪಕ್ಷಗಳ, ಸಂಘ ಸಂಸ್ಥೆಗಳ ಕಾರ್ಯಕರ್ತರನ್ನು ಈ ಸಮಿತಿ ಒಳಗೊಂಡಿತು. 19.12.01 ರಂದು ರಾಮದುರ್ಗ ಬಂದ್ ನಡೆಸಲು ತೀರ್ಮಾನಿಸಲಾಯಿತು.

ಹೆಚ್ಚಿನ ಯಾವ ಪೂರ್ವ ಸಿದ್ಧತೆ ಇಲ್ಲದೆ

'ರಾಮದುರ್ಗ ಬಂದ್'

ಇದ್ದರೂ ಹಿಂದೆಂದೂ ನಡೆಯದ ರೀತಿಯಲ್ಲಿ ರಾಮದುರ್ಗ ಬಂದ್ ನಡೆಯಿತು. ನೂರಕ್ಕೆ 'ನೂರರಷ್ಟು ಯಶಸ್ವೀ ಬಂದ್ . ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ. ಈ ಸಂದರ್ಭ ನಡೆದ ಮೆರವಣಿಗೆಯಲ್ಲಿ ಸುಮಾರು ಐದು ಸಹಸ್ರ ಜನ ಸ್ವಯಂ ಸ್ಫೂರ್ತಿಯಿಂದ ಪಾಲ್ಗೊಂಡರು. ಸಮಿತಿಯ ಪರವಾಗಿ ಜನತೆಯನ್ನು ಸ್ವಾಗತಿಸಿದ ಸಿಪಿಐ(ಎಂ) ಕಾರ್ಯದರ್ಶಿ ವಿ.ಪಿ.ಕುಲಕರ್ಣಿ ಮಾತನಾಡಿ ತಕ್ಷಣ ರಸ್ತೆ ದುರಸ್ತಿಗೆ ಆಗ್ರಹಿಸಿದರು. ಕಾಂಗ್ರೆಸ್‌ನ ಜಗತಾಪ, ಜನತಾದಳದ, ಯಾದವಾಡ, ಅಲ್ಲದೇ ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಬಿ.ಆರ್.ದೊಡಮನಿ ಮತ್ತಿತರರು ಮಾತನಾಡಿದರು.

ಯಾವುದೇ ಸಮಯದಲ್ಲಿ ಉದ್ವೇಗದ ಸಾಧ್ಯತೆ ಇದ್ದ ಪರಿಸ್ಥಿತಿಯನ್ನು ವಿ.ಪಿ.ಕುಲಕರ್ಣಿ, ಬಿ.ಆರ್.ದೊಡಮನಿ ಮತ್ತಿತರರು ಸೂಕ್ತ ರೀತಿಯಲ್ಲಿ ನಿರ್ವಹಿಸಿದರು. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಯಿಸಿ ಒಂದು ರೀತಿಯ ಜನತಾ ಅದಾಲತ್ ನಡೆಯಿತು. ನಿಗದಿ ಗಡುವು ನೀಡಲಾಯಿತು. ಈ ಕ್ರಮದಿಂದ ಜನತೆ ಶಾಂತವಾಗಿ ನಿರ್ಗಮಿಸಿದರು.

ಈಗಾಗಲೇ ಘಾಟಗೆ ಬದಲಿ ರಸ್ತೆಯಾಗಿ ಮೂರು ಪರ್ಯಾಯ ರಸ್ತೆ ನಿರ್ಮಾಣದ ಎಸ್ಟಿಮೇಟ್ ತಯಾರಿಸಲಾಗಿದೆ. ಪರಿಣತರ ಸಮಿತಿ ಭೇಟಿ ನೀಡಿದೆ. ಲೋಕೋಪಯೋಗಿ ಇಲಾಖಾ ಅಧಿಕಾರಿಗಳಾದ ಹಿರೇಮಠ ಮತ್ತು ಮಸಗುಪ್ಪಿ ಇವರುಗಳು ಅತ್ಯಂತ ಕಾಳಜಿಯಿಂದ ತಾತ್ಕಾಲಿಕ ರಿಪೇರಿ ಕೆಲಸ ವಗೈರೆ ನಿರ್ವಹಿಸುತ್ತಿದ್ದಾರೆ.

ಕುಂಭಕರ್ಣ ನಿದ್ರೆಯಲ್ಲಿದ್ದ ಸರಕಾರಕ್ಕೆ ಚಾಟಿ ಏಟು ನೀಡಿ ಎಚ್ಚರಿಸುವಲ್ಲಿ ಈ ರಾಮದುರ್ಗ ಬಂದ್ ಕಾರ್ಯಕ್ರಮ ಭಾರಿ ಯಶಸ್ವಿಯಾಯಿತು.



............ಧಾರವಾಡ ಸಮ್ಮೇಳನ

ಪುಟ 10 ರಿಂದ

ಒಂದು ಮುಖ್ಯ ಮೈಲುಗಲ್ಲಾಗಿದೆ. ಸಮ್ಮೇಳನದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ನಿತ್ಯಾನಂದ ಸ್ವಾಮಿ ಹಾಗೂ ಬಿ. ಮಾಧವ ಹಾಜರಿದ್ದು ಮಾರ್ಗದರ್ಶನ ಮಾಡಿದರು.

ವರದಿಯ ಕುರಿತು ಚಿಂತನ ಮಂಥನ : ಮೇಲಿನ ರಾಜಕೀಯ ಸಮೀಕ್ಷೆಯ ಆಧಾರದಲ್ಲಿ ನಮ್ಮ ಮುಂದಿನ ಸಂಘಟನಾ ಕರ್ತವ್ಯಗಳನ್ನು ಗುರ್ತಿಸಿಕೊಳ್ಳಬೇಕೆಂಬ ಮಾರ್ಗದರ್ಶನದ ಆಧಾರದಲ್ಲಿ 1998-2001ರ ಅವಧಿಗೆ ಸಂಬಂಧಿಸಿದ 56 ಪುಟಗಳ ವರದಿಯನ್ನು ಜಿಲ್ಲಾ ಸಮಿತಿಯ ಪರವಾಗಿ ಕಾರ್ಯದರ್ಶಿ ಸಿಆರ್.ಭಟ್ ಮಂಡಿಸಿದರು. ಸಮ್ಮೇಳನದ ಮೊದಲ ದಿನ ಸಂಜೆ 2 ಘಂಟೆಗಳ ಕಾಲ 41 ಪ್ರತಿನಿಧಿಗಳು ಪಕ್ಷದ ದಿವಂಗತ ಪಾಲಿಟ್ ಬ್ಯೂರೋ ಸದಸ್ಯರಾದ ಸಮರ ಚೌಧರಿ, ಶೈಲೇನ್ ದಾಸ್ ಗುಪ್ತಾ ಮತ್ತು ಹನುಮಂತರಾವ್ ಹೆಸರಿನ ಮೂರು ಗುಂಪುಗಳಲ್ಲಿ ವರದಿಯ ಮೇಲೆ ಚರ್ಚೆ ನಡೆಸಿದರು. ಮರು ದಿನ ಮುಂಜಾನೆಯ ಅಧಿವೇಶನದಲ್ಲಿ ಮೂರು ಘಂಟೆಗಳ ಕಾಲ 17 ಪ್ರತಿನಿಧಿಗಳು ವರದಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದರು. ಕೆಲವು ತಿದ್ದುಪಡಿಗಳೊಂದಿಗೆ ವರದಿ ಸಾರ್ವಾನು ಮತದಿಂದ ಸಮ್ಮೇಳನ ಅಂಗೀಕರಿಸಿತು.

ಭಾರೀ ಭಾರ ಎತ್ತಲು ಬಲವಾದ ಸನ್ನೆ ಗೋಲುಬೇಕು. ಸಮಕಾಲೀನ ಸವಾಲುಗಳನ್ನು ಎದುರಿಸಲು ಬಲಿಷ್ಠ ಪಕ್ಷದ ಸಂಘಟನೆ ಬೇಕು.

ನಮ್ಮ ಜಿಲ್ಲಾ ಸಮಿತಿಯ ಪ್ರದೇಶದಲ್ಲಿ ಕೆಲವೆಡೆಗಳಲ್ಲಾದರೂ ರಾಜಕೀಯವಾಗಿ ಪಕ್ಷ ಮಧ್ಯ ಪ್ರವೇಶಿಸುವಂತೆ ಮಾಡಬೇಕಾಗಿದೆ. ಭಾರೀ ಭಾರ ಎತ್ತಲು ಬಲವಾದ ಸನ್ನೆ ಗೋಲು ಬೇಕಾದಂತೆ, ನಮ್ಮ ಮೇಲಿನ ಭಾರೀ ಜವಾಬ್ದಾರಿಯ ಕರ್ತವ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ನಮ್ಮ ಪಕ್ಷವನ್ನು ಈ ಪ್ರದೇಶದಲ್ಲಿ ಬಲಿಷ್ಠವಾಗಿ ಕಟ್ಟಿ ಬೆಳೆಸಬೇಕಾಗಿದೆ. ಈ ದಿಸೆಯಲ್ಲಿ ಕೆಲವು ಮುಖ್ಯ ಸಂಘಟನಾ ಕರ್ತವ್ಯಗಳನ್ನು ಸಂಘಟನಾ ಕೆಲಸದ ವಿಮರ್ಶೆ ವರದಿಯಲ್ಲಿ ಗುರುತಿಸಿಕೊಳ್ಳಲಾಯಿತು. ಜಿಲ್ಲಾ ಸಂಘಟನಾ ಸಮಿತಿಗೆ ಸದ್ಯ 9 ಸದಸ್ಯರನ್ನು ಆರಿಸಲಾಗಿದ್ದು, ಮುಂದೆ 3 ಸದಸ್ಯರನ್ನು ಸೇರಿಸಿಕೊಳ್ಳಲು ನಿರ್ಧರಿಸಲಾಯಿತು. ಸಿಆರ್. ಭಟ್ ಅವರನ್ನು ಜಿಲ್ಲಾ ಕಾರ್ಯದರ್ಶಿಯಾಗಿ ಸರ್ವಾನು ಮತದಿಂದ ಮತೆ ಆರಿಸಲಾಯಿತು.

ಗ್ವಂತನಮೋಗೆ ತಾಲಿಬಾನಿಗಳು ಕ್ಯೂಬಾದ ವಿರುದ್ಧ ಭಯೋತ್ಪಾದಕ ಅಮೇರಿಕಾ ಸಂಚು

ಮೋಹನ್ ಕುಡ್ಲ

ತನ್ನನ್ನು 'ಜಗತ್ತಿನ ವಿಮೋಚನಾಕಾರ' ಎಂಬಂತೆ ಬಿಂಬಿಸಿಕೊಳ್ಳುತ್ತಿರುವ ಅಮೆರಿಕಾ ಕ್ಯೂಬಾದ ಹಕ್ಕುಗಳ ಮೇಲೆ ಮತ್ತೊಮ್ಮೆ ಎರಗುವ ಹುನ್ನಾರ ನಡೆಸಿದೆ. ಜಗತ್ತಿನಲ್ಲಿ ತನಗೆ ಬೇಡವಾದ ಎಲ್ಲರನ್ನು ಭಯೋತ್ಪಾದಕರಂತೆ ಬಣ್ಣಿಸುತ್ತಿರುವ ಅಮೆರಿಕಾ ತನ್ನ ಪ್ರತಿಯೊಂದು ನಡೆಯಲ್ಲೂ ತಾನೇ ಜಗತ್ತಿನ ಭಯೋತ್ಪಾದಕ ಎಂಬುದನ್ನು ಸಾರಿ ಹೇಳುತ್ತಿದೆ.

ತನ್ನ ಜೊತೆ ಇರುವವರು ಶಾಂತಿ ಸ್ಥಾಪನೆಯ -ಪರ ತನ್ನ ಜೊತೆ ಇಲ್ಲದವರು ಭಯೋತ್ಪಾದಕರ ಪರ ಎನ್ನುವ ವಾದವನ್ನು ಹುಟ್ಟುಹಾಕಿರುವ ಅಮೆರಿಕಾ ಕ್ಯೂಬಾದಲ್ಲಿನ ಗ್ವಂತನಮೋ ಪ್ರದೇಶದಲ್ಲಿ ತಾನು ಸ್ಥಾಪಿಸಿರುವ ನೌಕಾನೆಲೆಯಲ್ಲಿ ಈಗ ಹೊಸ ಕರಾಳ ತಂತ್ರವನ್ನು ನೇಯುತ್ತಿದೆ.

ಅಫಘಾನಿಸ್ತಾನದ ಮೇಲೆ ಸೆಪ್ಟೆಂಬರ್ 13 ರ ದಾಳಿಯನ್ನೇ ನೆಪವನ್ನಾಗಿಟ್ಟುಕೊಂಡು ಧಾಳಿ ಮಾಡಿದ ಅಮೆರಿಕ ಈಗ ಅಲ್ಲಿ ಸೆರೆಸಿಕ್ಕ ತಾಲಿಬಾನಿಗಳನ್ನು, ಅಲ್-ಖಯೀದಾ ಸಂಘಟನೆಯ ಸದಸ್ಯರನ್ನು ಕ್ಯೂಬಾದಲ್ಲಿನ ತನ್ನ ಮಿಲಿಟರಿ ನೌಕಾನೆಲೆಗೆ ಸಾಗಿಸುವುದಾಗಿ ಬಹಿರಂಗವಾಗಿ ಸಾರಿದೆ. ನ್ಯೂಯಾರ್ಕ್‌ನ ಮೇಲೆ ಭಯೋತ್ಪಾದಕರು ಮಾಡಿದ ಧಾಳಿಯನ್ನೇ ನೆಪವನ್ನಾಗಿರಿಸಿಕೊಂಡು ಅಮೆರಿಕಾ ಅನೇಕ ಲೆಕ್ಕಗಳನ್ನು ಚುಕ್ತಾ ಮಾಡಲು ಹೊರಟಿದೆ. ತನಗೆ ಇರುವ ವಿರೋಧಗಳನ್ನು ಇಲ್ಲವಾಗಿಸುವ, ತನಗೆ ಬೇಕಾದ ತೈಲವನ್ನು ಪಡೆಯುವ, ಬೇಕೆಂದೆಡೆ ಕೈಗೊಂಬೆ ಸರ್ಕಾರಗಳನ್ನು ಸ್ಥಾಪಿಸುವ, ಅನೇಕ ದೇಶಗಳ ನಡುವೆ ಯುದ್ಧ ಸೃಷ್ಟಿಸುವ, ತನಗೆ ಬೇಕಾದಂತೆಯೇ ಜಗತ್ತು ನಡೆಯಬೇಕೆಂಬ ವ್ಯವಸ್ಥೆಯನ್ನು ಜಾಗರೂಕವಾಗಿ ರೂಪಿಸುತ್ತಿದೆ.

ಅಮೆರಿಕಾ ದಿಗ್ಬಂಧನಗಳನ್ನು ಹೇರಿ ಉಸಿರು ಗಟ್ಟಿಸಿದರೂ ಸಹಾ ಗಟ್ಟಿಯಾಗಿ ನಿಂತಿರುವ, ಅಮೆರಿಕಾ ಸಾಮ್ರಾಜ್ಯಶಾಹಿಯ ಕುರೂಪವನ್ನು ಬಯಲು ಮಾಡುತ್ತಿರುವ, ಜಗತ್ತಿನ ಎಲ್ಲೆಡೆ ಅಮೆರಿಕಾ ವಿರುದ್ಧ ಅಭಿಪ್ರಾಯ ರೂಪಿಸುತ್ತಿರುವ ಕ್ಯೂಬಾದ ವಿರುದ್ಧ ಅಮೆರಿಕಾ ಸದಾ ಕೆಂಗಣ್ಣು ಬೀರುತ್ತಿದೆ. ಆದರೆ ಕ್ಯೂಬಾದ ಶಕ್ತಿ ಅರಿತು ಅಮೆರಿಕಾ ಮಿಸುಕಾಡದೆ ಇತ್ತು. ಈಗ ನ್ಯೂಯಾರ್ಕಿನ ಧಾಳಿಯನ್ನು ನೆಪವಾಗಿಟ್ಟುಕೊಂಡು ಕ್ಯೂಬಾದ ಉಸಿರುಗಟ್ಟಿಸುವ ಕುತಂತ್ರಕ್ಕೆ ಸಜ್ಜಾಗಿದೆ.

ಗ್ವಂತನಮೋ ಕ್ಯೂಬಾದ ಮಗ್ಗುಲ ಮುಳ್ಳು. ಕ್ಯೂಬಾದ ಬುಡದಲ್ಲಿರುವ ಈ ಪ್ರದೇಶವನ್ನು ಅಮೆರಿಕಾ ದಬ್ಬಾಳಿಕೆಯ ಮೂಲಕ ಆಕ್ರಮಿಸಿಕೊಂಡಿದೆ. ಈ ಪ್ರದೇಶದಲ್ಲಿ ನೌಕಾನೆಲೆ ಸ್ಥಾಪಿಸುವುದರ ಮೂಲಕ ಕ್ಯೂಬಾ ವಿರೋಧಿಗಳನ್ನು ತಯಾರು ಮಾಡುವ ಕಾರ್ಖಾನೆಯಾಗಿ ಬೆಳೆದು ನಿಂತಿದೆ. ಈಗ ಅಫಘಾನಿಸ್ತಾನದಲ್ಲಿ ಬಂಧಿಸಿದ ತಾಲಿಬಾನಿಗಳನ್ನು ಉಗ್ರಗಾಮಿ ಸಂಘಟನೆಗಳವರನ್ನು ಇಲ್ಲಿಗೆ ನೇರವಾಗಿ ರವಾನಿಸಲು ನಿರ್ಧರಿಸಿದೆ.

ಮೇಲ್ನೋಟಕ್ಕೆ ಇದು ಸರಳವಾಗಿ ಕಂಡರೂ ಸಹಾ ಅಮೆರಿಕಾಗೆ ಬೇಕಿರುವುದು ಒಂದು ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆಯುವುದು. ಗ್ವಂತನಮೊದಲ್ಲಿ ತಾಲಿಬಾನಿಗಳನ್ನು ಇರಿಸಿದಲ್ಲಿ ಕ್ಯೂಬಾ ಖಡಾಖಂಡಿತವಾಗಿ ವಿರೋಧಿಸುತ್ತದೆ. ಮುಂದಿನ ದಿನಗಳಲ್ಲಿ ಇದೇ ತಾಲಿಬಾನಿಗಳಿಗೆ ತರಬೇತಿ ನೀಡಿ ಕ್ಯೂಬಾದೊಳಗೆ ನುಗ್ಗಿಸಿದಲ್ಲಿ ಹೊಸ ಅಸ್ಥಿರತೆ ಉಂಟು ಮಾಡಬಹುದು. ಈ ಮಧ್ಯೆ ಕ್ಯೂಬಾ ಅಫಘಾನಿ ಉಗ್ರರ ಬಗ್ಗೆ ನೇರ ಸಂಘರ್ಷಕ್ಕಿಳಿದಲ್ಲಿ ಜಗತ್ತಿನ ಮುಂದೆ ಕ್ಯೂಬಾ ಇಸ್ಲಾಂವಿರೋಧಿ ರಾಷ್ಟ್ರ ಎಂಬ ಹಣೆಪಟ್ಟಿಯನ್ನು ಕಟ್ಟಿ ಕ್ಯೂಬಾದ ವಿರುದ್ಧ ಜಗತ್ತನ್ನು ಎತ್ತಿ ಕಟ್ಟಬಹುದು ಎಂಬುದು ಅಮೆರಿಕಾದ ಗುಪ್ತ ಲೆಕ್ಕಾಚಾರ.

ಅಮೆರಿಕಾ ಎಂತಹ ಭಯೋತ್ಪಾದಕ ಎಂಬುದಕ್ಕೆ ಗ್ವಂತನಮೋಗೆ ನುಗ್ಗಿ ಕುಳಿತಿರುವುಕ್ಕಿಂತ ಇನ್ನೊಂದು ಉದಾಹರಣೆ ಬೇಡ. ಕ್ಯೂಬಾವನ್ನು 40 ವರ್ಷಗಳ ಕಾಲ ಸುಲಿದು ತಿಂದ ಸ್ಪೇನ್ ವಿರುದ್ಧ ಕ್ಯೂಬಾ ಜನತೆ ಹೋರಾಟಕ್ಕಿಳಿದಿದ್ದರು. ಜಯ ಇನ್ನೇನು



ಕೈಗೆ ಸಿಕ್ಕಿತು ಎನ್ನುವಾಗ ಅಮೆರಿಕಾ ಮೂಗು ತೂರಿಸಿತು. ದಿಢೀರನೆ ಸ್ಪೇನ್ ಮೇಲೆ ಆಕ್ರಮಣ ನಡೆಸಿತು. ಸ್ಪೇನ್ ಜೊತೆ ಮಾತುಕತೆ ನಡೆಸುವಾಗ ಇದೇ ಜಗತ್ತಿಗೆ ಕ್ಯೂಬಾವನ್ನು ಸ್ಪೇನ್‌ನ ಕೈಯಿಂದ ರಕ್ಷಿಸಲು ತಾನು ಈ ಹರಸಾಹಸ ಮಾಡುತ್ತಿರುವುದಾಗಿ ಬಿಂಬಿಸಿಕೊಂಡಿತು. ಆದರೆ ಮಾಡಿದ್ದು ಮಾತ್ರ ಕ್ಯೂಬಾದ ಸಂಪತ್ತು ದೋಚಲು ಅಲ್ಲಿಯೇಹೋಗಿ ನೆಲೆ ನಿಲ್ಲುವ ಕೆಲಸ.

ಸ್ಪೇನ್‌ನೊಂದಿಗೆ ಮಾಡಿಕೊಂಡ ಪ್ಲಾಟ್ ಒಪ್ಪಂದದಲ್ಲಿ ಗ್ವಂತನಮೊದಲ್ಲಿ ಕ್ಯೂಬಾ ಅಮೆರಿಕಾ ನೌಕಾನೆಲೆ ಸ್ಥಾಪಿಸಲು ಜಾಗ ಕೊಡಲೇಬೇಕು ಎಂದು ತಾಕೀತು ಮಾಡಿತು. ಕ್ಯೂಬಾ ಸಂಬಂಧ ನಡೆದ ಮಾತುಕತೆಯಲ್ಲಿ ಭಾಗವಹಿಸಲು ಕ್ಯೂಬಾಗೆ ಅವಕಾಶವನ್ನೇ ಕೊಡದೆ ಅಮೆರಿಕಾ-ಸ್ಪೇನ್ ಎಲ್ಲಿಯೋ ಕುಳಿತು ಮಾತುಕತೆಗೆ ಸಹಿ ಹಾಕಿದವು. ಕ್ಯೂಬಾದ ರಕ್ಷಣೆಗಾಗಿ ಎಂಬ ನೆಪ ಒಡ್ಡಿ ಬೇಡಬೇಡವೆಂದರೂ ಗ್ವಂತನಮೋದಲ್ಲಿ ನೌಕಾನೆಲೆಯನ್ನು ಮಾನವಹಕ್ಕುಗಳ ಸರದಾರ, ಜಗತ್ತಿನ ಶಾಂತಿ ರಕ್ಷಕ ಎಂದು ಸ್ವಯಂಘೋಷಿಸಿಕೊಳ್ಳುವ ಅಮೆರಿಕ ಸ್ಥಾಪಿಸಿಯೇ ಬಿಟ್ಟಿತು.

5 ವರ್ಷ ಆಗುತ್ತಿದ್ದಂತೆಯೇ ಅಮೆರಿಕಾದ ಯುದ್ಧ ನೌಕೆಗಳು, 500 ಜಲಾಂತರಗಾಮಿ ನೌಕೆಯನ್ನು ಗ್ವಂತನಮೋಗೆ ತರಲಾಯಿತು. ಕ್ಯೂಬಾದ ಮಗ್ಗುಲಲ್ಲಿಯೇ ಕ್ಯೂಬಾದ ರಕ್ಷಣೆಯ ಹೆಸರಿನಲ್ಲಿಯೇ ಕ್ಯೂಬಾ ವಿರುದ್ಧ ಈ ನೆಲೆ ಸ್ಥಾಪಿಸಲಾಯಿತು. ಯುದ್ಧ ನೌಕೆ ರಾಜಕಾರಣ ಆರಂಭವಾಯಿತು. ಇಲ್ಲಿರುವ ಅಮೆರಿಕಾ ಪಡೆಗಳಿಗೆ ಕ್ಯೂಬಾದ ಶಾಂತಿ ಕದಡುವುದೇ ಕೆಲಸ. ಕ್ಯೂಬಾದಲ್ಲಿ ವಿರೋಧಿಗಳನ್ನು ಹುಟ್ಟುಹಾಕುವ ಅಮೆರಿಕಾ ವಿರುದ್ಧದ ಪ್ರತಿಭಟನೆಗಳನ್ನು ಹೊಸಕಿಹಾಕುವ ಕೇಂದ್ರವಾಯಿತು.

ಗ್ವಂತನಮೊ ಈಗ ಅಮೆರಿಕನ್ನರ ಮಹಾನ್ ಅಸ್ತ್ರ. ಸಾವಿರಾರು ಅಮೆರಿಕನ್ನರು ಇಲ್ಲಿ ನೆಲೆ ನಿಂತಿದ್ದಾರೆ. ಅಮೆರಿಕಾದಿಂದಲೇ ಇಲ್ಲಿಗೆ ಆಹಾರ ಹಾರಿ ಬರುತ್ತದೆ, ಕ್ಯೂಬಾ ಹಸಿವಿನಿಂದ ನರಳುತ್ತಿದ್ದರೂ.

ಗ್ವಂತನಮೋ ಮೇಲೆ ಅಮೆರಿಕಾಗೆ ಯಾವುದೇ ಹಕ್ಕಿಲ್ಲ ಎಂಬುದೇ ಕ್ಯೂಬಾದ ವಾದ. ಆದ ಕಾರಣ ಅಮೆರಿಕಾ ತಾಲಿಬಾನಿಗಳನ್ನು, ಭಯೋತ್ಪಾದಕರನ್ನು ಎಲ್ಲಿಯಾದರೂ ಇಟ್ಟುಕೊಳ್ಳಲಿ, ಗ್ವಂತನಮೊದಲ್ಲಿ ಅಲ್ಲ ಎಂದು ಪ್ರತಿಭಟಿಸಿದ ಕ್ಯೂಬಾವನ್ನು ದಿಕ್ಕರಿಸಿ ಗ್ವಂತನಮೋವನ್ನು ಬೆದರಿಕೆಯ ಮೂಲಕ ಪಡೆದ ಅಮೆರಿಕಾ ಎಕರೆಗೆ ಒಂದು ಡಾಲರ್ ಹಣ ನೀಡುವ 'ಉದಾರ ಮನಸ್ಸನ್ನು' ತೋರಿಸಿದೆ.

ಇದಕ್ಕಾಗಿಯೇ ಕ್ಯೂಬಾ 1976 ರಲ್ಲಿ ಒಂದು ವಿಶೇಷ ಪ್ರಸ್ತಾಪವನ್ನು ಜನರ ಮುಂದಿಟ್ಟಿತು. ಕ್ಯೂಬಾದಲ್ಲಿ ಕ್ರಾಂತಿಯಾಗುವ ಮುನ್ನ ಯಾವುದೇ ಸರ್ಕಾರ ಮಾಡಿಕೊಂಡ ಎಲ್ಲಾ ಒಪ್ಪಂದವನ್ನು ತಿರಸ್ಕರಿಸಲಾಗುವುದು ಎಂಬ ಒಪ್ಪಂದಕ್ಕೆ ಕ್ಯೂಬಾದ 97.7 ಮಂದಿ ಒಪ್ಪಿಗೆಯನ್ನು ನೀಡಿದರು. ಅಮೆರಿಕಾಗೆ ಅಂದೇ ನೀವು ಗ್ವಂತನಮೋದಲ್ಲಿರುವುದು ಕ್ಯೂಬಾದ ಜನರ ಆಶಯಕ್ಕೆ ವಿರುದ್ಧ ಎಂದು ತಿಳಿಹೇಳಲಾಯಿತು. ಪಾಪ ಈ ಶಾಂತಿ ರಕ್ಷಕನಿಗೆ ಇದು ಹೇಗೆ ಕೇಳಬೇಕು. ಈಗ ಬೇಕೆಂದೇ ಅಮೆರಿಕಾ ಅಂತರಾಷ್ಟ್ರೀಯ ಬಿಕ್ಕಟ್ಟನ್ನು ತಾಲಿಬಾನಿಗಳ ನೆಪದಲ್ಲಿ ಹುಟ್ಟುಹಾಕುತ್ತಿದೆ.

○

......ಪೋಲೀಸರು ಮತ್ತು ಪತ್ರಿಕೆಗಳು ಶಾಮೀಲು

ಪುಟ 7 ರಿಂದ

ಸಂಖ್ಯೆಯಲ್ಲಿ ಜನರು ಸೇರಿದ್ದರು. ಸಭೆ ನಡೆಸಿದರು. ಅದೇ ರೀತಿ ಭಾಗಮಂಡಲದಲ್ಲಿ ಬಾಜಪದವರು ತಮ್ಮ ಸಭೆಯನ್ನು ಅಲ್ಲಿ ನಡೆಸಿದರು. ಆದರೆ ಜಿಲ್ಲೆಯಾದ್ಯಂತ ಸೆಕ್ಷನ್ 144 ಜಾರಿಯಲ್ಲಿತ್ತು. ಆದರೆ ಭಾಗಮಂಡಲದಲ್ಲಿ ಸೇರಿದ್ದ ಭಾಜಪದವರಿಗೆ ಇದು ಅನ್ವಯವಾಗಲಿಲ್ಲ. ಕೋಡಿ ಪೊನ್ನಪ್ಪನವರ ನೇತೃತ್ವದಲ್ಲಿ ಭಾಗಮಂಡಲದಲ್ಲಿ ಮೆರವಣಿಗೆ ಮೂರು ಬಾರಿ ನಡೆಯಿತು. ಮೀಸಲು ಪಡೆಯ ಪೋಲೀಸ್ ತುಕಡಿ ಅಲ್ಲಿ ಸೇರಿದ್ದ ಜನರಿಗೆ ಹೆದರಿ ಪಲಾಯನ ಮಾಡಿತು. ಮೆರವಣಿಗೆಯಲ್ಲಿ ಒಂದಷ್ಟು ಸಮಾಜಘಾತುಕ ಶಕ್ತಿಗಳು ಸೇರಿಕೊಂಡು ಲೂಟಿ ಮಾಡಿತು. ಇದಕ್ಕೆ ಯಾರು ಜವಾಬ್ದಾರರು?

ಕೊಟ್ಟಮುಡಿಯ ದೇವಾಲಯದಲ್ಲಿ ಸೇರಿದ್ದ ಸಹಸ್ರ ಸಂಖ್ಯೆಯ ಜನರು ಮೆರವಣಿಗೆ ಮಾಡಿದರು. ಮನೆಗಳಿಗೆ ಬೆಂಕಿ ಇಟ್ಟರು. ಪೋಲೀಸರು ಅಶ್ರುವಾಯು ಹಾರಿಸಿದರು. ಆದರೆ ಇವೆಲ್ಲಾ ಯಾರಿಗೆ? ಗುಂಪು ಚದುರಿಸಲು ಅವರು ಗಾಳಿಯಲ್ಲಿ ಗುಂಡು ಹಾರಿಸಲಿಲ್ಲ. ಅಶ್ರುವಾಯು ಸಿಡಿಸಲಿಲ್ಲ. ಗುಂಪಿನಲ್ಲಿ ಹೋಗುತ್ತಿದ್ದ ಜನರು ಮಾಡುತ್ತಿದ್ದ ದಾಂಧಲೆಯನ್ನು ದೂರದಲ್ಲಿ ಕುಳಿತು ನೋಡುತ್ತಿದ್ದವರ ಮೇಲೆ ಪೋಲೀಸರು ಅಶ್ರುವಾಯು ಸಿಡಿಸಿದರು. ಪೋಲೀಸರು ಸಿಡಿಸಿದ ಅಶ್ರುವಾಯುವಿನ ಹಾಗೂ ಗುಂಡಿನ ಖಾಲಿ ಕಾಡತೂಸುಗಳು ನೂರಾರು ಪಕ್ಕದ ಕಾಫಿ ತೋಟದಲ್ಲಿ ಮನೆಯೊಳಗೆ ಅನಾಥವಾಗಿ ಈಗಲೂ ಬಿದ್ದಿರುವುದು ಇದಕ್ಕೆ ಸಾಕ್ಷಿ.

ಆ ಮೂಲಕ ಬಜರಂಗದಳದ ಡೆಪ್ಯುಟಿ ಕಮಾಂಡರ್‌ನಂತೆ ಮಾದಯ್ಯ ವರ್ತಿಸಿದರು.

ಮಡಿಕೇರಿಯಲ್ಲಿ ರಂಜಾನ್ ಹಬ್ಬದ ಪ್ರಾರ್ಥನೆ ಮುಗಿಸಿ ಮಸೀದಿಯಿಂದ ಹೊರಗೆ ಬರುತ್ತಿದ್ದ ಮುಸ್ಲಿಮರ ಮೇಲೆ ಸಂಘಪರಿವಾರದ ಬಂಟನಾದ ಸಬ್‌ಇನ್ಸ್‌ಪೆಕ್ಟರ್ ಮಾದಯ್ಯ ಮತ್ತು ಅವನ ತಂಡ ಸುಮ್ಮಸುಮ್ಮನೇ ಹಲ್ಲೆ ಮಾಡಿ ಪೆಟ್ಟು ತಿಂದಿದ್ದಾರೆ. ತಕ್ಷಣ ಮಾದಯ್ಯ ಮತ್ತು ಅವನ ತಂಡದವರು ಶಿಸ್ತಾಗಿ ತಲೆ, ಕೈ, ಕಾಲುಗಳಿಗೆ ಬ್ಯಾಂಡೇಜು ಅಂಟಿಸಿಕೊಂಡಿದ್ದಾರೆ. ಪೋಟೋಗಳಲ್ಲಿ ಕಂಡ ಬ್ಯಾಂಡೇಜುಗಳಾಗಲೀ ಅದರೊಳಗೆ ಇದ್ದವೆನ್ನಲಾದ ಗಾಯಗಳಾಗಲಿ ಸತ್ಯಹರಿಶ್ಚಂದ್ರನ ಕೃಪೆಯಿಂದ ಮರುದಿನವೇ ನಾಪತ್ತೆಯಾಗಿವೆ. ಅಲ್ಲದೇ ಈ ಮಾದಯ್ಯ ತನ್ನ ದುರಾಲೋಚನೆಗೆ ತೋಚಿದ ಸುಮಾರು ಇಪ್ಪತ್ತೈದು ಮುಸ್ಲಿಮರ ಮೇಲೆ ಮೊಕ್ಕದ್ದಮೆ ದಾಖಲಿಸಿ ಈಗ ಜೈಲಿಗೆ ತಳ್ಳಿಸಿದ್ದಾನೆ.

ಕುಟ್ಟಾದಲ್ಲಿ ಸ್ಥಳೀಯರು ಹಾಗೂ ಹೊರಗಿನವರು ಮಸೀದಿಗೆ ಹಾನಿ ಮಾಡಿದರು. ಮೂಕ ಪ್ರೇಕ್ಷಕರಾಗಿ ಇದನ್ನು ನೋಡುತ್ತಿದ್ದ ಪೋಲೀಸರು ಗಲಭೆಕೋರರು ತಮ್ಮ ದಾಂಧಲೆ ಮುಗಿಸಿದ ನಂತರ ಅವರನ್ನುದ್ದೇಶಿಸಿ 'ನೀವು ಇನ್ನೂ ಹೋಗಿ ಕೆಲವೇ ಕ್ಷಣಗಳಲ್ಲಿ ಪೋಲೀಸ್ ವ್ಯಾನ್ ಬರುತ್ತದೆ' ಎಂದು ಹೇಳಿದರು.

ಪೊನ್ನಂಪೇಟೆ ಹಾಗೂ ಬಾಳೆಲೆಯಲ್ಲಿ ಘಟನೆ ನಡೆಯುವಾಗ ಪೊನ್ನಂಪೇಟೆ ಪೋಲೀಸರಿಗೆ ಪುಕಾರು ನೀಡಿದರೆ ಅಲ್ಲಿಯ ಠಾಣಾಧಿಕಾರಿ ಗಣೇಶ ಕ್ಯಾರೆ ಅನ್ನಲಿಲ್ಲ.

9ರಂದು ಉದ್ರಿಕ್ತ ವಾತಾವರಣ ಇರುವಾಗ ಹೆಚ್ಚುವರಿ ಪೋಲೀಸರನ್ನು ಕರೆಸುವುದಿಲ್ಲವೇ ಎಂದು ಪೋಲಿಸ್ ವರಿಷ್ಠಾಧಿಕಾರಿ ಉಮೇಶ್ ಕುಮಾರ್‌ನನ್ನು ಪ್ರಶ್ನಿಸಿದಾಗ ಬಿಹಾರ್‌ನಲ್ಲಿ ಇದೆಲ್ಲಾ ಮಾಮೂಲಿ ವಿಚಾರ ಎಂದು ತೀರಾ ಅಸಡ್ಡೆ ಪ್ರದರ್ಶಿಸಿದರು.

○

..............ತ್ರಿಶೂಲ ದೀಕ್ಷೆ

ಪುಟ 6 ರಿಂದ

ಕಾರ್ಯಕರ್ತನನ್ನು ಬಂಧಿಸಿದರೆ, ಅವನನ್ನು ಬಿಡುಗಡೆ ಮಾಡುವ ತನಕ ಸ್ಥಳೀಯ ಪೇಟೆಯನ್ನು, ವ್ಯಾಪಾರ ವಹಿವಾಟವನ್ನು ಬಂದ್ ಮಾಡಲಾಗುತ್ತದೆ. ಇತ್ತೀಚೆಗೆ ಜಹಾಜಪುರದ ದರ್ಗಾವೊಂದನ್ನು ಭಗ್ನಗೊಳಿಸಿದ ಪ್ರಕರಣದಲ್ಲಿ ತ್ರಿಲೋಕ್ ಜೋಶಿ ಎಂಬ ಭಜರಂಗದಳದ ಕಾರ್ಯಕರ್ತನನ್ನು ಬಂಧಿಸಲಾಗಿತ್ತು. ಆದರೆ ಸ್ಥಳೀಯ ಮಾರುಕಟ್ಟೆಯನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿರುವ ಈ ಜನ ಮಾರುಕಟ್ಟೆಯನ್ನು ಬಂದ್ ಮಾಡುವ ಮೂಲಕ ಒತ್ತಡ ಹೇರಿ ಆರೋಪಿಯನ್ನು ಬಿಡುಗಡೆ ಮಾಡಿಸಿಕೊಂಡರು. ಹೀಗೆ ಅಪರಾಧಿಗಳು ಯಾವುದೇ ಕಾನೂನು ಕ್ರಮಕ್ಕೆ ಒಳಪಡದೆ ಹೋಗುವುದರಿಂದ ರಾಜಸ್ತಾನದಲ್ಲಿ ಮುಸಲ್ಮಾನರ ಮೇಲೆ ಮತ್ತು ಅವರ ಪ್ರಾರ್ಥನಾ ಮಂದಿರಗಳ ಮೇಲೆ ನಿರಾಂತಕವಾಗಿ ದಾಳಿ ದಬ್ಬಾಳಿಕೆ ನಡೆಯುತ್ತಿದೆ. ಗಲಭೆಗಳು ನಡೆದಾಗ ಕೆಲವೊಮ್ಮೆ ಕಾಂಗ್ರೆಸ್ ಕಾರ್ಯಕರ್ತರೂ ಸಹ ಭಜರಂಗದಳದ ಗೂಂಡಾಗಳನ್ನು ಬೆಂಬಲಿಸುತ್ತಾರೆ. ಕಾಂಗ್ರೆಸ್ಸಿನವರ ಈ ವಿಶ್ವಾಸಘಾತುಕತನದಿಂದ ನೊಂದುಕೊಳ್ಳುವ ಅಲ್ಪಸಂಖ್ಯಾತರು ಮುಖ್ಯವಾಹಿನಿಯಿಂದ ಹೆಚ್ಚು ಹೆಚ್ಚು ದೂರ ಸರಿಯುತ್ತಾರೆ. ಕೆಲವು ಕಡೆಗಳಲ್ಲಿ ಮುಸ್ಲಿಂ ಲೀಗ್ ಪ್ರತಿಕಾರದ ಕ್ರಮವಾಗಿ ಮುಸಲ್ಮಾನರಿಗೆ 'ಸುಲೇಮನಿ ತಲ್ವಾರ್' ಗಳನ್ನು ವಿತರಣೆ ಮಾಡುತ್ತಿದೆ ಎಂದು ಸಹ ವರದಿಯಾಗಿದೆ. ಆಗ ಇದು ಸನ್ನಿವೇಶವನ್ನ ಇನ್ನೂ ಭಯಾನಕಗೊಳಿಸಲಿದೆ.

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್. ಸೂರ್ಯನಾರಾಯಣ ರಾವ್
ಸಂಪಾದಕೀಯ ಕಚೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,